Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–25 ಜೂನ್ 19–25, 2023 ಪುಟ 16 ರೂ. 10/–
Volume-17 Issue-25 June 19-25, 2023 Pages:16 Price: 10/-



ಅಕ್ಕಿ ನಿರಾಕರಣೆ: ಜನರ ಹಕ್ಕಿನ ಮೇಲೆ ದಾಳಿ



ಮಣಿಪುರ ಹಿಂಸಾಚಾರ: ಧೃವೀಕರಣ ರಾಜಕೀಯದ ದುಷ್ಫಲ

ಗೋಡ್ಸೆ ವೈಭವೀಕರಿಸುವ ಪಕ್ಷ

ರೈಲ್ವೆ ಮತ್ತು ರಾಜಕೀಯ

ಕಾರ್ಪೋರೇಟ್‌ಗಳ ಲಾಭಕ್ಕೆ ರೈತರ ಕಡೆಗಣನೆ

ಸಾವಿನ ನೆರಳಲ್ಲಿ ಪುಟ್ಟ ಹಕ್ಕಿಯ ಹಾಡು – ಆನ್ ಫ್ರಾಂಕ್

ಈ ಎಳೆ ನಗೆಯ ಮುದ್ದು ಪೋರಿ ಬದುಕಿದ್ದರೆ ಇಂದಿಗೆ 99 ವರ್ಷ. ಈ ಬಾಲಕಿ ಎಳೆ ವಯಸ್ಸಿನಲ್ಲೇ ಹತ್ಯೆಯಾಗುವ ಮೊದಲು ತನ್ನ ಬಾಲ ಬರಹದಿಂದ ಜಗತ್ತನ್ನು ಎಚ್ಚರಿಸಿದವಳು. ಇವಳ ಬರಹ ಮತ್ತದರ ಸುತ್ತಲಿನ ಎಲ್ಲ ಘಟನೆಗಳೂ ಇಂದು ನಮಗೆ ಬಹಳ ಮುಖ್ಯವಲ್ಲವೇ?

ಆಕೆ Anne Frank, ಹಿಟ್ಲರ್ ನ ಕ್ರೌರ್ಯಕ್ಕೆ ನಲುಗಿದವಳು.

ಆಕೆಯ ಕುರಿತ J Balakrishna ರವರ ಲೇಖನ ಇಲ್ಲಿದೆ:

ಜಿ.ಎನ್.ನಾಗರಾಜ್ ರವರ ವಾಲ್ ನಿಂದ

The Diary of Young Girl – ಅನ್ ಫ್ರಾಂಕ್ ಹಿಟ್ಲರ್ ನ ಸಮಯದಲ್ಲಿ ಜರ್ಮನಿಯಲ್ಲಿದ್ದ ಹದಿಮೂರು ವರ್ಷದ ಯೆಹೂದಿ ಬಾಲಕಿ, ಹಿಟ್ಲರನ ನಾತ್ಸಿ ಕ್ರೌರ್ಯಕ್ಕೆ ನಲುಗಿದವಳು. ಇದು ಅಕೆ ಬರೆದ ದಿನಚರಿ. ಆನ್ ಫ್ರಾಂಕ್ ಕುರಿತು ನಾನು 1989ರಲ್ಲಿ ಬರೆದ ಲೇಖನ. ಇದು ಆಗ ಇಂದೂಧರ ಹೊನ್ನಾಪುರ, ಕೋಟಗಾನಹಳ್ಳಿ ರಾಮಯ್ಯ, ಎನ್.ಎಸ್.ಶಂಕರ್, ಲಕ್ಷ್ಮೀಪತಿ ಕೋಲಾರ ಮುಂತಾದವರು ತರುತ್ತಿದ್ದ 'ಸುದ್ದಿ ಸಂಗಾತಿ' ವಾರ ಪತ್ರಿಕೆಯ 1989ರ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಗಿತ್ತು.

ಈ ಲೇಖನ ನನ್ನ ಇತ್ತೀಚಿನ ಕೃತಿ 'ಮೌನ ವಸಂತ'ದಲ್ಲೂ ಇದೆ.

ಮನುಷ್ಯರ ಕ್ರೌರ್ಯಕ್ಕೆ ಮಿತಿಯೆಲ್ಲಿದೆ? ಕೆಲವೊಬ್ಬರ ಅಹಂಕಾರ ಹುಚ್ಚುತನ ಚರಿತ್ರೆಯ ದಿಕ್ಕನ್ನೇ ಬದಲಿಸಿಬಿಡುತ್ತದೆ. ಜರ್ಮನಿಯ ಹಿಟ್ಲರನ ಯೆಹೂದಿಗಳ ಬಗೆಗಿನ ಜನಾಂಗ ದ್ವೇಷ, ಆರ್ಯನ್ನರ ಹಿರಿತನದ ಹುಚ್ಚು, ಜಗತ್ತನ್ನೆಲ್ಲ ಗೆಲ್ಲಬೇಕೆಂಬ ದುರಾಸೆ ಕಾಲವನ್ನೇ ಬೆದರಿಸಿ ನಿಲ್ಲಿಸಿಬಿಟ್ಟಿತ್ತು. ಸುಂದರವಾದುದನ್ನು ಸೃಷ್ಟಿಸಬಲ್ಲ ಮನುಷ್ಯನ ಕಲ್ಪನಾ ಶಕ್ತಿಗೆ ಕ್ರೌರ್ಯದ ನೂರಾರು ರೂಪಗಳನ್ನು ಸಹ ಸೃಷ್ಟಿಸಬಲ್ಲ ಶಕ್ತಿಯಿದೆ. ಅಂಥ ಕ್ರೂರ ಮನಸ್ಸಿನ ಸೃಷ್ಟಿ 'ಕಾನ್ಸಂಟ್ರೇಶನ್ ಕ್ಯಾಂಪ್'ಗಳು. ಅಲ್ಲಿ ಮನುಷ್ಯನ ಜೀವಕ್ಕೆ ಬೆಲೆಯೇ ಇಲ್ಲ. ಅಂಥ ಕ್ಯಾಂಪಿಗೆ ಸೆರೆಯಾಳಾಗಿ ಹೋದಲ್ಲಿ ಅವನು ಸಾವಿನ ಮನೆ ಹೊಕ್ಕಂತೆಯೇ. ಬದುಕಿ ವಾಪಸು ಬರುವ ಪ್ರಶ್ನೆಯೇ ಇಲ್ಲ. ರಷಿಯಾದ ಲೇಖಕ ಅಲೆಕ್ಸಾಂಡರ್ ಸೊಲ್ಜೆನಿಟ್ಸಿನ್ ಹೇಳಿರುವಂತೆ ಅಂಥ ಕಡೆ ನಮ್ಮ ಸ್ವಂತ ಬದುಕೇ ನಮ್ಮದಾಗಿರುವುದಿಲ್ಲ. ಒಂದು ಅಂದಾಜಿನ ಪ್ರಕಾರ ಹಿಟ್ಲರನ ಕಾನ್ಸಂಟ್ರೇಶನ್ ಕ್ಯಾಂಪ್‌ಗಳಲ್ಲಿ 40 ಲಕ್ಷ ಮಂದಿ ಪ್ರಾಣಬಿಟ್ಟಿದ್ದಾರೆ.

ಆಗ ಎರಡನೇ ಮಹಾಯುದ್ಧದ ಸಮಯ ಆನ್ ಫ್ರಾಂಕ್ ಹದಿಮೂರು ವರುಷದ ಪುಟ್ಟ ಹುಡುಗಿ. ನಮ್ಮ ನಿಮ್ಮ ಹಾಗೆಯೇ ಬದುಕನ್ನು ತೀವ್ರವಾಗಿ ಪ್ರೀತಿಸುತ್ತಿದ್ದವಳು. ಹುಣ್ಣಿಮೆಯ ಚಂದ್ರನಿಗೆ, ಹಾಡು ಹಕ್ಕಿಯ ಇಂಪಾದ ದನಿಗೆ, ಹಚ್ಚ ಹಸಿರ ಪ್ರಕೃತಿಗೆ ಮೈಮರೆಯುತ್ತಿದ್ದವಳು. ಹಿಟ್ಲರ್ ಬದುಕಿದ್ದ ಸಮಯದಲ್ಲಿ ಅವಳು ಯೆಹೂದಿಗಳ ಕುಟುಂಬದಲ್ಲಿ ಹುಟ್ಟಿದ್ದೇ ಅವಳ ತಪ್ಪು. ನಾತ್ಸಿಗಳು ಕಾನ್ಸಂಟ್ರೇಶನ್ ಕ್ಯಾಂಪ್‌ಗಳಲ್ಲಿ ನರಳಿ ನರಳಿ ಸಾಯಬೇಕಾಗಬಹುದೆಂಬ ಹೆದರಿಕೆಯಿಂದ ಆನ್ ಫ್ರಾಂಕ್ ತನ್ನ ಅಕ್ಕ, ತಾಯಿ, ತಂದೆಯ ಜೊತೆ ಎರಡು ವರ್ಷ ಜರ್ಮನಿಯ ಗೆಸ್ಟಾಪೊಗಳಿಗೆ (ನಾತ್ಸಿ ರಹಸ್ಯ ಪೋಲಿಸ ಪಡೆ) ಹೆದರಿ ಅವಿತುಕೊಂಡಿದ್ದಳು. ಸ್ವಚ್ಛಂದ ಬದುಕನ್ನು ಪ್ರೀತಿಸುತ್ತಿದ್ದ ಆನ್ ಫ್ರಾಂಕ್ ಪ್ರತಿದಿನವೂ ನಾಲ್ಕು ಗೋಡೆಗಳ ನಡುವಿನಿಂದ ಬಿಡುಗಡೆಗೆ ಹಂಬಲಿಸುತ್ತಿದ್ದಳು, ನಿರಂತರವೆನ್ನಿಸುತ್ತಿದ್ದ ಯುದ್ಧ ನಿಲ್ಲಲೆಂದು ಪ್ರಾರ್ಥಿಸುತ್ತಿದ್ದಳು. ಕೊಲೆಗಡುಕ ಹಿಟ್ಲರನ ನಾತ್ಸಿ ಕೈಗಳು ಕೊನೆಗೂ ಬಿಡಲಿಲ್ಲ, ಆ ಕಂದಮ್ಮನ ಕೊರಳನ್ನು ಹಿಚುಕಿಯೇ ಬಿಟ್ಟವು. ಒಂದು ಅಂದಾಜಿನ ಪ್ರಕಾರ ಹಿಟ್ಲರನ ಅವಧಿಯಲ್ಲಿ ಸುಮಾರು 15 ಲಕ್ಷ ಮಕ್ಕಳೇ ಪ್ರಾಣ ತೆತ್ತಿದ್ದಾರೆ.

ಆನ್ ಫ್ರಾಂಕ್ ಮೂಲತಃ ಜರ್ಮನಿಯವಳು. ಅವಳ ತಂದೆ ಓಟೋ ಫ್ರಾಂಕ್ ತಮ್ಮ ಕುಟುಂಬದವರೊಂದಿಗೆ 1933ರಲ್ಲೇ ಹಾಲೆಂಡಿಗೆ ವಲಸೆ ಬಂದು ಅಲ್ಲೇ ಆಮ್‌ಸ್ಟರ್ ಡ್ಯಾಂನಲ್ಲಿ ತಮ್ಮ ವ್ಯಾಪಾರ ವಹಿವಾಟು ನಡೆಸುತ್ತಾ ನೆಲೆಸಿದ್ದರು. ಜರ್ಮನಿ ಹಾಲೆಂಡನ್ನು ಆಕ್ರಮಿಸಿತ್ತು. ಹಾಲೆಂಡಿನಲ್ಲೂ ಸಹ ಯೆಹೂದಿಗಳು ತಮ್ಮನ್ನು ಗುರುತಿಸಲೆಂದು ಹಳದಿ ನಕ್ಷತ್ರವೊಂದನ್ನು ಎದೆಯ ಮೇಲೆ ಧರಿಸಿಕೊಂಡಿರಬೇಕಿತ್ತು. ಅವರು ಟ್ರಾಂಗಳಲ್ಲಿ ಪ್ರಯಾಣಿಸುವ ಹಾಗಿರಲಿಲ್ಲ. ಅವರಿಗೆ ಸಿನಿಮಾ ಇನ್ನಿತರ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವಿರಲಿಲ್ಲ. ಎಲ್ಲರ ಹಾಗೆ ಸೈಕಲ್ ಸಹ ತುಳಿಯುವ ಹಾಗಿರಲಿಲ್ಲ. ಯೆಹೂದಿಗಳು ಏನಾದರೂ ಕೊಳ್ಳಬೇಕಿದ್ದಲ್ಲಿ ಸಂಜೆ ಮೂರರಿಂದ ಐದು ಗಂಟೆಯವರೆಗೆ ಮಾತ್ರ ಅಂಗಡಿಗಳಿಗೆ ಹೋಗಬಹುದಿತ್ತು, ಅದೂ 'ಯೆಹೂದಿಗಳ ಅಂಗಡಿ' ಎಂಬ ಬೋರ್ಡು ಇರುವಲ್ಲಿಗೆ ಮಾತ್ರ. ಅವರ ಮಕ್ಕಳಿಗೆ ಪ್ರತ್ಯೇಕ ಶಾಲೆಗಳಿದ್ದವು. ರಾತ್ರಿ ಎಂಟರ ನಂತರ ಯೆಹೂದಿಗಳ್ಯಾರೂ ತಮ್ಮ ಮನೆಗಳಿಂದ ಹೊರಬರಬಾರದಿತ್ತು. ತಮ್ಮ ಮನೆಯ ಮುಂದಿನ ತೋಟಗಳಲ್ಲೂ ಸಹ ತಲೆಹಾಕಬಾರದಿತ್ತು.

12ನೇ ಜೂನ್ 1942ರಂದು ಆನ್ ಫ್ರಾಂಕಳ ಹದಿಮೂರನೇ ಹುಟ್ಟುಹಬ್ಬ. ಬಂದ ಹಲವಾರು ಉಡುಗೊರೆಗಳಲ್ಲಿ ಅವಳಿಗೆ ಅತ್ಯಂತ ಖುಷಿ ಕೊಟ್ಟದ್ದು ಒಂದು ದಪ್ಪ ರಟ್ಟಿನ ನೋಟ್ ಪುಸ್ತಕ. ಅದನ್ನು ಅವಳು ತನ್ನ ದಿನಚರಿಯನ್ನಾಗಿ ಮಾಡಿಕೊಂಡಳು. ದಿನಚರಿಗಿಂತ ಹೆಚ್ಚಾಗಿ ಅದನ್ನು ತನ್ನ ಅನಿಸಿಕೆ, ಸುಖ–ದುಃಖ ಹಂಚಿಕೊಳ್ಳಬಲ್ಲ ಒಬ್ಬ ಜೀವಂತ ಆತ್ಮೀಯ ಜೊತೆಗಾರಳನ್ನಾಗಿ ಮಾಡಿಕೊಂಡಳು. ಅದನ್ನು ಪ್ರೀತಿಯಿಂದ 'ಕಿಟ್ಟಿ' ಎಂದು ಕರೆದಳು. ನೋವು ದುಃಖವಾದಾಗಲೆಲ್ಲಾ 'ಕಿಟ್ಟಿ'ಯ ಮಡಲಲ್ಲಿ ಮುಖ ಹುಡುಗಿಸಿ ಅತ್ತಳು. ಖುಷಿ ಆದಾಗ 'ಕಿಟ್ಟಿ'ಯ ಜೊತೆ ಹಂಚಿಕೊಂಡು ಹರಟೆ ಹೊಡೆಯುತ್ತಿದ್ದಳು. ಅದರ ಮೊದಲ ಪುಟದಲ್ಲೇ 'ಇದುವರೆಗೆ ಯಾರೊಂದಿಗೂ ಹಂಚಿಕೊಳ್ಳಲು ಸಾಧ್ಯವಾಗದ ನನ್ನ ಭಾವನೆಗಳನ್ನು ನಿನ್ನೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗಬಹುದೆಂಬ ಭರವಸೆ ನನ್ನಲ್ಲಿದೆ. ಅಲ್ಲದೆ ನನಗೆ ಧೈರ್ಯ ಹಾಗೂ ಸಾಂತ್ವನ ಕೊಡುವ ಜೊತೆಗಾರ ಸಹ ಆಗುವೆಯೆಂಬ ನಂಬಿಕೆ ನನಗಿದೆ' ಎಂದು ಬರೆದಿದ್ದಳು. ಮೊದಲೆಂದೂ ಬರೆಯದಿದ್ದರೂ 'ಕಿಟ್ಟಿ'ಯಲ್ಲಿ ಬರೆಯತೊಡಗಿದಂತೆ ಹಾಡುಹಕ್ಕಿಗೆ ಹಾಡು ಸಹಜವಾಗಿ ಬಂದಂತೆ, ಅವಳ ಬರೆಹ ಅವಳ ಭಾವನೆಗಳ ಮಹಾಪೂರಕ್ಕೆ ಹಾದಿಮಾಡಿಕೊಟ್ಟಿತ್ತು. ತನ್ನ ಗೆಳೆಯ–ತಳತಿಯರ ಬಗ್ಗೆ, ಅಪ್ಪ–ಅಮ್ಮನ ಬಗ್ಗೆ, ತನ್ನ ಲೆಕ್ಕದ ಪಾಠದ ದ್ವೇಷದ ಬಗ್ಗೆ, ಯುದ್ಧವೆಂಬ ಕ್ರೌರ್ಯದ ಬಗ್ಗೆ, ತನ್ನ ಬದುಕಿನ, ಪ್ರಕೃತಿಯ ಪ್ರೇಮದ ಬಗ್ಗೆ, ಪೀಟರ್‌ನಲ್ಲಿನ ತನ್ನ ಪ್ರೀತಿಯ ಬಗ್ಗೆ ದಿನದಿನವೂ ತನ್ನ ಭಾವನೆಗಳನ್ನು ತನ್ನ ದಿನಚರಿಯಲ್ಲಿ ದಾಖಲಿಸತೊಡಗಿದಳು.

ಆನ್ ಫ್ರಾಂಕ್ ಅತ್ಯಂತ ಸೂಕ್ಷ್ಮ ಹುಡುಗಿ. ತಾನೇ ತನ್ನ ದಿನಚರಿಯಲ್ಲಿ ಬರೆದಿರುವಂತೆ ಅವಳಿಗೆ ಎರಡು ಮುಖಗಳಿವೆ– ಒಂದು, ಎಲ್ಲರ ಮುಂದೆ ಅರಳು ಹುರಿದಂತೆ ಮಾತನಾಡುತ್ತ ತಲೆ ಚಿಟ್ಟಿಡಿಸುತ್ತಿದ್ದರೂ, ತನ್ನ 'ಒಳಗಿನ' ಭಾವನೆಗಳನ್ನು ಯಾರೊಂದಿಗೂ ಹೇಳಿಕೊಳ್ಳಲಾಗದೆ ತನ್ನ ಸಿಟ್ಟು, ಅಸಹನೆ ಎಲ್ಲಾ ಯಾರಿಲ್ಲದಾಗ ತಲೆದಿಂಬಲ್ಲಿ ಮುಖ ಹುದುಗಿಸಿ ಅತ್ತು ಕಣ್ಣೀರು ಸುರಿಸಿ, ಶಮನ ಮಾಡಿಕೊಳ್ಳುವ ಮತ್ತೊಂದು ಮುಖ. 'ಅಪ್ಪ ಅಮ್ಮ ಏಕೆ ನನ್ನನ್ನು ಅರ್ಥಮಾಡಿಕೊಂಡಿಲ್ಲ? ನನ್ನನ್ನೇಕೆ ಪುಟ್ಟ ಮಗುವಿನ ಹಾಗೆ ನೋಡುತ್ತಾರೆ? ನನಗೂ ಸಹ ಭಾವನೆಗಳಿವೆ ಎಂದು ಅವರಿಗೇಕೆ ಅರ್ಥವಾಗುವುದಿಲ್ಲ?' ಎನ್ನುವುದು ಎಂದಿಗೂ ಉತ್ತರ ಸಿಗದ ಅವಳ ಪ್ರಶ್ನೆಗಳು. 'ಎಲ್ಲರೂ ನನ್ನನ್ನು ಅಪಾರ್ಥ ಮಾಡಿಕೊಳ್ಳುತ್ತಾರೆ, ಅದಕ್ಕೇ ನಾನು ನಿನ್ನ ಬಳಿ ಬರುತ್ತೇನೆ. ನಿನಗೆ ಸಾಕಷ್ಟು ತಾಳ್ಮೆ ಇದೆ' ಎಂದು 'ಕಿಟ್ಟಿ'ಗೆ ಹೇಳುತ್ತಾಳೆ.

ನಾತ್ಸಿಗಳು ಹಾಲೆಂಡನ್ನು ಆಕ್ರಮಿಸಿಕೊಂಡಾಗಲೇ ಆನ್ ಫ್ರಾಂಕಳ ತಂದೆ ಓಟೋ ಫ್ರಾಂಕ್ ತಮ್ಮ ಕುಟುಂಬ ಅವಿತುಕೊಳ್ಳಲು ಸೂಕ್ತ ಸ್ಥಳ ಅರಸುತ್ತಿದ್ದ. ತನ್ನ ಕಚೇರಿಯ ಒಳಗೆ ಉಪಯೋಗಿಸದೇ ಇದ್ದ ಮೊದಲನೇ ಮತ್ತು ಎರಡನೇ ಮಹಡಿಯನ್ನು ಪ್ರಶಸ್ತ ಸ್ಥಳ ಎಂದು ಆಯ್ದು ಇಟ್ಟಿದ್ದ. ತನ್ನ ಕಚೇರಿಯ ಇನ್ನಿಬ್ಬರು ಡಚ್ ಗೆಳೆಯರ ಸಹಾಯ ಸಹ ಇತ್ತು. ಕೊನೆಗೊಂದು ದಿನ ಅವಳ ತಂದೆ ತಾವು ನಾತ್ಸಿಗಳಿಂದ ಅವಿತುಕೊಳ್ಳಲು ತಿಳಿಸಿದಾಗ ನಾತ್ಸಿ ಪೋಲೀಸರು ತನ್ನ ತಂದೆಗೆ ಹೇಳಿ ಕಳುಹಿಸಿದ್ದಾರೆಂದುಕೊಂಡಿದ್ದಳು. ನಂತರ, ನಾತ್ಸಿ ಪೋಲೀಸರು ಹೇಳಿಕಳುಹಿಸಿದ್ದುದು ತನ್ನ ತಂದೆಗಲ್ಲ, ತನ್ನ ಹದಿನಾರು ವಯಸ್ಸಿನ ಅಕ್ಕ ಮಾರ್ಗಟ್‌ಳಿಗೆ ಎಂದು ತಿಳಿದಾಗ ಮೈ ನಡುಗಿತು. ಹದಿಹರೆಯದ ಹುಡುಗಿಯರನ್ನು ನಾತ್ಸಿ ಪೋಲೀಸರು ಎಳೆದೊಯ್ಯುತ್ತಿದ್ದ ಕತೆಗಳನ್ನು ಅವಳು ಬಹಳಷ್ಟು ಕೇಳಿದ್ದಳು.

ಅವಿತುಕೊಳ್ಳಲು ಹೊರಟಾಗ ತಾನು ಮೊದಲು ತೆಗೆದಿಟ್ಟುಕೊಂಡಿದ್ದು ತನ್ನ 'ಕಿಟ್ಟಿ'ಯನ್ನು, ನಂತರ ಕೂದಲ ಕರ್ಲರ್‌ಗಳು, ಕರವಸ್ತ್ರ, ಶಾಲೆಯ ಪುಸ್ತಕಗಳು, ಬಾಚಣಿಗೆ ಹಾಗೂ ಹಳೆಯ ಪುಸ್ತಕಗಳನ್ನು ತೆಗೆದಿಟ್ಟುಕೊಂಡಳು. 'ಬಟ್ಟೆಬರೆಗಳಿಗಿಂತ ನನಗೆ ನೆನಪುಗಳು ಬಹಳ ಮುಖ್ಯ' ಎಂದಳು ತನ್ನ 'ಕಿಟ್ಟಿ'ಯ ಜೊತೆ.

ತಾವು ಅವಿತುಕೊಂಡಿದ್ದ ಕೋಣೆಗಳಿಗೆ ಹೊರ ಪ್ರಪಂಚಕ್ಕೆ ತಿಳಿಯದಂತೆ ಒಂದು ಅಲ್ಮೆರಾವನ್ನೇ ಗುಪ್ತ ಬಾಗಿಲು ಮಾಡಿಕೊಂಡಿದ್ದರು. ಸ್ವಚ್ಛ ಗಾಳಿ, ಬಿಸಿಲೂ ಬರದ ಹಾಗೆ ಕಿಟಕಿಗಳಿಗೆ ಪರದೆಗಳನ್ನು ಹಾಕಿ ಮುಚ್ಚಿದ್ದರು. ಹಗಲು ಹೊತ್ತು ಕೆಳಗೆ ಕಚೇರಿ ಇರುತ್ತಿದ್ದುದರಿಂದ ಯಾರೂ ಮಾತಾಡದೇ, ಶಬ್ದ ಮಾಡದೆ ಇರಬೇಕಿತ್ತು. ಕೆಮ್ಮಲೂ ಸಹ ಬಾರದು. ಕೆಮ್ಮಿನ ಶಬ್ದವೇ ಸಾವಿಗೆ ಆಹ್ವಾನವಾಗಬಹುದಿತ್ತು. ಚಟಪಟ ಎಂದು ಸದಾ ಮಾತನಾಡುತ್ತಿದ್ದ ಆನ್ ಫ್ರಾಂಕ್ (ಶಾಲೆಯಲ್ಲಿ ಸದಾ ಮಾತನಾಡುತ್ತಿದ್ದುದರಿಂದ ಮಾಸ್ತರು ಅವಳನ್ನು ಬುಡುಬುಡಿಕೆ (Chatterbox) ಎಂದು ಕರೆದು ಶಿಕ್ಷೆಯಾಗಿ ಅದರ ಬಗ್ಗೆಯೇ ಅವಳಿಂದ ಒಂದು ಪ್ರಬಂಧ ಬರೆಸಿದ್ದರು. ಇಲ್ಲಿ ಸಾವಿಗೆ ಹೆದರಿ ಬರೇ ಪಿಸುಗುಟ್ಟಬೇಕಿತ್ತು, ಮೌನವಾಗಿರಬೇಕಿತ್ತು. ಅದರಿಂದಲೇ ಸಮಯ ಸಿಕ್ಕಾಗಲೆಲ್ಲ ತನ್ನ ದಿನಚರಿಯೊಂದಿಗೆ ತನ್ನ ಲೇಖನಿಯ ಮೂಲಕ ಮಾತನಾಡುತ್ತಿದ್ದಳು. 'ಸಂಜೆಯ ಮತ್ತು ರಾತ್ರಿಯ ಹೊತ್ತಿನ ನಿರಂತರ ಎನ್ನಿಸುವ ಈ ಜಗತ್ತಿನ ಮೌನ ನನ್ನಲ್ಲಿ ಜೀವಭಯ ತರುತ್ತದೆ' ಎಂದಿದ್ದಾಳೆ. ಆಗಸದಲ್ಲಿ ಸ್ವಚ್ಛಂದ ಹಾರುತ್ತಿದ್ದ ಪಕ್ಷಿಯ ರೆಕ್ಕೆಗಳನ್ನು ಕತ್ತರಿಸಿ ಪಂಜರದೊಳಗಿಟ್ಟ ಹಾಗಾಗಿತ್ತು. ಹಾಡುತ್ತಿದ್ದ



ಹಕ್ಕಿಯ ಕೊರಳಿಗೆ ಉರುಳು ಬಿಗಿದ ಹಾಗಾಗಿತ್ತು.

ಫ್ರಾಂಕ್ ಕುಟುಂಬದ ಜೊತೆಗೆ ಕೆಲದಿನಗಳ ನಂತರ ಮತ್ತೊಂದು ಯೆಹೂದೀ ಕುಟುಂಬ ಬಂದು ಸೇರಿಕೊಂಡಿತು. ವಾನ್‌ಡಾಲ್‌ಗಳ ಕುಟುಂಬದ ತಂದೆ ತಾಯಿ ಮತ್ತು ಮಗ ಪೀಟರ್ ಬಂದು ಸೇರಿಕೊಂಡರು. ಮತ್ತಷ್ಟು ದಿನಗಳನಂತರ ಡಸೆಲ್ ಎಂಬ ದಂತವೈದ್ಯ ಸಹ ಸೇರಿಕೊಂಡ ಹಾಗೂ ಆತ ಆನ್ ಫ್ರಾಂಕಳ ಕೋಣೆಯನ್ನೇ ಹಂಚಿಕೊಳ್ಳಬೇಕಾಯಿತು.

ಅವರ ಗೆಳೆಯರಾದ ಎಲ್ಲಿ ಮತ್ತು ಮೀಪ್ ಎಂಬ ಡಚ್ ಹುಡುಗಿಯರು ಆ ಕುಟುಂಬಗಳಿಗೆ ಅಗತ್ಯ ಆಹಾರ ಇನ್ನಿತರ ಸರಂಜಾಮುಗಳನ್ನು ನಾತ್ಸಿ ಪೋಲೀಸರ ಕಣ್ಣು ತಪ್ಪಿಸಿ ತಲುಪಿಸುತ್ತಿದ್ದರು. ನಾತ್ಸಿಗಳ ಕೈಗೆ ಅವರೇನಾದರೂ ಸಿಕ್ಕಿಬಿದ್ದಿದ್ದರೆ ಅವರಿಗೂ ಸಹ ಸಾವೇ ಗತಿಯಾಗುತ್ತಿತ್ತು. ಆಂಥ ಒಳ್ಳೆಯ ಗೆಳೆಯರನ್ನು ಕಷ್ಟಕ್ಕೆ ಸಿಲುಕಿಸುವ ಬದಲು ತಾವೇ ನಾತ್ಸಿಗಳ ಕೈಗೆ ಸಿಕ್ಕು ಸತ್ತು ಹೋಗಿದ್ದಿದ್ದರೆ ಚೆನ್ನಾಗಿರುತ್ತಿತ್ತೆಂದು ಆನ್ ಫ್ರಾಂಕ್ ಎಷ್ಟೋ ಸಾರಿ ಅಂದುಕೊಂಡಿದ್ದಳು.

ಆ ಕತ್ತಲ ಕೋಣೆಯಲ್ಲಿ ಅವಿತುಕೊಂಡಿದ್ದವರಿಗೆ ಆ ಗೆಳೆಯರೇ ಹೊರಪ್ರಪಂಚದ ಬೆಳಕಿನ ಕಿಂಡಿಯಾಗಿದ್ದರು. ಹೊರ ಪ್ರಪಂಚದ ಸಮಾಚಾರವನ್ನು ಅವರೇ ತಲುಪಿಸುತ್ತಿದ್ದರು. 'ಪ್ರೀತಿಯ ಕಿಟ್ಟಿ, ಈ ದಿನ ಮೀಪ್ ತಂದಿರುವ ಸುದ್ದಿ ನಿನಗೆ ಸಂತೋಷ ಕೊಡುವಂಥದಲ್ಲ. ನಮ್ಮ ಹಲವಾರು ಜ್ಯೂ ಗೆಳೆಯರನ್ನು ನಾತ್ಸಿ ಪೊಲೀಸರು, ರೋಗಿಷ್ಟ ನಾಲಾಯಕ್ ದನಗಳ ಹಾಗೆ ಸ್ವಲ್ಪವೂ ಕರುಣೆಯಿಲ್ಲದೆ ಟ್ರಕ್‌ಗಳಲ್ಲಿ ತುಂಬಿ ಕ್ಯಾಂಪ್‌ಗಳಿಗೆ ಸಾಗಿಸುತ್ತಿದ್ದಾರಂತೆ. ಕ್ಯಾಂಪ್‌ಗಳಿಲ್ಲಿನ ಬದುಕು ಭಯಂಕರವಾದುದಂತೆ! ಒಂದು ಬಕೆಟ್ ನೀರು ನೂರಾರು ಜನರ ಸ್ನಾನ ಹಾಗೂ ಶೌಚ ಕಾರ್ಯಗಳಿಗೆ! ಗಂಡಸರು, ಹೆಂಗಸರು, ಮಕ್ಕಳೆಲ್ಲಾ ಒಂದೇ ಕಡೆ ಮಲಗಬೇಕಂತೆ. ಇದರಿಂದಾಗಿ ಬಹಳಷ್ಟು ಹೆಂಗಸರು, ಹುಡುಗಿಯರೂ ಸಹ ಬಸುರಾಗಿದ್ದಾರಂತೆ. ಆ ಕ್ಯಾಂಪ್‌ಗಳಿಂದ ತಪ್ಪಿಸಿಕೊಳ್ಳುವುದೇ ಸಾಧ್ಯವಿಲ್ಲ. ಸೆರೆಯಾಳುಗಳು ತಪ್ಪಿಸಿಕೊಳ್ಳದಂತೆ ಅವರ ತಲೆ ಬೋಳಿಸಿಬಿಡುತ್ತಾರೆ. ಹಾಲೆಂಡಿನಲ್ಲಿರುವ ಕ್ಯಾಂಪ್‌ಗಳ ಗತಿಯೇ ಹೀಗಾದರೆ, ಇಲ್ಲಿಂದ ಜರ್ಮನಿಗೆ ಸಾಗಿಸಲ್ಪಟ್ಟವರ ಗತಿಯೇನು! ಅಲ್ಲಿ ಗ್ಯಾಸ್ ಛೇಂಬರಿನಲ್ಲಿ ಹಾಕಿ ಕೊಲ್ಲುತ್ತಾರಂತೆ. ಬಹುಶಃ ಅದರಲ್ಲಿ ಸುಲಭವಾಗಿ ಸಾಯಬಹುದೇನೋ!! ಮೀಪ್ ಇದೆಲ್ಲಾ ನನಗೆ ಹೇಳಿದಾಗಿನಿಂದ ನನ್ನ ಮನಸ್ಸಿನಿಂದ ಆ ವಿಚಾರಗಳನ್ನು ಕಿತೊಗೆಯಲು ಸಾಧ್ಯವೇ ಆಗಿಲ್ಲ.' ಶಾಲಾ ಪಾಠಗಳನ್ನು ಕಲಿಯಬೇಕಿದ್ದ ಬಾಲೆ ಹಿಟ್ಲರನ ಯುದ್ಧದ ಪಾಠಗಳನ್ನು ಮನದಟ್ಟು ಮಾಡಿಕೊಳ್ಳುತ್ತಿದ್ದಳು. ತಾವು ಅವಿತುಕೊಂಡಿದ್ದ ಕೋಣೆಯ ಅಲ್ಮೆರಾ ಬಾಗಿಲು ಸ್ವಲ್ಪ ಸದ್ದು ಮಾಡಿದರೂ ಸಾಕು ಬೆದರಿ ಬೆವರುತ್ತಿದ್ದರು. ಸಾವು ಎಲ್ಲೋ ಆ ಬಾಗಿಲ ಹಿಂದೆಯೇ ಹೊಂಚು ಹಾಕಿ ಕಾಯುತ್ತಿದೆ ಎಂಬಂತೆ ಜೀವ ಅಂಗೈಯಲ್ಲಿ ಹಿಡಿದು ಯುದ್ಧ ನಿಲ್ಲಲೆಂದು ಪ್ರಾರ್ಥಿಸುತ್ತಿದ್ದರು. ಹೇಗಾದರೂ ಆಗಲೆಂದು ಆನ್ ಫ್ರಾಂಕ್ ಅಲ್ಲೂ ಸಹ ಒಂದು ಸೂಟ್‌ಕೇಸ್‌ನಲ್ಲಿ ತನ್ನ ಅತ್ಯಗತ್ಯ ವಸ್ತುಗಳನ್ನು ತುಂಬಿ ನಾತ್ಸಿ ಪೋಲೀಸರೇನಾದರೂ ಬಂದಲ್ಲಿ ತಪ್ಪಿಸಿಕೊಳ್ಳಲು ತಯಾರಾಗಿದ್ದಳು. ಅವಳಮ್ಮ, 'ಎಲ್ಲಿಗೆ ತಪ್ಪಿಸಿಕೊಂಡು ಹೋಗಬಲ್ಲೆ, ಈ ಸಾವಿನ ನಾಡಿನಲ್ಲಿ?' ಎಂದಾಗ ಸುಮ್ಮನಾಗಿದ್ದಳು.

ನಾತ್ಸಿಗಳ ಕೈಗೆ ಸಿಕ್ಕಿಬೀಳುವ ಮೂರು ತಿಂಗಳ ಮೊದಲಷ್ಟೇ ತನ್ನ ದಿನಚರಿಯಲ್ಲಿ ಬರೆದಿದ್ದಳು: 'ಈ ಯುದ್ಧಗಳೆಲ್ಲಾ ಏಕೆ ಬೇಕು? ಆನ ಏಕೆ ಶಾಂತಿಯಿಂದ ಬದುಕಲಾರರು? ಈ ವಿನಾಶ ಏಕೆ? ಏಕೆ ದೊಡ್ಡ ದೊಡ್ಡ ಏರೋಪ್ಲೇನು, ಬಾಂಬುಗಳನ್ನು ಮಾಡುತ್ತಾರೆ? ಯುದ್ಧಗಳಿಗೆ ಲಕ್ಷಗಟ್ಟಲೆ ಸುರಿಯುತ್ತಾರೆ. ಆದರೆ ಆಸ್ಪತ್ರೆಗಳಿಗೆ, ಕಲಾವಿದರಿಗೆ, ಬಡವರಿಗೆ ಹಣವೇ ಇಲ್ಲ. ಪ್ರಪಂಚದ ಒಂದೆಡೆ ಕೊಳೆಯುವಷ್ಟು ಆಹಾರ ಇದ್ದರೂ, ಮತ್ತೊಂದೆಡೆ ಏಕೆ ಎಲ್ಲರೂ ಉಪವಾಸದಿಂದ ಸಾಯುತ್ತಾರೆ? ಜನರೇಕೆ ಅಷ್ಟೊಂದು ಹುಚ್ಚರು?' ಜೀವಂತ ಜನಗಳ ಕ್ರೌರ್ಯಕ್ಕೆ ನಿರ್ಜೀವ 'ಕಿಟ್ಟಿ' ಏನು ಹೇಳೀತು? ಯುದ್ಧದ ಅನಾಹುತಗಳ ಬಗ್ಗೆ ಸಾವಿರಾರು ಪುಸ್ತಕಗಳು ಬಂದಿವೆ. ಆದರೆ ಸಾವಿಗೆ ಹೆದರಿದ, ಬದುಕು ಪ್ರೀತಿಸುವ ಪುಟ್ಟ ಹುಡುಗಿಯೊಬ್ಬಳು ತನ್ನ ಮುಗ್ಧ ಕಂಗಳಿಂದ ಕಂಡ ಘೋರ ದೃಶ್ಯಗಳ ಪ್ರಾಮಾಣಿಕ ದಾಖಲೆ– ಆನ್ ಫ್ರಾಂಕಳ ದಿನಚರಿ.

...ಮುಂದುವರಿಯುವುದು

ಸಂಪಾದಕೀಯ

ಅಕ್ಕಿ ನಿರಾಕರಣೆ: ಒಕ್ಕೂಟ ವ್ಯವಸ್ಥೆಯ ಮೇಲಿನ ಧಾಳಿ


ಕರ್ನಾಟಕದ ಜನತೆಯ ಹಸಿವನ್ನು ನೀಗಿಸುವ ಅನ್ನಭಾಗ್ಯ ಯೋಜನೆಗೆ ಅಕ್ಕಿಯ ಖರೀದಿಗೆ ತಡೆ ಒಡ್ಡಿರುವ ಕೇಂದ್ರ ಸರಕಾರದ ನಿರ್ಧಾರ ಅತ್ಯಂತ ಖಂಡನೀಯ. ಭಾರತ ಆಹಾರ ನಿಗಮ (ಎಫ್.ಸಿ.ಐ) ದಲ್ಲಿ ಅಪಾರ ಪ್ರಮಾಣದ ದಾಸ್ತಾನಿದ್ದರೂ, ರಾಜ್ಯಗಳ ಕೋರಿಕೆಯಂತೆ ಅಕ್ಕಿ ಮತ್ತು ಗೋದಿಯನ್ನು ಮಾರುಕಟ್ಟೆ ಧರದಲ್ಲಿ ಹಣ ಪಡೆದು ಪೂರೈಸುವ ಮುಕ್ತ ಅವಕಾಶಗಳಿದ್ದರೂ ಒಪ್ಪಿದ ಮರು ದಿನವೇ ಕುಂಟು ನೆಪ ಒಡ್ಡಿ ನಿರಾಕರಿಸಿರುವುದು ಆಕ್ಷೇಪಾರ್ಹವಾಗಿದೆ.

ಆಹಾರ ಭದ್ರತಾ ಹಕ್ಕು ಕಾಯ್ದೆ 2013 ಭಾರತದ ಪ್ರತಿ ಪ್ರಜೆ ಹಸಿವಿನಿಂದ ಮುಕ್ತವಾಗಿರಬೇಕೆಂದು ಆಹಾರವನ್ನು ಒಂದು ಹಕ್ಕಾಗಿಸಿದೆ. ಜೀವಿಸುವ ಹಕ್ಕನ್ನು ಎತ್ತಿ ಹಿಡಿದಿರುವ ಭಾರತದ ಸಂವಿಧಾನವೂ ಆಹಾರದ ಹಕ್ಕನ್ನು ನೀಡಿದೆ. ಸುಪ್ರಿಂ ಕೋರ್ಟಿನ ಆದೇಶದಿಂದಾಗಿ ಭಾರತ ಸರ್ಕಾರ ಪ್ರತಿ ಪ್ರಜೆಗೆ 5 ಕಿಲೋ ಆಹಾರ ಧಾನ್ಯವನ್ನು ನೀಡುತ್ತಿದೆ. ಇದು ಅಗತ್ಯ ಆಹಾರದ ಕೊರತೆಯನ್ನು ನೀಗಿಸದೇ ಇರುವುರಿಂದ ಆಯಾ ರಾಜ್ಯ ಸರಕಾರಗಳು ಎಫ್.ಸಿ.ಐ. ಯಿಂದ ಮಾರುಕಟ್ಟೆ ಧರಕ್ಕೆ ಖರೀದಿಸಿ ಹಂಚುತ್ತಿವೆ. ತನ್ನ ಹೊಣೆಗಾರಿಕೆಯನ್ನು ಆರ್ಥಿಕ ಸಂಪನ್ಮೂಲಗಳ ತೀವ್ರ ಕೊರತೆಯಿರುವ ರಾಜ್ಯ ಸರಕಾರಗಳ ಮೇಲೆ ಹೇರುತ್ತಿರುವ ಭಾರತ ಸರಕಾರ ಹಂಚಿಕೆಯಲ್ಲೂ ತಾರತಮ್ಯ, ದ್ವೇಷದ ರಾಜಕೀಯ ಮಾಡುತ್ತಿರುವುದು ಸ್ಪಷ್ಟ. ಪಡಿತರ ವ್ಯವಸ್ಥೆಯಲ್ಲಿ ವಿಶ್ವದಲ್ಲಿಯೇ ಶ್ಲಾಘಿಸಲ್ಪಟ್ಟಿರುವ ಕೇರಳ ಎಡ ಪ್ರಜಾಪ್ರಭುತ್ವೀಯ ರಂಗದ ಸರಕಾರ ಇಂದಿಗೂ ಈ ಧಾಳಿಯನ್ನು ಅನುಭವಿಸುತ್ತಿದೆ. ಹಿಂದೆಲ್ಲಾ ಕೇಂದ್ರದ ಸರ್ವಾಧಿಕಾರೀ ಧೋರಣೆಗೆ ಪ.ಬಂಗಾಳ, ತ್ರಿಪುರಾದ ಎಡ ಪಕ್ಷಗಳ ನೇತೃತ್ವದ ಸರಕಾರಗಳು ಬವಣೆ ಅನುಭವಿಸಿವೆ. ಕರ್ನಾಟಕದ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ಜನತೆಗೆ ಸಾಂತ್ವನದ ಪರಿಹಾರ ಒದಗಿಸುವ ದೆಸೆಯಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷದ ಸರಕಾರ ನೀಡಿದ ಭರವಸೆಯಂತೆ 10 ಕಿಲೋ ಅಕ್ಕಿಯನ್ನು ಮುಂದಿನ ಜುಲೈ 1ರಿಂದ ನೀಡಲು ಉದ್ದೇಶಿಸಿದೆ. ಅಂದರೆ ಕೇಂದ್ರ ಕೊಡುವ 5 ಕಿಲೋ ಹೊರತು ಪಡಿಸಿದರೆ ಹೆಚ್ಚುವರಿಯಾಗಿ ಕೊಡಬೇಕಿರುವ 5 ಕಿಲೋಗೆ ರಾಜ್ಯ ಸರಕಾರ ಮಾರುಕಟ್ಟೆ ಬೆಲೆಯನ್ನು ನೀಡಲು ಸಿದ್ಧವಿದೆ. ಜೂನ್ 9ರಂದು ಬರೆದ ಪತ್ರಕ್ಕೆ ಜೂನ್ವ 12 ರಂದು ನೀಡಿದ ಉತ್ತರದಲ್ಲಿ ಒಪ್ಪಿ, ಮರು ದಿನವೇ ಕೊಡಲಾಗದು ಎಂದಿರುವುದರ ಅರ್ಥವೇನು? ಬಫರ್ ಸ್ಟಾಕ್ ಇರಿಸಿಕೊಂಡಾದ ಮೇಲೆ ಇನ್ನೂ ಲಕ್ಷಾಂತರ ಮೆಟ್ರಿಕ್ ಟನ್ ಅಕ್ಕಿ ಲಭ್ಯವಿದೆ. ಇದೇ ಅಕ್ಕಿಯನ್ನು ಖಾಸಗಿಯವರಿಗೆ ನೀಡಲು ಸರಕಾರ ಸಿದ್ಧವಿದೆ ಎನ್ನುವುದು, ರಾಜ್ಯಗಳಿಗೆ ನಿರಾಕರಿಸುವುದು ಅದರ ಸೇಡಿನ ಧೋರಣೆಯನ್ನು ಸ್ಪಷ್ಟ ಪಡಿಸಿದೆ.

ಕೇಂದ್ರ ಸರಕಾರದ ಸೂಚನೆಯಂತೆ ತನ್ನ ಮೊದಲಿನ ನಿರ್ಧಾರವನ್ನು ಎಫ್.ಸಿ.ಐ. ಹಿಂತೆಗೆದಿರುವುದು ಖಂಡನೀಯ. ಇಂತಹುದೇ ತಾರತಮ್ಯದ ನಿರ್ಧಾರಗಳನ್ನು ಬಿಜೆಪಿಯೇತರ ಸರಕಾರಗಳ ವಿರುದ್ಧ ಕೈಗೊಳ್ಳುತ್ತಲೇ ಬರಲಾಗುತ್ತಿದೆ. ಕೇರಳದ ಎಲ್.ಡಿ.ಎಫ್. ಸರಕಾರ ಪ್ರತಿ ಹಂತದಲ್ಲಿಯೂ ಸೆಣಸುತ್ತಲೇ ಇದೆ. ಭಾರತ ಸರಕಾರದ ನಿಲುವು ಒಕ್ಕೂಟ ವ್ಯವಸ್ಥೆಯ ಕಡು ವಿರೋಧಿಯಾಗಿದೆ, ಸಂವಿಧಾನ ವಿರೋಧಿಯೂ ಆಗಿದೆ.

ಕರ್ನಾಟಕ ಸರಕಾರದ ಐದು ಗ್ಯಾರಂಟಿಗಳಿಗೆ ಜನರ ಸ್ಪಂದನ, ಜನಪ್ರಿಯತೆ ಸಹಿಸಲಾಗದ ಬಿಜೆಪಿ ರಾಜಕೀಯ ದ್ವೇಷ ಸಾಧಿಸ ಬಯಸಿದೆ. ಈ ಮೂಲಕ ಕೊಟ್ಟ ಮಾತು ಉಳಿಸಿಕೊಳ್ಳಲಿಲ್ಲವೆಂಬ ಅಪಪ್ರಚಾರ ನಡೆಸಿ, ಅತೃಪ್ತಿ, ಆಕ್ರೋಶ ಹೆಚ್ಚಿಸುವುದು ಅದರ ರಾಜಕೀಯ ಲಾಭವನ್ನು ಮುಂಬರುವ ಸಂಸತ್ತಿನ ಚುನಾವಣೆಯಲ್ಲಿ ಪಡೆಯ ಬಹುದೆಂಬ ಲೆಕ್ಕಾಚಾರ ಅತ್ಯಂತ ಸಂಕುಚಿತ, ಅಮಾನವೀಯ ಕುತಂತ್ರವಾಗಿದೆ. ಈಗಾಗಲೇ ಭಾರತ ದೇಶ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಸ್ಥಾನವನ್ನು ಹೊಂದಿದೆ. ಜನತೆ ವಿಶೇಷವಾಗಿ ಮಕ್ಕಳು, ಮಹಿಳೆಯರು ಅಪೌಷ್ಟಿಕತೆಯಲ್ಲಿ ನರಳುತ್ತಿದ್ದಾರೆ. ಅನೇಕ ಆದಿವಾಸಿ ಸಮುದಾಯಗಳಂತೂ ಅಳಿವಿನಂಚಿಗೆ ತಳ್ಳಲ್ಪಡುತ್ತಿವೆ. ಆಹಾರ ಬೆಳೆಯುವ ರೈತರನ್ನೂ ಒಳಗೊಂಡು ಇತರೆ ಜನ ವಿಭಾಗಗಳು ಪೌಷ್ಟಿಕತೆಯ ಕೊರತೆ ಅನುಭವಿಸುವುದನ್ನು ಲಕ್ಷಿಸಿ ಆಹಾರ ಧಾನ್ಯಗಳನ್ನು ಪೂರೈಸುವುದು ಪಡಿತರ ವ್ಯವಸ್ಥೆಯ ಮುಖ್ಯ ತಿರುಳಾಗಿದೆ. ಆದರೆ ಆಹಾರ ಧಾನ್ಯಗಳ ಕ್ಷೇತ್ರವನ್ನು ಸಾರ್ವಜನಿಕ ಕ್ಷೇತ್ರದಿಂದ ತಪ್ಪಿಸಿ ವಾಲ್ ಮಾರ್ಟ್, ಅದಾನಿ, ಅಂಬಾನಿ, ಐ.ಟಿ.ಸಿ. ಮುಂತಾದ ವಿದೇಸಿ, ದೇಸಿ ದೈತ್ಯ ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವ ನಿರ್ಧಾರವನ್ನು ಸರಕಾರ ಕೈಗೊಂಡಿದೆ. ಸರಕಾರದ ಈ ಕ್ರಮಗಳು ಖಾಸಗಿಯವರ ಕೈ ಮೇಲಾಗಿಸಿ ಆಹಾರದ ಅಭದ್ರತೆಯನ್ನು ಸೃಷ್ಟಿಸಲಿವೆ. ಈ ಕ್ರಮಗಳು ರೈತ ದ್ರೋಹಿಯೂ ಆಗಿದೆ. ಮೂಲದಲ್ಲಿ ಸಂವಿಧಾನ ವಿರೋಧಿಯೂ ಆಗಿದೆ. ಭಾರತ ಸರಕಾರದ ಕ್ರಮಗಳು ಒಕ್ಕೂಟ ವ್ಯವಸ್ಥೆಯ ಮೇಲಿನ ಧಾಳಿಯಾಗಿದೆ. ರಾಜ್ಯದ ಬಿಜೆಪಿ ನಾಯಕರು ಇದನ್ನು ಸಮರ್ಥಿಸುವುದು ಜನದ್ರೋಹವಾಗಿದೆ. ನಮ್ಮ ರಾಜ್ಯದ ಜನರ ಹಕ್ಕನ್ನು ರಕ್ಷಿಸಿ, ಕೇಂದ್ರದಿಂದ ಧಾನ್ಯಗಳ ಬಿಡುಗಡೆಗೆ ಕ್ರಮ ವಹಿಸದ ಪಾರ್ಲಿಮೆಂಟ್ ಸದಸ್ಯರ ನಡೆಯೂ ಖಂಡನಾರ್ಹ. ಈ ಧೋರಣೆಯನ್ನು ಎಲ್ಲಾ ಪ್ರಜಾಪ್ರಭುತ್ವವಾದೀ, ಜನಪರ ಶಕ್ತಿಗಳು ಪ್ರತಿಭಟಿಸಲೇಬೇಕು. ಕೇಂದ್ರ ಸರಕಾರ ಈಗಾಲಾದರೂ ತನ್ನ ಕ್ಷುಲ್ಲಕ ರಾಜಕೀಯವನ್ನು, ದುಷ್ಟ ಧೋರಣೆ ಬದಲಿಸಿಕೊಳ್ಳಬೇಕು. ಒಕ್ಕೂಟ ವ್ಯವಸ್ಥೆಯ ಮೇಲಿನ ಈ ಧಾಳಿಗಳ ವಿರುದ್ಧ ಎಲ್ಲಾ ರಾಜ್ಯಗಳೂ ಒಗ್ಗಟ್ಟಾಗಿ ಪ್ರತಿಭಟಿಸಬೇಕು.

ಮಂಗಳೂರಿನ ಜಗಮಗಿಸುವ ಬೆಳಕಿನ ಹಿಂದೆ ಯುವ ಮಹಿಳಾ ವಲಸೆ ಕಾರ್ಮಿಕರ ಕತ್ತಲ ಬದುಕು



ಪಲ್ಗುಣಿ ನದಿ, ಅದರ ಉಪ ನದಿ ತೋಕೂರು ಹಳ್ಳ ಅಂದರೆ ಮಂಗಳೂರು ಕೈಗಾರಿಕಾ ವಲಯದ ವಿವಿಧ ಘಟಕಗಳಿಗೆ ತಮ್ಮ ಮಾಲಿನ್ಯ ವಿಸರ್ಜನೆಗೆ ದರ್ಮಾರ್ಥ ಚರಂಡಿ ಇದ್ದ ಹಾಗೆ. ಮೊನ್ನೆ ಪತಂಜಲಿ ಫುಡ್ಸ್ ಸಿಕ್ಕಿಬಿದ್ದಿದ್ದರೆ, ಈಗ ವಿವಿಧ ಕಂಪೆನಿಗಳು ಮಾಲಿನ್ಯದ ಹರಿಸುವ ಕೊಳವೆಗಳು ಪತ್ತೆಯಾಗುತ್ತಿವೆ. ಜೊತೆಗೆ ತೋಕೂರು ಹಳ್ಳದಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಕಾಂಡ್ಲಾವನವನ್ನು ಮಣ್ಣು ತುಂಬಿಸಿ ಅತಿಕ್ರಮಿಸುತ್ತಿರುವ ಬಲಾಢ್ಯ ಕುಳಗಳು ಇನ್ನೊಂದೆಡೆ. ಈ ಕುರಿತು ಹೋರಾಟ ಸಮಿತಿ ಪದಾಧಿಕಾರಿಗಳ ಜೊತೆ ಇಂದು ಮುಸ್ಸಂಜೆ (17–06–2023) ಪರಿಶೀಲನೆ ನಡೆಸುತ್ತಿರುವಾಗ ಪತಂಜಲಿ ಫುಡ್ಸ್ ಕಡೆಯಿಂದ ನೂರಕ್ಕೂ ಹೆಚ್ಚು ಯುವ ಮಹಿಳಾ ಕಾರ್ಮಿಕರ ದಂಡು ಕೆಲಸ ಮುಗಿಸಿ ಗುಂಪಾಗಿ ಹೊರಬಂದು ನಾವಿದ್ದ ಕಡೆಯಿಂದ ಅವರ ವಸತಿ ಕಡೆಗೆ ಸಾಗತೊಡಗಿತು. ಕಾರ್ಮಿಕರ ಪರವಾಗಿ ತೊಡಗಿಸಿಕೊಂಡಿರುವ ಪಕ್ಷ/ಸಂಘಟನೆಯ ಕಾರ್ಯಕರ್ತನಾಗಿ ಸಹಜ ಕುತೂಹಲದಿಂದ ಅವರನ್ನು ತಡೆದು ಮಾತಿಗೆಳೆದೆ...

ಬಹುತೇಕ ಹೆಣ್ಣುಮಕ್ಕಳು ಜಾರ್ಖಂಡ್ ರಾಜ್ಯದವರಾದರೆ, ಒಂದಿಷ್ಟು ಯುವತಿಯರು ಕೊಪ್ಪಳ ಜಿಲ್ಲೆಯವರು. ಕೆಲವರು ಏಳೆಂಟು ವರ್ಷಗಳಿಂದ ಇಲ್ಲಿ ದುಡಿಯುತ್ತಿದ್ದಾರೆ. ಜಾರ್ಖಂಡ್ ರಾಜ್ಯದ ಮಹಿಳಾ ಕಾರ್ಮಿಕರಿಗೆ 8 ರಿಂದ 10 ಸಾವಿರ ರೂಪಾಯಿ ವೇತನವಾದರೆ, ಕೊಪ್ಪಳ ಸೇರಿದಂತೆ ಉತ್ತರ ಕರ್ನಾಟಕದ ಯುವತಿಯರಿಗೆ 10 ರಿಂದ 14 ಸಾವಿರ ರೂಪಾಯಿ ಸಂಬಳ ದೊರಕುತ್ತದೆ.

ಈ ವೇತನಕ್ಕೆ ಅವರು ಬೆಳಿಗ್ಗೆ 7 ರಿಂದ ಮುಸ್ಸಂಜೆ 7 ಗಂಟೆಯವರಗೆ, ಅಂದರೆ ಸರಿಯಾಗಿ 12 ತಾಸು ದುಡಿಯಬೇಕು. ಯಾವ ಓವರ್ ಟೈಮು ವೇತನವೂ ಇಲ್ಲ. ಮಧ್ಯಾಹ್ನ ಇವರೇ ಕಟ್ಟಿಕೊಂಡು ಬಂದ ಬುತ್ತಿ ಬಿಟ್ಟರೆ, ಮಧ್ಯೆ ಕಂಪೆನಿ ಕಡೆಯಿಂದ ಈ ಗುತ್ತಿಗೆ ಕಾರ್ಮಿಕರಿಗೆ ಒಂದು ಕಪ್ ಟೀ, ಕಾಫಿಯೂ ಕೊಡುವುದಿಲ್ಲ. ಮುಂಜಾನೆ ಸೂರ್ಯ ಹುಟ್ಟುವ ಮುನ್ನ ಗಡಿಬಿಡಿಯಿಂದ ಬೇಯಿಸಿ ಆರು ಗಂಟೆಗೆ ಬುತ್ತಿ ಕಟ್ಟಿಕೊಂಡು ನಡೆಯುತ್ತಾ ಎರಡು ಕಿ ಮೀ ದೂರದ ಕಂಪೆನಿಯನ್ನು 7 ಗಂಟೆಗೆ ಮುಂಚಿತವಾಗಿ ತಲುಪಬೇಕು. ಆ ಮೇಲೆ ಮಧ್ಯಾಹ್ನದ ಬುತ್ತಿ ಬಿಟ್ಟರೆ ಹೊಟ್ಟೆಗೆ ಬೇರೇನೂ ಇಲ್ಲ. ಮುಸ್ಸಂಜೆ 7 ಗಂಟೆಗೆ ಕೆಲಸ ಮುಗಿಸಿ ಲಗುಬಗನೆ ವಸತಿ ಸೇರಿ ಏನಾದರು ಬೇಯಿಸಿ ರಾತ್ರಿಯ ಊಟ ಮಾಡಬೇಕು. ಇದು ಈ ಯುವ ಮಹಿಳಾ ಕಾರ್ಮಿಕರ ದಿನಚರಿ.

ನನಗಂತೂ ಇವರ ಕತೆ ಕೇಳಿ ಖೇದವಾಯಿತು. ದೂರದ ಊರುಗಳಿಂದ ಬಂದಿರುವ ಈ ಯುವತಿಯರು ಇದೇ ಸೌಭಾಗ್ಯ ಎಂಬಂತೆ ನಿರ್ಲಿಪ್ತತೆಯನ್ನು ರೂಢಿಸಿಕೊಂಡಿದ್ದಾರೆ. ಬದುಕಿನಲ್ಲಿ ಯಾವ ಮನೋರಂಜನೆಗೂ ಅವಕಾಶ ಇಲ್ಲದೆ, ಕತ್ತೆಯಂತೆ ಇಡೀ ದಿನದ ದುಡಿಮೆ, ದುಡಿಮೆ ಮುಗಿಸಿ ನಿದ್ರೆ, ಮುಂಜಾನೆ ಎದ್ದು ಮತ್ತೆ ದುಡಿಮೆ. ಇದು ಅಭಿವೃದ್ಧಿ ಹೆಸರಿನಲ್ಲಿ ಬಂದಿರುವ ಕೈಗಾರಿಕೆಗಳು ಒದಗಿಸುತ್ತಿರುವ ದುಡಿಮೆಯ ಅವಕಾಶ. ಸ್ಥಳೀಯರನ್ನು ನೇಮಿಸಿಕೊಂಡರೆ ಈ ರೀತಿ ಶೋಷಣೆ ಸಾಧ್ಯವಿಲ್ಲ ಎಂದು, ದೂರದ ಜಿಲ್ಲೆ, ರಾಜ್ಯಗಳಿಂದ ಗುತ್ತಿಗೆದಾರರೆಂಬ ಏಜೆಂಟರ ಮೂಲಕ ಅಗ್ಗದ ಕಾರ್ಮಿಕರನ್ನು ಕರೆ ತಂದು ಯಂತ್ರದಂತೆ ದುಡಿಸುವುದು, ಲಾಭವನ್ನು ಗುಡ್ಡೆ ಹಾಕಿ ಕೊಳ್ಳುವುದೇ ಇಂದಿನ ಉದ್ಯಮ ನೀತಿಯಾಗಿದೆ. ಇದು ಪತಂಜಲಿ ಫುಡ್ಸ್ ಒಂದರ ಕತೆಯಲ್ಲ, ಮಂಗಳೂರಿನ ಬಹುತೇಕ ಕೈಗಾರಿಕೆಗಳಲ್ಲಿ ನಡೆಯುತ್ತಿರುವುದು ಇದೇ ರೀತಿಯ ಆಧುನಿಕ ಜೀತ.

ಇದನ್ನೆಲ್ಲಾ ಖುದ್ದು ಪರಿಶೀಲಿಸಬೇಕಾದ ಕಾರ್ಮಿಕ ಇಲಾಖೆ ಇತ್ತ ತಿರುಗಿ ಕೂಡ ನೋಡುವುದಿಲ್ಲ. ಜನಪ್ರತಿನಿಧಿಗಳಿಗಂತೂ ಇಂತಹದ್ದೊಂದು "ಜಗತ್ತು" ಇದೇ ಎಂಬುದೇ ಅರಿವಿಲ್ಲ. ಇಲ್ಲಿನ ರಾಜಕೀಯ ಪಕ್ಷಗಳು ಬಿಡಿ, ಧರ್ಮ, ಜಾತಿ, ಹಣದ ಲೆಕ್ಕಾಚಾರದ ಆಚೆಗಿನ ರಾಜಕೀಯವೇ ಅವರಿಗೆ ತಿಳಿದಿಲ್ಲ. ತುಳುನಾಡಿನ ಯುವ ಸಮೂಹವಂತೂ, ತಮ್ಮದೇ ಉದ್ಯೋಗ ಅವಕಾಶ ಕಸಿದು, ದೂರದೂರಿನ ಯುವಕ, ಯುವತಿಯರನ್ನು ತಂದು ಜೀತದ ದುಡಿಮೆ ಮಾಡಿಸುವುದರ ವಿರುದ್ಧ ಸಿಡಿದೇಳಬೇಕು, ಶೋಷಣೆ, ವಂಚನೆಯನ್ನು ಸಹಿಸಬಾರದು ಎಂಬ ಪ್ರಜ್ಞೆಯೇ ಇಲ್ಲದಂತೆ ಬದುಕುತ್ತಿದ್ದಾರೆ.

ಇಂದು ಈ ಯವ ಮಹಿಳಾ ಕಾರ್ಮಿಕರ (ದಶಕದಿಂದ ಕೇಳುತ್ತಾ, ನೋಡುತ್ತಾ, ಆಗಾಗ ಧ್ವನಿ ಎತ್ತುತ್ತಾ ಇದ್ದೇವೆ. ಕೆಲವೊಮ್ಮೆ ಜೀತದ ದುಡಿಮೆಯ ವೇತನವೂ ಕೊಡದೆ ಹೊರದಬ್ಬಿದ ಪ್ರಸಂಗ ಗಮನಕ್ಕೆ ಬಂದಾಗ ಮಧ್ಯ ಪ್ರವೇಶಿಸಿದ್ದೇವೆ) ಕತೆ ಕೇಳಿ ಖೇದವಾಯ್ತು. ಕಾರ್ಮಿಕ ವರ್ಗದ ಪಕ್ಷ, ಯೂನಿಯನ್ ನ ಪ್ರತಿನಿಧಿಯಾಗಿದ್ದೂ ಏನೂ ಮಾಡಲಾಗದಿರುವ ಅಸಹಾಯಕತೆಗೆ ನಮ್ಮ ಕುರಿತೇ ನನಗೆ ನಾಚಿಕೆಯೆನಿಸಿತು. ನಮ್ಮ ಸಮಾಜಕ್ಕೆ ಈ ಕುರಿತು ಪ್ರತಿರೋಧ ಒಡ್ಡಬೇಕು ಎಂಬ ಅರಿವು ಮೂಡುವುದು ಯಾವಾಗ?

–ಮುನೀರ್ ಕಾಟಿಪಳ್ಳ

ಮೋದಿ ಆಡಳಿತದ 9 ವರ್ಷಗಳ ಸಾಧನೆಗಳೇನು?

‘ಪ್ರಧಾನ ಮಂತ್ರಿ ಆವಾಸ್ ಯೋಜನೆ’

ಮೋದಿ ಭರವಸೆಯಂತೆ 2022ರೊಳಗೆ ಎಲ್ಲರಿಗೂ ವಸತಿ ದೊರಕಿತೆ?

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಮೇ 30 ಕ್ಕೆ 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಹಾಗೂ ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ಸಾಧನೆಗಳೆಂದು ಹೇಳುತ್ತಿರುವುದೆಲ್ಲಾ ನಿಜವಾಗಿಯೂ ಸಾಧನೆಗಳೇ? ಅವುಗಳು ಜನಪರವಾಗಿವೆಯೇ? ರಾಷ್ಟ್ರದ ಹಿತ ರಕ್ಷಿಸುವಂಥವೇ? ಸರ್ಕಾರದ ಈ ಎಲ್ಲಾ ಯೋಜನೆಗಳ ನಿಜವಾದ ಉದ್ದೇಶಗಳೇನು? ನವ ಉದಾರೀಕರಣ ನೀತಿಗಳ ಜಾರಿಗೆ ಈ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆಯೇ? ಭಾರತದ ಪ್ರತಿಯೊಂದು ವಲಯಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಒಪ್ಪಿಸಲು ಏನೆಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (FDI)ಗೆ ಮುಕ್ತ ಅವಕಾಶದ ಕಾರಣದಿಂದ ದೇಶದ ಹಲವು ವಲಯಗಳ ಮೇಲೆ ವಿದೇಶಿ ಹಣಕಾಸು ಸಂಸ್ಥೆಗಳು ಹೇಗೆಲ್ಲಾ ಹಿಡಿತ ಸಾಧಿಸಿವೆ. ಖಾಸಗೀಕರಣ ನೀತಿಗೆ ಅನುಗುಣವಾಗಿ ರೂಪಿಸಲಾಗಿರುವ ಯೋಜನೆಗಳನ್ನು ‘ಜನಪರ ಯೋಜನೆಗಳು’ ಎಂದು ಹೇಗೆಲ್ಲಾ ನಂಬಿಸತೊಡಗಿದ್ದಾರೆ.

ಈ ಕುರಿತು, ಬಿಜೆಪಿ ಹೇಳುತ್ತಿರುವ ಒಂದೊಂದೇ ‘ಸಾಧನೆಗಳ” ವಿಮರ್ಶಾತ್ಮಕ ಪುಟ್ಟ ಲೇಖನಗಳ ಸರಣಿಯ 3ನೆಯ ಲೇಖನ. ಮುಂದಿನ ವರ್ಷ ಲೋಕಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಈ ಲೇಖನಗಳು ಓದುಗರಿಗೆ ಒಂದಷ್ಟು ಮಾಹಿತಿ ನೀಡಬಹುದು ಎಂಬುದು ‘ಜನಶಕ್ತಿ’ಯ ಆಶಯ.

ಸಿ.ಸಿದ್ದಯ್ಯ

ಮೋದಿ ಸರ್ಕಾರದ ಮತ್ತೊಂದು ದೊಡ್ಡ ಭರವಸೆಯೆಂದರೆ, 2022 ರ ವೇಳೆಗೆ ಎಲ್ಲರಿಗೂ ಕೈಗೆಟಕುವ ದರದಲ್ಲಿ ವಸತಿ ಎಂಬ ‘ಪ್ರಧಾನ ಮಂತ್ರಿ ಆವಾಸ್ ಯೋಜನೆ’ (PMAY). 2014ರಲ್ಲಿ ಹೊಸದಾಗಿ ರಚನೆಯಾದ ಸಂಸತ್ತು ಮೊದಲ ಬಾರಿಗೆ ಸಭೆ ಸೇರಿದಾಗ, ರಾಷ್ಟ್ರಪತಿಗಳ ಭಾಷಣದ ನಂತರ ಲೋಕಸಭೆಯಲ್ಲಿ ಮಾಡಿದ ಭಾಷಣದಲ್ಲಿ ಪ್ರಧಾನಿ ಮೋದಿ ಈ ಘೋಷಣೆ ಮಾಡಿದರು. 25 ಜೂನ್ 2015 ರಂದು ಈ ಯೋಜನೆ ಪ್ರಾರಂಭವಾಯಿತು. ಈ ಯೋಜನೆಯು ಎರಡು ವಿಭಾಗಗಳನ್ನು ಹೊಂದಿದೆ. PMAY (ನಗರ) ಮತ್ತು PMAY (ಗ್ರಾಮೀಣ)) PMAY (ಅರ್ಬನ್) ನಗರ ಬಡವರಿಗೆ ಕೈಗೆಟುಕುವ ವಸತಿ ಒದಗಿಸುವ ಗುರಿಯನ್ನು ಹೊಂದಿದ್ದರೆ, PMAY (ಗ್ರಾಮೀಣ) ಗ್ರಾಮೀಣ ಪ್ರದೇಶದ ಜನರಿಗೆ ಕೈಗೆಟುಕುವ ವಸತಿ ಒದಗಿಸುವತ್ತ ಗಮನಹರಿಸುವ ಯೋಜನೆಯಾಗಿದೆ.

ಮನೆ ಇಲ್ಲದ ಕೋಟ್ಯಾಂತರ ಕುಟುಂಬಗಳು ಮೋದಿ ಸರ್ಕಾರದ ಈ ಘೋಷಣೆಯಿಂದಾಗಿ ಸ್ವಂತ ಮನೆ ಹೊಂದುವ ಕನಸು ಕಂಡರು. ಈ ಯೋಜನೆಯ ರೂಪುರೇಷೆಗಳನ್ನು ಅರಿಯದ ಗ್ರಾಮೀಣ ಮತ್ತು ನಗರಗಳ ಕಡು ಬಡವರೂ ಮೋದಿ ನಮಗೆ ಮನೆ ಕೊಟ್ಟೇ ಕೊಡುತ್ತಾರೆ ಎಂದೇ ನಂಬಿದರು. ಅದಕ್ಕಾಗಿ ಆನ್ಲೈನ್ ಅರ್ಜಿ ಹಾಕುವ ವ್ಯವಸ್ಥೆಯನ್ನೂ ಒಕ್ಕೂಟ ಸರ್ಕಾರ ಮಾಡಿತು. ಜನರು ಕಾಮನ್ ಸರ್ವೀಸ್ (CSC) ಸೆಂಟರ್ ಗಳ ಎದುರು ಸಾಲುಗಟ್ಟಿ ನಿಂತು, 200, 500, ಕೆಲವೆಡೆ 1000 ರೂ ವರೆಗೂ ಹಣ ಕೊಟ್ಟು ಆನ್ಲೈನ್ ಅರ್ಜಿ ಹಾಕಿದರು. ಅರ್ಜಿ ಸಲ್ಲಿಸಿದ ಸ್ವೀಕೃತಿ ಪತ್ರವನ್ನೇ ಕೆಲವರು ಮನೆಯ ಹಕ್ಕು ಪತ್ರದಂತೆ ಇಂದಿಗೂ ಜೋಪಾನವಾಗಿ ಇಟ್ಟುಕೊಂಡಿದ್ದಾರೆ. ಮೋದಿ ಮನೆ ಕಟ್ಟಿಸಿಕೊಡುತ್ತಾರೆ ಎಂದು ನಂಬಿಸಿ ಮದ್ಯವರ್ತಿಗಳು, ರಾಜಕೀಯ ಪುಡಾರಿಗಳು ಆನ್ಲೈನ್ ಅರ್ಜಿ ಸಲ್ಲಿಸಲು ನೆರವಾಗಿ ಸಾಕಷ್ಟು ಹಣ ಮಾಡಿಕೊಂಡರು. ಸಿಎಸ್‌ಸಿ ಸೆಂಟರ್ ನವರೂ ಹಣ ಮಾಡಿಕೊಂಡರು. ಮೋದಿ ಭಕ್ತರು ಜನರನ್ನು ನಂಬಿಸಲು ಹಲವು ರೀತಿಯ ಕತೆಗಳನ್ನು ಕಟ್ಟಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಿದರು. ಬಿಜೆಪಿ ನೀಡಿದ 2022 ರ ಗಡುವು ಮುಗಿದಿದೆ. ಎಷ್ಟು ಕುಟುಂಬಗಳಿಗೆ ಮನೆ ಸಿಕ್ಕಿದೆ?


ಹಿಂದಿನ IAY ಇಂದಿನ PMAY

ಈ ಪ್ರಶ್ನೆ ಮಾಡುವ ಮೊದಲು, ‘ಪ್ರಧಾನ ಮಂತ್ರಿ ಆವಾಸ್ ಯೋಜನೆ’ ಏನೆಂಬುದನ್ನು ಅರಿಯಬೇಕಿದೆ. ಮೋದಿ ಸರ್ಕಾರದ ಪ್ರಧಾನ್ ಮಂತ್ರಿ ಆವಾಸ್ ಯೋಜನೆ (PMAY) ಹಿಂದಿನ ಇಂದಿರಾ ಆವಾಸ್ ಯೋಜನೆ(IAY)ಯ ಹೊಸ ಹೆಸರಿಟ್ಟ ರೂಪವಷ್ಟೆ. ಇಂದಿರಾ ಆವಾಸ್ ಯೋಜನೆಯಲ್ಲಿ 2007–2014ರ 7 ವರ್ಷಗಳ ಅವಧಿಯಲ್ಲಿ 1.65 ಕೋಟಿ ವಸತಿ ನಿರ್ಮಾಣವಾಗಿದ್ದರೆ, ಪ್ರಧಾನ್ ಮಂತ್ರಿ ಆವಾಸ್ ಯೋಜನೆಯಲ್ಲಿ 2014–2021ರ 7 ವರ್ಷಗಳ ಅವಧಿಯಲ್ಲಿ 2.41 ಕೋಟಿ ವಸತಿ ನಿರ್ಮಾಣವಾಗಿದೆ. (ಕೋಷ್ಟಕ ನೋಡಿ)

ಭಾರತದಲ್ಲಿ ಸಾರ್ವಜನಿಕ ವಸತಿ ಕಾರ್ಯಕ್ರಮವು ಸ್ವಾತಂತ್ರ್ಯದ ನಂತರ ತಕ್ಷಣವೇ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಬೇಕೆಂಬ ಉದ್ದೇಶದಿಂದ ಪ್ರಾರಂಭವಾಯಿತು. 1960 ರವರೆಗೆ, ಉತ್ತರ ಭಾರತದ ವಿವಿಧ ಭಾಗಗಳಲ್ಲಿ ಸುಮಾರು ಐದು ಲಕ್ಷ ಕುಟುಂಬಗಳಿಗೆ ಮನೆಗಳನ್ನು ಒದಗಿಸಲಾಗಿದೆ. 1957 ರಲ್ಲಿ, ಪ್ರಧಾನ ಮಂತ್ರಿ ನೆಹರು ಅವರ ಎರಡನೇ ಪಂಚವಾರ್ಷಿಕ ಯೋಜನೆಯ ವ್ಯಾಪ್ತಿಯಲ್ಲಿ, ಗ್ರಾಮ ವಸತಿ ಕಾರ್ಯಕ್ರಮವನ್ನು (VHP) ಪರಿಚಯಿಸಲಾಯಿತು, ಇದು ವ್ಯಕ್ತಿಗಳು ಮತ್ತು ಸಹಕಾರಿ ಸಂಸ್ಥೆಗಳಿಗೆ ಪ್ರತಿ ಘಟಕಕ್ಕೆ 5,000 ವರೆಗೆ ಸಾಲವನ್ನು ನೀಡುತ್ತದೆ. ಐದನೇ ಪಂಚವಾರ್ಷಿಕ ಯೋಜನೆಯ (1974–1979) ಅಂತ್ಯದವರೆಗೆ ಈ ಯೋಜನೆಯಲ್ಲಿ ಕೇವಲ 67,000 ಮನೆಗಳನ್ನು ಮಾತ್ರ ನಿರ್ಮಿಸಬಹುದಾಗಿದೆ. 1974 ರಿಂದ 1975 ರವರೆಗೆ ರಾಜ್ಯ ವಲಯಕ್ಕೆ ವರ್ಗಾಯಿಸಲ್ಪಟ್ಟ ಮತ್ತೊಂದು ಯೋಜನೆಯು ಮನೆ ಸೈಟ್‌ಗಳು–ಕಮ್–ನಿರ್ಮಾಣ ಸಹಾಯ ಯೋಜನೆ (HSCAS) ಅನ್ನು ಸಹ ರೂಪಿಸಲಾಯಿತು.

1985 ರಲ್ಲಿ ಆಗಿನ ಪ್ರಧಾನಿ ರಾಜೀವ್ ಗಾಂಧಿಯವರು ಇಂದಿರಾ ಆವಾಸ್ ಯೋಜನೆ (IAY) ಅನ್ನು ಪ್ರಾರಂಭಿಸುವುದರೊಂದಿಗೆ, ಭಾರತದಲ್ಲಿ ಸಾರ್ವಜನಿಕ ವಸತಿ ಕಾರ್ಯಕ್ರಮಕ್ಕೆ ಉತ್ತೇಜನ ಸಿಕ್ಕಿತು. ಎಸ್‌ಸಿ/ಎಸ್‌ಟಿ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಯನ್ನು ಗುರಿಯಾಗಿಸಿಕೊಂಡು ಗ್ರಾಮೀಣ ವಸತಿ ಕಾರ್ಯಕ್ರಮವಾಗಿ IAY ಪ್ರಾರಂಭಿಸಲಾಗಿತ್ತು. ನಂತರ ಬಡತನ ರೇಖೆಗಿಂತ ಕೆಳಗಿರುವ (BPL) ಜನಸಂಖ್ಯೆಯನ್ನು ಒಳಗೊಂಡಂತೆ ಕಾರ್ಯಕ್ರಮವನ್ನು ಕ್ರಮೇಣ ವಿಸ್ತರಿಸಲಾಯಿತು. ಕೇಂದ್ರ ಮತ್ತು ರಾಜ್ಯಗಳೆರಡೂ 75:25 ಅನುಪಾತದಲ್ಲಿ ಯೋಜನೆಗೆ ನಿಧಿಗೆ ಕೊಡುಗೆ ನೀಡುತ್ತಿದ್ದವು. ಸಿಕ್ಕಿಂ ಮತ್ತು ಈಶಾನ್ಯ ರಾಜ್ಯಗಳ ಸಂದರ್ಭದಲ್ಲಿ ಧನಸಹಾಯವು 90:10 ಅನುಪಾತದಲ್ಲಿತ್ತು.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಕ್ಕೆ ಪ್ರಾರಂಭದಲ್ಲಿ ಬಯಲು ಪ್ರದೇಶದಲ್ಲಿ ಮನೆ ನಿರ್ಮಿಸಲು 45,000 ರೂ. ಮತ್ತು ಗುಡ್ಡಗಾಡು ಮತ್ತು ಕಷ್ಟಕರ ಪ್ರದೇಶದಲ್ಲಿ ಮನೆ ನಿರ್ಮಿಸಲು 48,500 ರೂ. ನೆರವು ನೀಡುತ್ತಿತ್ತು. 2013 ರ ಏಪ್ರಿಲ್ 1 ರಂದು 70,000 ಮತ್ತು 75,000 ರೂ.ಗಳಿಗೆ ಆರ್ಥಿಕ ಸಹಾಯವನ್ನು ಹೆಚ್ಚಿಸಲಾಗಿತ್ತು. IAY ಫಲಾನುಭವಿಗಳು 4% ವಾರ್ಷಿಕ ಬಡ್ಡಿ ದರದಲ್ಲಿ ಮನೆ ನಿರ್ಮಿಸಲು ರೂ 20,000 ವರೆಗೆ ಸಾಲವನ್ನು ಪಡೆಯಬಹುದಾಗಿತ್ತು. IAY ಹಣವನ್ನು ಸಹ ಕಚ್ಚಾ ಮನೆಗಳ ಉನ್ನತ ದರ್ಜೆಗೆ ವಿನಿಯೋಗಿಸಬಹುದಿತ್ತು. ಶೌಚಾಲಯ ನಿರ್ಮಿಸಲು ಐಎವೈ ಅಡಿಯಲ್ಲಿ ರೂ 9,000 ಹೆಚ್ಚುವರಿ ನೆರವು ನೀಡಲಾಗುತ್ತಿತ್ತು.



- * IAY has been revamped into Pradhan Mantri Awas Yojana – Gramin (PMAY-G) with effect from 1st April 2016.[10]
- **** The figure also includes 73 lakh houses completed under IAY after 2014.[11] The data is up to 27th December 2021.[12]**

[9] https://www.pib.gov.in/PressReleasePage.aspx?PRID=1641011
[10] https://static.pib.gov.in/WriteReadData/specificdocs/documents/2021/nov/doc202111141.pdf
[11] https://pib.gov.in/PressReleasePage.aspx?PRID=1709851
[12] https://pib.gov.in/PressReleasePage.aspx?PRID=1786672

ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ, 1985 ರಿಂದ 2.52 ಕೋಟಿ ಮನೆಗಳನ್ನು ನಿರ್ಮಿಸಲಾಗಿದೆ. ಭಾರತ್ ನಿರ್ಮಾಣ್ ಕಾರ್ಯಕ್ರಮದ ಆರು ಭಾಗಗಳಲ್ಲಿ ಗ್ರಾಮೀಣ ವಸತಿ ಒಂದು. ಮೊದಲ ಹಂತದಲ್ಲಿ 2005–06 ರಿಂದ 2008ರ ಅವಧಿಯಲ್ಲಿ 21,720.39 ಕೋಟಿ ರೂ.ಗಳನ್ನು ವ್ಯಯಿಸಿ 71.76 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ. 2009–10 ರಿಂದ ಪ್ರಾರಂಭವಾಗಿ ಮುಂದಿನ ಐದು ವರ್ಷಗಳಲ್ಲಿ ಎರಡನೇ ಹಂತದಲ್ಲಿ ಮೊದಲ ಮೂರು ವರ್ಷಗಳಲ್ಲಿ 85 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ.

IAY ಯೋಜನೆಯನ್ನೇ ನಗರ ಪ್ರದೇಶಕ್ಕೂ ವಿಸ್ತರಿಸಿ, ಮದ್ಯಮ ವರ್ಗದ ಕುಟುಂಬದವರಿಗೂ ಸೌಲಭ್ಯ ಕಲ್ಪಿಸಲು ಒಂದಷ್ಟು ಬದಲಾವಣೆಯೊಂದಿಗೆ, ‘ಇಂದಿರಾ’ ಎಂಬ ಹೆಸರನ್ನು ಅಳಿಸಿಹಾಕಿ, ‘ಪ್ರಧಾನ್ ಮಂತ್ರಿ’ ಎಂದು ಸೇರಿಸಿ PMAY ಎಂಬ ಹೊಸ ಹೆಸರಿನಲ್ಲಿ ತರಲಾಗಿದೆ.

ಹಳೆಯ ವಸತಿ ಯೋಜನೆಗಳೆಲ್ಲವೂ PMAY ಒಳಗೆ

ಕಡಿಮೆ ವೆಚ್ಚದ ಮನೆಗಳನ್ನು ಒದಗಿಸುವ ಪ್ರಯತ್ನಗಳನ್ನು ಹಲವು ವರ್ಷಗಳಿಂದ ಮಾಡಲಾಗುತ್ತಿದೆ. ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆ (PMAY)ಯು, ರಾಷ್ಟ್ರೀಯ ವಸತಿ ನೀತಿ–1994; ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್– 2005; ರಾಜೀವ್ ಆವಾಸ್ ಯೋಜನೆ –2013, ಹೀಗೆ ಈ ಹಿಂದಿನ ಎಲ್ಲಾ ನಗರ ವಸತಿ ಯೋಜನೆಗಳನ್ನು ಒಳಗೊಳ್ಳುತ್ತದೆ.

ಏನಿದು PMAY ಯೋಜನೆಯ ವಿಸ್ತರಣೆ?

ಆರ್ಥಿಕವಾಗಿ ದುರ್ಬಲ ವಿಭಾಗಗಳು (EWS), ಕಡಿಮೆ–ಆದಾಯದ ಗುಂಪು (LIG), ಮಧ್ಯಮ–ಆದಾಯದ ಗುಂಪು I (MIG I) ಮತ್ತು ಮಧ್ಯಮ–ಆದಾಯದ ಗುಂಪು II (MIG II). ಈ ಗುಂಪುಗಳಿಗೆ ಸೇರಿರುವ ಕುಟುಂಬಗಳನ್ನು PMAY ಒಳಗೊಂಡಿರುತ್ತದೆ. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಪ್ರತಿ ವರ್ಗಕ್ಕೆ ನಿಗದಿತ ಮಿತಿಯೊಳಗೆ ಇರಬೇಕು.

PMAY ಯೋಜನೆಯು ಅರ್ಹ ಫಲಾನುಭವಿಗಳಿಗೆ ಗೃಹ ಸಾಲಗಳ ಮೇಲಿನ ಸಬ್ಸಿಡಿ ಅಥವಾ ಕ್ರೆಡಿಟ್–ಲಿಂಕ್ಡ್ ಸಬ್ಸಿಡಿಗಳ ರೂಪದಲ್ಲಿ ಹಣಕಾಸಿನ ನೆರವು ನೀಡುತ್ತದೆ. ಸಬ್ಸಿಡಿಯನ್ನು ಮೊದಲ ಬಾರಿಗೆ ಮನೆ ಖರೀದಿಸುವವರು, ಆರ್ಥಿಕವಾಗಿ ದುರ್ಬಲ ವರ್ಗಗಳು, ಕಡಿಮೆ–ಆದಾಯದ ಗುಂಪುಗಳು ಮತ್ತು ಮಧ್ಯಮ–ಆದಾಯದ ಗುಂಪುಗಳಿಗೆ ನೀಡಲಾಗುತ್ತದೆ. ಯೋಜನೆಯು ಜನರಿಗೆ ತಮ್ಮ ಮನೆಗಳನ್ನು ನಿರ್ಮಿಸಲು ಅಥವಾ ನವೀಕರಿಸಲು ಸಹಾಯವನ್ನು ಒದಗಿಸುತ್ತದೆ. PMAY ಯೋಜನೆಯು ನಾಲ್ಕು ಪ್ರಮುಖ ಅಂಶಗಳನ್ನು ಹೊಂದಿದೆ – ಇನ್–ಸಿಟು ಸ್ಲಂ ಪುನರಾಭಿವೃದ್ಧಿ, ಕ್ರೆಡಿಟ್–ಲಿಂಕ್ಡ್ ಸಬ್ಸಿಡಿ ಯೋಜನೆ, ಪಾಲುದಾರಿಕೆಯಲ್ಲಿ ಕೈಗೆಟುಕುವ ವಸತಿ ಮತ್ತು ಫಲಾನುಭವಿ–ನೇತೃತ್ವದ ನಿರ್ಮಾಣ.

PMAY ಅಡಿಯಲ್ಲಿ, ನೆರವಿನ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಬಯಲು ಪ್ರದೇಶಗಳಲ್ಲಿ 60:40 ಮತ್ತು ಈಶಾನ್ಯ ಮತ್ತು ಗುಡ್ಡಗಾಡು ರಾಜ್ಯಗಳಿಗೆ 90:10 ಅನುಪಾತದಲ್ಲಿ ಹಂಚಿಕೊಳ್ಳಲಾಗುತ್ತದೆ.

ಪುಟ 6 ಕ್ಕೆ





ಹತ್ತಿ ಬೆಳೆಗಾರರ ಸಮಾವೇಶ: ಕ್ವಿಂಟಾಲ್ ಹತ್ತಿಗೆ ಕನಿಷ್ಠ 12000ರೂ ಬೆಂಬಲ ಬೆಲೆಗೆ ಆಗ್ರಹ

ಯಶಸ್ವಿ ಹತ್ತಿ ಬೆಳೆಗಾರರ ರಾಜ್ಯ ಸಮಾವೇಶ
ಸಾರ್ವಜನಿಕ ಕ್ಷೇತ್ರ ಹತ್ತಿ ಸಂಶೋಧನೆಗೆ ಹೆಚ್ಚಿನ ಅನುದಾನಕ್ಕೆ ಆಗ್ರಹ

ನಕಲಿ ಹತ್ತಿ ಬೀಜ, ಕ್ರಿಮಿನಾಶಕ, ರಸಗೊಬ್ಬರ ಉತ್ಪಾದಕರ, ಮಾರಾಟಾಗಾರರ ಮೇಲೆ ಕಠಿಣ ಕಾನೂನು ಕ್ರಮಕ್ಕೆ ಒತ್ತಾಯಿಸಿ, ಹತ್ತಿ ಬೀಜ ಕಾಳಸಂತೆ ಮಾರಾಟ ತಡೆಗಟ್ಟಲು ಆಗ್ರಹಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರನ್ನು ನಿರ್ಲಕ್ಷ್ಯಿಸುವ ಧೋರಣೆಗಳನ್ನು ಅನುಸರಿಸುತ್ತಿವೆ. ಕೃಷಿಕರ ಆದಾಯ ನಿರಂತರವಾಗಿ ಕುಸಿಯುತ್ತಿದೆ. ಹತ್ತಿ ಬೆಳೆ ಉತ್ಪಾದನಾ ವೆಚ್ಚ ವಿಪರೀತವಾಗಿ ಏರಿಕೆಯಾಗುತ್ತಿದ್ದರೂ ಕನಿಷ್ಠ ಬೆಂಬಲ ಬೆಲೆ ನಿಗದಿಯಲ್ಲಿ ಮೀನಮೇಷ ಮಾಡಲಾಗುತ್ತಿದೆ ಎಂದು ಎಐಕೆಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ವಿಜು ಕೃಷ್ಣನ್ ಕಳವಳ ವ್ಯಕ್ತಪಡಿಸಿದರು.

ಯಾದಗಿರಿ ಜಿಲ್ಲೆ,ಶಹಾಪುರ ತಾಲ್ಲೂಕಿನ ಭೀಮರಾಯನ ಗುಡಿ ಕೃಷಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಕರ್ನಾಟಕ ಪ್ರಾಂತರೈತ ಸಂಘ ಆಯೋಜಿಸಿದ್ದ ಹತ್ತಿ ಬೆಳೆಗಾರರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ಹಿಂದಿನ ಬಿಜೆಪಿ ನೇತೃತ್ವದ ಕರ್ನಾಟಕ ರಾಜ್ಯ ಸರ್ಕಾರದ ಕೃಷಿ ಇಲಾಖೆ ಹತ್ತಿಗೆ ಲಾಭದಾಯಕ ಬೆಂಬಲ ಬೆಲೆ ಯಾಗಿ 14 ಸಾವಿರ ರೂ ನೀಡುವಂತೆ ಶಿಫಾರಸ್ಸು ಮಾಡಿದ್ದರೆ, ಅದೇ ಪಕ್ಷದ ಕೇಂದ್ರ ಸರ್ಕಾರ ಬೆಂಬಲ ಬೆಲೆಯಾಗಿ ಕೇವಲ 6600 ಘಿ ಘೋಷಣೆ ಮಾಡಿದೆ. ಉತ್ಪಾದನಾ ವೆಚ್ಚ ಕ್ಕಿಂತ ಕಡಿಮೆ ಬೆಂಬಲ ಬೆಲೆ ನಿಗದಿ ರೈತರನ್ನು ದಿವಾಳಿ ಮಾಡುವ ದುರುದ್ದೇಶದ್ದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಗ್ರ ಉತ್ಪಾದನಾ ವೆಚ್ಚ ಆಧರಿಸಿ ಬೆಂಬಲ ಬೆಲೆ ಇಲ್ಲದೇ ಇರುವುದರಿಂದ ಕರ್ನಾಟಕದ ಹತ್ತಿ ಬೆಳೆಗಾರರು ಕಳೆದ ವರ್ಷ ಒಂದರಲ್ಲೇ ಸುಮಾರು ಐದು ಸಾವಿರ ಕೋಟಿ ರೂಗಳ ನಷ್ಟ ಅನುಭವಿಸಿದ್ದಾರೆ ಎಂದು ದೂಷಿಸಿದರು.

ಮುಖ್ಯ ಆತಿಥಿಯಾಗಿ ಪಾಲ್ಗೊಂಡಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ ಯಶವಂತ ಮಾತನಾಡಿ, ಕೇಂದ್ರ ಸರ್ಕಾರದ ಆಮದು ನೀತಿ ಹತ್ತಿ ಬೆಳೆಗಾರರಿಗೆ ವಿರುದ್ಧವಾಗಿದೆ. ಯಾವುದೇ ಪ್ರಮಾಣ ನಿರ್ಬಂದ ಇಲ್ಲದೇ ಸುಂಕ ರಹಿತವಾಗಿ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಆಮದು ಕಾರಣದಿಂದಲೇ ವರ್ಷಗಟ್ಟಲೆ ಹತ್ತಿ ದಾಸ್ತಾನು ಮಾಡಿ ಕಾದರೂ ಬೆಲೆ ಸಿಗುತ್ತಿಲ್ಲ. ಇದರಿಂದ ಹತ್ತಿ ಬೆಳೆಗಾರರು ಸಾಲಭಾಧೆಗೆ ಸಿಲುಕಿತ್ತಿದ್ದಾರೆ. ಬೆಲೆ ಕುಸಿತದಿಂದ ಕಂಗೆಟ್ಟ ರೈತರ ಉತ್ಪನ್ನಗಳ ಖಾತರಿ ಖರೀದಿಗೆ ಜುಲೈ ನಲ್ಲಿ ಮಂಡಿಸುವ ಬಜೆಟ್ ನಲ್ಲಿ ಕನಿಷ್ಠ ಹತ್ತು ಸಾವಿರ ಕೋಟಿ ಆವರ್ಥ ನಿಧಿ ಮೀಸಲಿಡಬೇಕು ಎಂದು ಸಮಾವೇಶ ಆಗ್ರಹಿಸಿದೆ.

ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಅನುಕೂಲ ಮತ್ತು ಲಾಭಕ್ಕಾಗಿ ಸಂಶೋಧನೆಗಳನ್ನು ನಡೆಸುತ್ತಿವೆ .ರೈತ ಕೇಂದ್ರಿತ ಸಂಶೋದನೆ ಗಳು ನಡೆಯುತ್ತಿಲ್ಲ. ಎಲ್ಲಾ ಕೃಷಿ ತಂತ್ರಜ್ಞಾನ ಸಂಬಂಧಿಸಿದ ಸಂಶೋಧನೆಗಳು ಸಾರ್ವಜನಿಕ ಕ್ಷೇತ್ರಗಳಲ್ಲಿ



ನಡೆಯಬೇಕು. ಸಂಶೋಧನಾ ಖಾಸಗೀಕರಣ ದೇಶದ ಸ್ವಾವಲಂಬನೆ ಗೆ ಆಪಾಯ ಉಂಟು ಮಾಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ರಾಜ್ಯ ಸಮಾವೇಶದಲ್ಲಿ ಯಾದಗಿರಿ, ವಿಜಯಪುರ, ರಾಯಚೂರು, ಕಲ್ಬುರ್ಗಿ ಜಿಲ್ಲೆಗಳು ಸೇರಿದಂತೆ ಹತ್ತಿ ಬೆಳೆಯುವ ಪ್ರದೇಶದ ಜಿಲ್ಲೆಗಳ, ದೊಡ್ಡ ಸಂಖ್ಯೆಯ ಮಹಿಳೆಯರು ಸೇರಿದಂತೆ ಸುಮಾರು 300 ಕ್ಕೂ ರೈತರು ಭಾಗವಹಿಸಿ, ಕ್ವಿಂಟಾಲ್ ಹತ್ತಿಗೆ ಕನಿಷ್ಠ 12000ಘಿ ಕನಿಷ್ಟ ಬೆಂಬಲ ಬೆಲೆ ನೀಡಬೇಕು,ಸಾರ್ವಜನಿಕ ಕ್ಷೇತ್ರ ಹತ್ತಿ ಸಂಶೋಧನೆಗೆ ಹೆಚ್ಚಿನ ಅನುದಾನ ನೀಡಬೇಕು. ನಕಲಿ ಹತ್ತಿ ಬೀಜ, ಕ್ರಿಮಿನಾಶಕ, ರಸಗೊಬ್ಬರ ಉತ್ಪಾದಕರ, ಮಾರಾಟಾಗಾರರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕು, ಹತ್ತಿ ಬೀಜ ಕಾಳಸಂತೆ ಮಾರಾಟ ತಡೆಗಟ್ಟಬೇಕು ಎಂದು ಆಗ್ರಹಿಸಿ ನಿರ್ಣಯ ಅಂಗೀಕರಿಸಿದರು ಹಾಗೂ ಈ ನಿರ್ಣಯಗಳ ಜಾರಿಗೆ ಒತ್ತಾಯಿಸಿ ಜುಲೈ 3,2023 ರಂದು ಹತ್ತಿ ಬೆಳೆಯುವ ಪ್ರದೇಶಗಳ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟಿಸುವುದಾಗಿ ಘೋಷಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ ಯಾದಗಿರಿ ಜಿಲ್ಲಾ ಅಧ್ಯಕ್ಷ ಚನ್ನಪ್ಪ ಆನೇಗುಂದಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಕಲ್ಬುರ್ಗಿ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಡಾ.ಸಾಯಬಣ್ಣ ಗುಡುಬಾ, ರಾಯಚೂರು ಜಿಲ್ಲಾ ಅಧ್ಯಕ್ಷ ವೀರನಗೌಡ ಪಾಟೀಲ್, ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ, ವಿಜಯಪುರ ಜಿಲ್ಲಾ ಅಧ್ಯಕ್ಷ ಅಣ್ಣರಾಯ ಈಳೀಗೇರ, ಜಿಲ್ಲಾ ಕಾರ್ಯದರ್ಶಿ ಬೀಮರಾಯ ಪೂಜಾರಿ, ಯಾದಗಿರಿ ಜಿಲ್ಲಾ ಮುಖಂಡರುಗಳಾದ ಎಸ್.ಎಂ. ಸಾಗರ್, ಬೀಮರಾಯ ಪೂಜಾರ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜೂನ್ 20 ರಂದು ರಾಜ್ಯದಾದ್ಯಂತ ಪ್ರಭಟನೆಗೆ ಕರೆ

ಕರ್ನಾಟಕ ಸರಕಾರ ಜುಲೈ ಒಂದರಿಂದ ಎಲ್ಲ ಬಿಪಿಎಲ್, ಅಂತ್ಯೋದಯ ಕಾರ್ಡದಾರರಿಗೆ ಈಗ ನೀಡಲಾಗುತ್ತಿದ್ದ ಐದು ಕೇಜಿ ಅಕ್ಕಿಯನ್ನು ಹೆಚ್ಚಿಸಿ ತಲಾ 10 ಕೆ.ಜಿ. ಅಕ್ಕಿ ಅಥವಾ ಆಹಾರ ಧಾನ್ಯ ನೀಡಲು ನಿರ್ಧರಿಸಿ ಪ್ರಕಟಿಸಿದ್ದು ಸ್ವಾಗತಾರ್ಹವಾಗಿದೆ.

ಆದರೇ, ಒಕ್ಕೂಟ ಸರಕಾರವು ರಾಜ್ಯಕ್ಕೆ ಹೆಚ್ಚುವರಿ ಆಹಾರಧಾನ್ಯ ನೀಡುವಲ್ಲಿ ಸಂಕುಚಿತ ರಾಜಕೀಯ ಮಾಡುತ್ತಿರುವುದು ತೀವ್ರ ಖಂಡನೀಯವಾಗಿದೆ.

ರಾಜ್ಯ ಸರಕಾರದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಹೆಚ್ಚುವರಿ ಆಹಾರಧಾನ್ಯ ನೀಡಲು ಭಾರತ ಆಹಾರ ನಿಗಮದ ಅಧಿಕಾರಿಗಳು ಒಪ್ಪಿದ್ದರೂ ಕೂಡಾ, ಒಕ್ಕೂಟ ಸರಕಾರ ಬಡವರ ವಿರೋಧಿಯಾಗಿ ನಿಂತಿರುವುದು ಅಕ್ಷಮ್ಯವಾಗಿದೆ. ಬಿಜೆಪಿ ಮತ್ತು ಒಕ್ಕೂಟ ಸರಕಾರ ತಮ್ಮ ಸಂಕುಚಿತ ಜನ ವಿರೋದಿ ರಾಜಕಾರಣವನ್ನು ಈ ಕೂಡಲೇ ಕೈ ಬಿಟ್ಟು ಒಪ್ಪಂದದಂತೆ ಭಾರತ ಆಹಾರ ನಿಗಮದ ಮೂಲಕ ಆಹಾರ ಧಾನ್ಯಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಿಪಿಐ(ಎಂ) ಪಕ್ಷವು ಒಕ್ಕೂಟ ಸರಕಾರ ಹಾಗೂ ಪ್ರಧಾನ ಮಂತ್ರಿಗಳನ್ನು ಬಲವಾಗಿ ಒತ್ತಾಯಿಸಿದೆ.

ರಾಜ್ಯ ಸರಕಾರದ ಈ ಯೋಜನೆಯು ಬಡವರ ಹಸಿವು ನೀಗಿಸಲು ನೆರವಾಗುವ ಯೋಜನೆಯಾಗಿದ್ದು ಇದು ಹಸಿವಿನ ಸೂಚ್ಯಂಕದಲ್ಲಿ ಅತ್ಯಂತ ತಳ ಮಟ್ಟದಲ್ಲಿರುವ ನಮ್ಮ ದೇಶವನ್ನು ಸ್ವಲ್ಪವಾದರೂ ಮೇಲೆತ್ತುವ ಯೋಜನೆಯೆಂಬುದನ್ನು ಒಕ್ಕೂಟ ಸರಕಾರ ಅರಿಯಬೇಕು.

ಒಕ್ಕೂಟ ಸರಕಾರ ರಾಜ್ಯ ಹಿತದ ವಿರುದ್ಧ ನಗ್ನವಾಗಿ ನಿಂತಿರುವಾಗ ನಮ್ಮ ರಾಜ್ಯ ಬಹುತೇಕರು ಬಿಜೆಪಿ ಎಂಪಿಗಳಿರುವಾಗ ಅವರು ಬಾಯಿ ಹೊಲೆದುಕೊಂಡಿರುವುದು ಅವರ ವಿರೋದಿ ನೀತಿಯನ್ನು ಬಯಲುಗೊಳಿಸುತ್ತದೆ ಎಂದು ಕಟುವಾಗಿ ಟೀಕಿಸಿದೆ.

ಜನರಿಗೆ ಆಹಾರಧಾನ್ಯದ ಬದಲು ನಗದು ವರ್ಗಾವಣೆ ಮಾಡುವಂತೆ ಸೂಚಿಸುವ ಬಿಜೆಪಿ ಧೋರಣೆಯು ಬಡವರಪರವಾಗಿರದೇ ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಪರವಾದ ನೀತಿಯಾಗಿದೆ.

ಒಕ್ಕೂಟ ಸರಕಾರದ ಈ ಜನ ವಿರೋಧಿ ನೀತಿಯನ್ನು ಖಂಡಿಸಿ ರಾಜ್ಯದಾದ್ಯಂತ 20.06.2022 ರಂದು "ಒಕ್ಕೂಟ ಸರಕಾರದ ಬಡವರ ವಿರೋಧಿ ನೀತಿಯ ಭೂತ ದಹನ" ಮಾಡುವ ಮೂಲಕ ತೀವ್ರ ಪ್ರತಿಭಟನಾ ಪ್ರದರ್ಶನ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ತನ್ನೆಲ್ಲಾ ಘಟಕಗಳಿಗೆ ಮತ್ತು ರಾಜ್ಯದ ಜನತೆಗೆ ಕರೆ ನೀಡಿದೆ.

ಕೊರಗ ಕುಟುಂಬಗಳಿಗೆ ಭೂಮಿ ನೀಡುವಂತೆ ಆಗ್ರಹಿಸಿ ಧರಣಿ

ವರದಿ:ವಾ.ಉ.

ಡಾ. ಮಹಮ್ಮದ್ ಫೀರ್ ವರದಿಯಂತೆ ಪ್ರತಿ ಕೊರಗ ಕುಟುಂಬಗಳಿಗೆ ಭೂಮಿಯನ್ನು ನೀಡುವಂತೆ ಹಾಗೂ ನಾಡ ಗ್ರಾಮದ ಪಡುಕೋಣೆ ಕೊರಗ ಸಮುದಾಯದ ಭೂಮಿಗೆ ಸಂಬಂಧಿಸಿದ ವಿವಾದಗಳು, ಸಮಸ್ಯೆಗಳನ್ನು ಇತ್ಯರ್ಥಪಡಿಸುವಂತೆ ಒತ್ತಾಯಿಸಿ, ಉಡುಪಿ ಜಿಲ್ಲಾ ಕೊರಗ ಸಂಘಟನೆಗಳು ಹಾಗೂ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಜಿಲ್ಲಾ ಸಂಘಟನಾ ಸಮಿತಿ ನೇತೃತ್ವದಲ್ಲಿ ನಾಡ ಗ್ರಾಮ ಪಂಚಾಯತ್ ಎದುರು ಜೂನ್ 14 ರಂದು ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಗೊಂಡಿತ್ತು. ಧರಣಿ ಸ್ಥಳಕ್ಕೆ ಆಗಮಿಸಿದ ಬೈಂದೂರು ತಹಶೀಲ್ದಾರ್ ಶ್ರೀಕಾಂತ್ ಹೆಗ್ಡೆ ಧರಣಿ ನಿರತರಿಂದ ಮನವಿ ಸ್ವೀಕರಿಸಿ ಜಿಲ್ಲಾಧಿಕಾರಿ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ಅಧಿಕಾರಿಗಳ ಭರವಸೆ ಹಿನ್ನೆಲೆಯಲ್ಲಿ ಅಂದೇ ಸಂಜೆ ವೇಳೆ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಅಂತ್ಯಗೊಳಿಸಲಾಯಿತು.

ಧರಣಿಯನ್ನುದ್ದೇಶಿಸಿ ಮಾತನಾಡಿದ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಜಿಲ್ಲಾ ಸಂಚಾಲಕ ಶ್ರೀಧರ ನಾಡ, ಮೂಲನಿವಾಸಿಗಳಾದ ಪರಿಶಿಷ್ಟ ಪಂಗಡದ ಕೊರಗ ಸಮುದಾಯದ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ತೀವ್ರಗತಿಯಲ್ಲಿ ಕಡಿಮೆಯಾಗಿ ಅಳಿವಿನಂಚಿಗೆ ಸಾಗುತ್ತಿದೆ. ಸಮುದಾಯವನ್ನು ಉಳಿಸುವ ನಿಟ್ಟಿನಲ್ಲಿ ಕೊರಗ ಸಮುದಾಯದ ಮೇಲೆ ವಿಶೇಷ ಗಮನ ನೀಡುವುದು ಅಗತ್ಯವಿದೆ ಎಂದರು.

ಕೊರಗ ಸಮುದಾಯದ ಸಮಗ್ರ ಅಭಿವೃದ್ಧಿಗೆ ಸರಕಾರ 1994 ರಲ್ಲಿ ಡಾ. ಮಹಮ್ಮದ್ ಪೀರ್ ಆಯೋಗದ ವರದಿ ಅಂಗೀಕರಿಸಿದೆ. ಆದರೆ ಈ ವರದಿ ಜಾರಿಗೆ ತರುವಲ್ಲಿ ಸರಕಾರ ವಿಫಲವಾಗಿದೆ. ವರದಿ ಅನ್ವಯ ಪ್ರತಿ ಕೊರಗ ಕುಟುಂಬಗಳಿಗೆ 2.50 ಎಕರೆ ಭೂಮಿಯನ್ನು ನೀಡಬೇಕು. ನಾಡ ಗ್ರಾಪಂ ವ್ಯಾಪ್ತಿಯ ಕೊರಗ ಸಮುದಾಯದ ಭೂಮಿಗೆ ಸಂಬಂಧಿಸಿದ ವಿವಾದಗಳು ಸಮಸ್ಯೆಗಳನ್ನು ಬಗೆ ಹರಿಸಲು ಜಿಲ್ಲಾಧಿಕಾರಿ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಅವರು ಒತ್ತಾಯಿಸಿದರು.

ಕೊರಗ ಶ್ರೇಯೋಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಗಣೇಶ ವಿ. ಕೊರಗ, ಕೊರಗ ಸಂಘಟನೆ ಜಿಲ್ಲಾಧ್ಯಕ್ಷೆ ಗೌರಿ, ಬೈಂದೂರು ತಾಲೂಕು ಸಿಐಟಿಯು ಬೆಂಬಲಿತ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ರಾಜು ಪಡುಕೋಣೆ, ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್ ಕೋಣಿ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ನಾಗರತ್ನಾ ನಾಡ ಮೊದಲಾವರು ಉಪಸಿತರಿದ್ದರು.



ವೈಯಕ್ತಿಕ ದತ್ತಾಂಶ ಸೋರಿಕೆಯ ತನಿಖೆ ನಡೆಸಬೇಕು
–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಕೊವಿಡ್ ಲಸಿಕೆ ಪಡೆಯಲು ನೋಂದಾವಣೆಗಾಗಿ ಕೊವಿನ್ ಜಾಲತಾಣದಲ್ಲಿ ಸಲ್ಲಿಸಿದ್ದ ಭಾರತೀಯರ ಆಧಾರ್ ಕಾರ್ಡ್ ಸೇರಿದಂತೆ ವೈಯಕ್ತಿಕ ವಿವರಗಳ ವೈಯಕ್ತಿಕ ಮಾಹಿತಿಗಳ ಒಂದು ಬೃಹತ್ ದತ್ತಾಂಶ ಸೋರಿಕೆ ಸಂಭವಿಸಿದೆ ಎಂಬ ಆಘಾತಕಾರಿ ವರದಿಗಳು ಕಾಣಿಸಿಕೊಂಡಿವೆ ಎಂದು ವರದಿಯಾಗಿದೆ. ಇದು ಗಂಭೀರ ಕಳವಳಕಾರಿ ಸಂಗತಿ ಮತ್ತು ಎಲ್ಲಾ ಭಾರತೀಯರ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಘೋಷಿಸಿದ ಖಾಸಗಿತನದ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಹಿಂದೆ ಜೂನ್ 2021 ರಲ್ಲಿ ಇದೇ ರೀತಿಯ ಆರೋಪ ಬಂದಿದ್ದು, ಅದನ್ನು ಆರೋಗ್ಯ ಸಚಿವಾಲಯವು ನಿರಾಕರಿಸಿತ್ತು, ಆದರೂ ಅದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (MEITY) ಅಡಿಯಲ್ಲಿ ದತ್ತಾಂಶ–ಭೇದನೆಯನ್ನು ತಡೆಯುವ 'ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್'(CERT-In)ನಿಂದ ಈ ಬಗ್ಗೆ ತನಿಖೆಗೆ ಆದೇಶ ನೀಡಿತ್ತು. ಈ ತನಿಖೆಯ ವಿವರಗಳು ಇನ್ನೂ ಸಾರ್ವಜನಿಕವಾಗಿ ಲಭ್ಯವಾಗಿಲ್ಲ.

ಈ ಬಗ್ಗೆ ಒಂದು ಸಮಗ್ರ ತನಿಖೆಯನ್ನು ನಡೆಸಬೇಕು ಮತ್ತು ಭಾರತೀಯರ ವೈಯಕ್ತಿಕ ಮಾಹಿತಿಯ ಸುರಕ್ಷತೆಯಲ್ಲಿ ಇಂತಹ ದೊಡ್ಡ ಉಲ್ಲಂಘನೆಗೆ ಕಾರಣರಾದವರನ್ನು ಗುರುತಿಸಬೇಕು ಮತ್ತು ಅದು ಮರುಕಳಿಸದಂತೆ ತಡೆಗಟ್ಟುವ ಕ್ರಮವನ್ನು ಅನುಸರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಭವಿಷ್ಯನಿಧಿ ಪಿಂಚಣಿದಾರರ ಉಡುಪಿ ವಲಯ ಸಮಾವೇಶ ಉದ್ಘಾಟನೆ

ಸದ್ಯ ಭವಿಷ್ಯನಿಧಿ ಖಾತೆಯಲ್ಲಿ 5 ಕೋಟಿ ಚಂದಾದಾರರ ಒಟ್ಟು 11 ಲಕ್ಷ ಕೋಟಿ ರೂ. ಇದೆ. ಇದು ರಾಜ್ಯದ ಬಜೆಟ್ ಮೊತ್ತಕ್ಕಿಂತ ನಾಲ್ಕುಪಟ್ಟು ಜಾಸ್ತಿ. ಪ್ರತಿವರ್ಷ 9 ಸಾವಿರ ರೂ. ಕೋಟಿ ಆದಾಯ ಬರುತ್ತದೆ. ಆದುದರಿಂದ ಪಿಂಚಣಿದಾರರಿಗೆ ಕನಿಷ್ಟ ಇಂಚಣಿಯನ್ನು 9000 ರೂ.ಗೆ ಹೆಚ್ಚಿಸಬೇಕು. ಅಲ್ಲದೆ ಪ್ರತೀ ವರ್ಷ ಬೆಲೆ ಏರಿಕೆಯ ಆಧಾರದಲ್ಲಿ ಹೆಚ್ಚಾಗುವ ತುಟ್ಟಿಭತ್ತೆಯನ್ನು ಭವಿಷ್ಯನಿಧಿ ಪಿಂಚಣಿದಾರರಿಗೂ ನೀಡಬೇಕು ಎಂದು ಪಿಂಚಣಿದಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಕುಮಾರ್ ಒತ್ತಾಯಿಸಿದರು.

ಉಡುಪಿ ವಲಯ ಪಿಂಚಣಿದಾರರ ಸಂಘದ ವತಿಯಿಂದ ಜೂನ್ 3 ರಂದು ಉಡುಪಿಯಲ್ಲಿ ಆಯೋಜಿಸಲಾದ ಭವಿಷ್ಯನಿಧಿ ಪಿಂಚಣಿದಾರರ ಉಡುಪಿ ವಲಯ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು.

ಸಿಐಟಿಯು ಜಿಲ್ಲಾ ಮುಖಂಡ ಎಚ್.ನರಸಿಂಹ ಮಾತನಾಡಿ, ಭವಿಷ್ಯನಿಧಿ ಇಲಾಖೆಯಲ್ಲಿರುವ ಸಾವಿರಾರು ಕೋಟಿ ರೂ. ಇದ್ದರೂ ಆಳುವ ವರ್ಗಕ್ಕೆ ದುಡಿಯುವ ವರ್ಗದವರ ಬಗ್ಗೆ ಕಾಳಜಿ ಮತ್ತು ಇಚ್ಛಾಶಕ್ತಿ ಇಲ್ಲ. ಈಗಲೂ ಪಿಂಚಣಿ ಹಣವನ್ನು ಸಾಕಷ್ಟು ತೊಂದರೆ, ಕಿರುಕುಳ ಅನುಭವಿಸಿಯೇ ಪಡೆದಕೊಳ್ಳುತ್ತಿದ್ದೇವೆ. ನಾವು ಬೆವರು ಸುರಿಸಿ ಕಟ್ಟಿದ ಹಣವನ್ನು ಪಡೆಯಲು ಕಾನೂನಿನ ಸುಧಾರಣೆಯನ್ನು ಸರಕಾರ ಮಾಡುತ್ತಿಲ್ಲ ಎಂದು ದೂರಿದರು.

ಮುಖ್ಯ ಅತಿಥಿಗಳಾಗಿ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಕೋಶಾಧಿಕಾರಿ ಶಶಿಧರ ಗೊಲ್ಲ, ಉಡುಪಿ ಜಿಲ್ಲಾ ಬೀಡಿ ಫೆಡರೇಶನ್ ಅಧ್ಯಕ್ಷ ಮಹಾಬಲ ವಡೇರಹೋಬಳಿ, ಬೀಡಿ ಸಂಘದ ಬಲ್ಕೀಸ್ ಮೊದಲಾದವರು ಉಪಸ್ಥಿತರಿದ್ದರು.

'ಪ್ರಧಾನ ಮಂತ್ರಿ ಆವಾಸ್ ಯೋಜನೆ'.......... ಪುಟ 4 ರಿಂದ

ಮನೆಯ ಸಂಪೂರ್ಣ ವೆಚ್ಚವಲ್ಲ

ಮನೆ ಇಲ್ಲದ ಎಲ್ಲರಿಗೂ ಮನೆ ಎಂದಾಕ್ಷಣ ಬಡ ಕುಟುಂಬಗಳು ತಮಗೆ ಸರ್ಕಾರ ಉಚಿತವಾಗಿ ಮನೆ ಕೊಡುತ್ತದೆ ಎಂದೇ ನಂಬುತ್ತಾರೆ. ಆದರೆ, ಇದು ನಿಜವಲ್ಲ. ಅಲ್ಪ ಪ್ರಮಾಣದ ಸಹಾಯ ಧನ ನೀಡುತ್ತಾರೆ. ಉಳಿದಂತೆ ಒಂದು ನಿರ್ಧಿಷ್ಟ ಪ್ರಮಾಣದ ಸಾಲದ ಮೇಲಿನ ಬಡ್ಡಿ ರಿಯಾಯಿತಿ ದರದಲ್ಲಿ ಇರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ PMAY (ಗ್ರಾಮೀಣ) ಯೋಜನೆಯ ಮೂಲಕ ಎಸ್.ಸಿ./ಎಸ್.ಟಿ ಕುಟುಂಬಗಳಿಗೆ 1.65 ಲಕ್ಷ ಮತ್ತು ಸಾಮಾನ್ಯ ವರ್ಗದ ಕುಟುಂಬಗಳಿಗೆ 1.20 ಲಕ್ಷ ಧನಸಹಾಯ ಸಿಗುತ್ತದೆ. ಈ ಹಣವನ್ನು ಮರುಪಾವತಿ ಮಾಡಬೇಕಿಲ್ಲ. (ಈ ಧನಸಹಾಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲಿದೆ) ಈ ಲಾಭ ಪಡೆಯಬೇಕಾದರೆ ಮನೆ ಕಟ್ಟಲು ಸ್ವಂತ ಜಾಗ ಹೊಂದಿರಬೇಕು. ಸ್ವಂತ ಜಾಗ ಹೊಂದಿದ್ದರೂ, ಕಟ್ಟಡ ಸಾಮಗ್ರಿಗಳ ಬೆಲೆಗಳ ಈ ದುಬಾರಿ ಕಾಲದಲ್ಲಿ ಈ ಅಲ್ಪ ಹಣದಲ್ಲಿ ಮನೆ ಕಟ್ಟಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಯೂ ಮೂಡುತ್ತದೆ. ಒಂದಷ್ಟು ಹಣ



PMAY ಘೋಷಣೆ ಸಂದರ್ಭದಲ್ಲಿ ಬೆಂಗಳೂರಿನ CS ಸೆಂಟರ್ ಒಂದರ ಬಳಿ ಇಟ್ಟಿದ್ದ ಫಲಕ

ಕೂಡಿಟ್ಟಿರಬೇಕು. ಬ್ಯಾಂಕುಗಳು ಬಡವರಿಗೆ ಸಾಲ ಕೊಡುತ್ತವೆ ಎಂದು ನಂಬಲಾಗದು. ಒಂದು ವೇಳೆ ಕೊಟ್ಟರೂ ಬಡಜನತೆಗೆ ಪ್ರತಿ ತಿಂಗಳು ಸಾಲದ ಕಂತು ಪಾವತಿಸುವಷ್ಟು ಆದಾಯ ಇರಲಾರದು.

ಒಂದು ಮಾಹಿತಿಯ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಫಲಾನುಭವಿಗಳಿಗೆ ಬಿಬಿಎಂಪಿ ನೆರವಿನ ಹಣವೂ ಸೇರಿದಂತೆ ವಿವಿಧ ವಸತಿ ಯೋಜನೆಗಳಿಂದ ಒದಗಿಸಲಾಗುವ ಧನಸಹಾಯದ ಮೊತ್ತ 5,000 ರೂಗಳನ್ನು ಬಿಬಿಎಂಪಿ ಕೊಡುತ್ತದೆ. ಇದನ್ನು ಪಡೆಯಲು ನಗರ ಮಿತಿಯೊಳಗೆ ಸ್ವಂತ ನಿವೇಶನ ಇರಬೇಕು, ಮಾತ್ರವಲ್ಲ ಶಾಸಕರು, ಸಂಸದರು ಅಥವಾ ಪಾಲಿಕೆಯ ಸದಸ್ಯರ ಶಿಫಾರಸ್ಸು ಪಡೆಯಲೇ ಬೇಕು. ಅಥವಾ ಮಧ್ಯವರ್ತಿಗಳ ಮೂಲಕ ಸಂಭಂದಪಟ್ಟ ಆಧಿಕಾರಿಕಾಗಳಿಗೆ ಲಂಚ ಕೊಡಬೇಕು. ಬೇರೆ ಬೇರೆ ನಗರಗಳಲ್ಲಿ ಆಯಾ ನಗರಗಳ ಬಜೆಟ್ ಮೀಸಲನ್ನು ಅವಲಂಭಿಸಿ ಸಹಾಯಧನದ ಮೊತ್ತದಲ್ಲಿ ವ್ಯತ್ಯಾಸ ಇರುತ್ತದೆ.

ಸಾಲದ ಮೇಲಿನ ಬಡ್ಡಿಗೆ ಸಬ್ಸಿಡಿ:

ಈ ಮೊದಲೇ ಮನೆ ಇಲ್ಲದ ಕುಟುಂಬಗಳು ಹೊಸ ಮನೆ ಕಟ್ಟಲು ಮಾಡುವ ಸಾಲದ ಮೇಲಿನ ಬಡ್ಡಿಗೆ ಸರ್ಕಾರ ಒಂದಷ್ಟು ಸಬ್ಸಿಡಿ ಕೊಡುತ್ತದೆ. ವಾರ್ಷಿಕವಾಗಿ 3 ಲಕ್ಷದವರೆಗೆ ಆದಾಯ ಇರುವ 'ಆರ್ಥಿಕವಾಗಿ ದುರ್ಬಲ ವಿಭಾಗ' (EWS) ಮತ್ತು 3–6 ಲಕ್ಷ ಆದಾಯವಿರುವ 'ಕಡಿಮೆ–ಆದಾಯದ ಗುಂಪುಗಳು' (LIG) ಕುಟುಂಬಗಳಿಗೆ 6 ಲಕ್ಷದವರೆಗೆ ಸಾಲ ಹಾಗೂ ಶೇ. 6.5 ರಷ್ಟು ಬಡ್ಡಿ ರಿಯಾಯಿತಿ ಸಿಗುತ್ತದೆ. 6–12 ಲಕ್ಷ ಆದಾಯವಿರುವ ಮಧ್ಯಮ–ಆದಾಯದ ಗುಂಪಿಗೆ I (MIG I) ಸೇರಿದ ಕುಟುಂಬಗಳಿಗೆ 9 ಲಕ್ಷದವರೆಗೆ ಸಾಲ ಮತ್ತು ಶೇ. 4 ರಷ್ಟು ಬಡ್ಡಿ ರಿಯಾಯಿತಿ, 12–18 ಲಕ್ಷ ಆದಾಯವಿರುವ MIG II ಕುಟುಂಬಗಳಿಗೆ 12 ಲಕ್ಷ ಸಾಲ ಮತ್ತು ಶೇ. 3ರಷ್ಟು ಬಡ್ಡಿ ರಿಯಾಯಿತಿ ನೀಡಲಾಗುತ್ತದೆ. ಸಾಲದ ಅವಧಿ 20 ವರ್ಷಗಳು. ಈ ಎಲ್ಲಾ ವಿಭಾಗದ ಫಲಾನುಭವಿಗಳಿಗೆ ಒಟ್ಟಾರೆ ಸಿಗುವ ಬಡ್ಡಿ ಮೇಲಿನ ಸಬ್ಸಿಡಿ ರೂ. 2.30 ಲಕ್ಷದಿಂದ 2.65 ಲಕ್ಷ ರೂಪಾಯಿ ಮಾತ್ರ. (ಪಟ್ಟಿ ನೋಡಿ)

ಅಂದರೆ, ಮಾಸಿಕ 50 ಸಾವಿರದಿಂದ ಒಂದೂವರೆ ಲಕ್ಷ ಆದಾಯ ಇರುವ ಕುಟುಂಬಗಳಿಗೂ ಈ ಯೋಜನೆಯನ್ನು ವಿಸ್ತರಿಸಲಾಗಿದೆ. ಮನೆ ಕಟ್ಟಲು

Pradhan Mantri Awas Yojana Eligibility Parameters

Particulars	EWS	LIG	MIG I	MIG II
Total household income	Upto Rs 3 Lakhs	Rs 3 -6 Lakhs	Rs 6 -12 Lakhs	Rs 12 -18 Lakhs
Max loan tenure	20 years	20 years	20 years	20 years
Max dwelling unit carpet area	30 sq. m.	60 sq. m.	160 sq. m.	200 sq. m.
Max loan amount allowed for subsidy	Rs 6 Lakhs	Rs 6 Lakhs	Rs 9 Lakhs	Rs 12 Lakhs
Subsidy	6.50%	6.50%	4.00%	3.00%
Discount rate for net present value (NPV) calculation of interest subsidy (%)	9.00%	9.00%	9.00%	9.00%
Max. interest subsidy amount	Rs 2,67,280	Rs 2,67,280	Rs 2,35,068	Rs 2,30,156

ಅಥವಾ ಖರೀದಿಸಲು ಆರ್ಥಿಕ ಸಾಮರ್ಥ್ಯ ಹೊಂದಿರುವ ಕುಟುಂಬಗಳು ಮಾತ್ರ ಪ್ರಧಾನ್ ಮಂತ್ರಿ ಆವಾಸ್ ಯೋಜನೆಯ ಹೆಚ್ಚು ಲಾಭ ಪಡೆಯುತ್ತಾರೆ. ಅಂದರೆ, ವಸತಿ ಇಲ್ಲದ, ಮನೆ ಕಟ್ಟಲು ಜಾಗ ಇಲ್ಲದ, ಮನೆ ಕಟ್ಟಲು ಅಥವಾ ಖರೀದಿಸಲು ಒಂದಷ್ಟು ಹಣ ಹೊಂದಿಸಲಾಗದ, ಬ್ಯಾಂಕುಗಳಲ್ಲಿ ಸಾಲ ಪಡೆಯಲು ಅರ್ಹರಲ್ಲದ, ಪಡೆದರೂ ಸಾಲದ ಮಾಸಿಕ ಕಂತು ಕಟ್ಟಲಾಗದಷ್ಟು ಆದಾಯವಿಲ್ಲದ ಕಡು ಬಡವರಿಗೆ, ಬಿಪಿಎಲ್ ಕುಟುಂಬಗಳಿಗೆ ಈ ಸೌಲಭ್ಯ ಮರೀಚಿಕೆಯಾಗಿದೆ. ಈ ಹಿಂದಿನ 'ಆಶ್ರಯ' ಮುಂತಾದ ವಸತಿ ಯೋಜನೆಯಂತೆ ವಸತಿ ಇಲ್ಲದ ಬಡವರಿಗೆ ಉಚಿತವಾಗಿ ನಿವೇಶನ ಮತ್ತು ಮನೆ ನಿರ್ಮಾಣ ಅಥವಾ ಸರ್ಕಾರವೇ ಸಮೂಹ ವಸತಿ ಗೃಹಗಳ ನಿರ್ಮಾಣ ಮಾಡಿ ಹಂಚುವ ಕೆಲಸಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿಲ್ಲ.

ಕುಂಟುತ್ತಾ ಸಾಗುತ್ತಿರುವ 'ಆಶ್ರಯ ಯೋಜನೆ'

ರಾಜ್ಯ ಸರ್ಕಾರ ಆಶ್ರಯ ಯೋಜನೆಯಡಿಯಲ್ಲಿ ರಾಜೀವ್ ಗಾಂಧಿ ರೂರಲ್ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್ (RGRHCL) ಮೂಲಕ ರೈತರಿಂದ ಭೂಮಿ ಖರೀದಿಸಿ, ನಿವೇಶನ ಮತ್ತು ವಸತಿ ಇಲ್ಲದ ಬಡವರಿಗೆ ಉಚಿತ ನಿವೇಶನ ನೀಡಲಾಗುತ್ತದೆ. ಈ ವಸತಿ ಯೋಜನೆಗೆ ಬಸವ, ಅಂಬೇಡ್ಕರ್ ಎಂಬಿತ್ಯಾದಿ ಹೆಸರುಗಳನ್ನು ಇಡಲಾಗಿದೆ. ಆದರೆ, ರಾಜ್ಯ ಸರ್ಕಾರದ ನಿರಾಸಕ್ತಿ ಮತ್ತು ಭೂಮಿ ವಶಕ್ಕೆ ಪಡೆಯಲು ಅಗತ್ಯವಾದ ಹಣಕಾಸಿನ ನೆರವು ನೀಡುವಲ್ಲಿ ಮೀನಾ ಮೇಷ ಎಣಿಸುತ್ತಿರುವುದರಿಂದ ಇದೂ ಸಹ ಕುಂಟುತ್ತಾ ಸಾಗಿದೆ. ಆಶ್ರಯ ಯೋಜನೆಗೆ ರೈತರು ಭೂಮಿ ಕೊಡಲು ಒಪ್ಪುತ್ತಿಲ್ಲ ಎಂಬ ಕುಂಟು ನೆಪ ಹೇಳುವ ರಾಜ್ಯ ಸರ್ಕಾರ, ಕೈಗಾರಿಕಾ ಅಭಿವೃದ್ಧಿ ಹೆಸರಿನಲ್ಲಿ ಸಾವಿರಾರು ಎಕರೆ ಭೂಮಿಯನ್ನು ರೈತರ ವಿರೋಧವನ್ನೂ ಲೆಕ್ಕಿಸದೆ ಬಲವಂತವಾಗಿ ವಶಕ್ಕೆ ಪಡೆಯುತ್ತದೆ.

ಉಚಿತ ನಿವೇಶನ ಹಂಚುವಲ್ಲಿ ಪ್ರಧಾನ್ ಮಂತ್ರಿ ಆವಾಸ್ ಯೋಜನೆಯ ಪಾಲಿಲ್ಲ ಎಂಬುದನ್ನು ಗಮನಿಸಬೇಕು. ನಿವೇಶನ ಪಡೆದ ನಂತರವೇ ಪಿಎಂಎವೈ ಮೂಲಕ ಗ್ರಾಮೀಣ ಪ್ರದೇಶದ ಫಲಾನುಭವಿಗಳು 1.20 ಲಕ್ಷ ಅಥವಾ 1.65 ಲಕ್ಷ ರೂಪಾಯಿ ಧನಸಹಾಯ ಪಡೆಯಬಹುದಷ್ಟೆ.

ಮೋದಿಯವರ ಭರವಸೆಯನ್ನು ನಂಬಿ ಸ್ವಂತ ಮನೆ ಕನಸು ಕಂಡ ಬಡವರು ನಿರಾಶರಾಗಿದ್ದಾರೆ. 8 ವರ್ಷಗಳ ಹಿಂದೆ ಕೊಟ್ಟಿದ್ದ 2022ರ ಗಡುವು ಮುಗಿದಿದೆ. ಈ ಯೋಜನೆಯನ್ನು 2024ರ ವರೆಗೆ ಮತ್ತೆ ವಿಸ್ತರಿಸಲಾಗಿದೆ. ಕೋಟ್ಯಾಂತರ ಕುಟುಂಬಗಳು ಸ್ವಂತ ಮನೆಗಳಿಗಾಗಿ ಆಸೆಗಣ್ಣಿನಿಂದ ಕಾಯುತ್ತಿದ್ದಾರೆ. ಈ ಅವಧಿಯಲ್ಲೂ ಕಡು ಬಡವರಿಗೆ ಸ್ವಂತಮನೆ ಎಂಬುದು ಮರೀಚಿಕೆಯಾಗಿಯೇ ಉಳಿಯುತ್ತದೆ. ಮೇಲ್ವರ್ಗದ ಜನರಿಗೆ ಹೆಚ್ಚು ಲಾಭ ತರುವಂತೆ ಮಾಡಿದ ವಸತಿ ಯೋಜನೆಯನ್ನೇ ಜನಸಾಮಾನ್ಯರ ಯೋಜನೆ ಎಂದು ಮೋದಿ ಸರ್ಕಾರ ಬಿಂಬಿಸತೊಡಗಿದೆ.

ಜಗತ್ತಿಗೆ ಶಸ್ತ್ರಾಸ್ತ್ರಗಳ ಅಗತ್ಯವಿದೆಯೇ? ಭೂಮಿಯ ಬಾಳಿಕೆ ಮುಖ್ಯವೇ?

2014 ರಿಂದ, ಅದಕ್ಕೂ ಮೊದಲು ಮತ್ತು ಇಲ್ಲಿಯವರೆಗೂ ನಮ್ಮ ಭಾರತದ ಒಕ್ಕೂಟ ಸರ್ಕಾರವು ದೇಶದ ಭದ್ರತೆಗಾಗಿ ವಿದೇಶಗಳಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುತ್ತಿದೆ. ಫ್ರಾನ್ಸ್ ನ ರಫೇಲ್ ಯುದ್ಧ ವಿಮಾನಗಳು, ಅಮೇರಿಕದ ಹೆಲಿಕಾಪ್ಟರ್ ಗಳು, ರಷ್ಯಾದ ಟೈಪ್ 203 ಗನ್ ಗಳು, ಆರು ಲಕ್ಷ ಎಸ್. 400 ಕ್ಷಿಪಣಿಗಳು, ಇಂಗ್ಲೆಂಡಿನ ಯುದ್ಧನೌಕೆಗಳು, ಬಂದೂಕುಗಳು ಇತ್ಯಾದಿ ಪ್ರಮುಖವಾದವುಗಳು. ಇವು ಯಾವುದಕ್ಕಾಗಿ? ಭಾರತ ದೇಶದ ಗಡಿಯನ್ನು ರಕ್ಷಿಸುವುದೇ? ಇಲ್ಲಾ, ಪ್ರತಿನಿತ್ಯ ತೊಂದರೆ ಕೊಡುವ ವಿರೋಧ ಪಕ್ಷಗಳ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹತ್ತಿಕ್ಕುವುದೇ? ರಾಷ್ಟ್ರೀಯ ಭದ್ರತೆ ಮುಖ್ಯ ಎನ್ನುವುದರಲ್ಲಿ ಯಾವುದೇ ಬಿನ್ನ ಅಭಿಪ್ರಾಯವಿಲ್ಲ. ಇದರ ಅಗತ್ಯವೂ ಇದೆ. ಯಾವುದು ಅನಗತ್ಯ! ಶಸ್ತ್ರಾಸ್ತ್ರಗಳ ವ್ಯಾಪಾರದಲ್ಲಿ ಕನಿಷ್ಠ ಪಕ್ಷ ಪಾರದರ್ಶಕತೆ ಬೇಕು ಎಂಬುದನ್ನು ನಮ್ಮ ಜನಪ್ರತಿನಿಧಿಗಳಿಂದ ನಿರೀಕ್ಷಿಸಲಾದೀತೆ!

ದೇಶ ದೇಶಗಳ ನಡುವೆ ಸಮಸ್ಯೆಯಾದರೆ ಶಾಂತಿಯ ಮಾತಿಗೆ ಬೆಲೆಯಿಲ್ಲವೇ? ಎಲ್ಲಾ ಜಾಗತಿಕ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಪರಿಹರಿಸಲು ವಿಶ್ವಸಂಸ್ಥೆ ಅಸ್ತಿತ್ವದಲ್ಲಿದೆ. ಇದಲ್ಲದೆ, ಪ್ರತಿ ದೇಶವು ಸಾರ್ಕ್, ಬ್ರಿಕ್ಸ್, ಕಾಮನ್ವೆಲ್ತ್ ರಾಷ್ಟ್ರಗಳು, ಅಲಿಪ್ತ ರಾಷ್ಟ್ರಗಳು ಮತ್ತು NATO, G7, G20, OPEC ಸಂಘಟನೆಗಳಲ್ಲಿ ಒಂದಾಗಿ ಸಂಯೋಜಿಸಲ್ಪಟ್ಟಿದೆ. ಈಗಿದ್ದರೂ ಏಕೆ ಯುದ್ಧ, ಶಸ್ತ್ರಾಸ್ತ್ರಗಳ ಖರೀದಿ ಮತ್ತು ಸಂಗ್ರಹ? ಇಂತಹ ಸಂಘಟನೆಗಳೊಳಗೆ ಆಯಾ ದೇಶಗಳ ಸಮಸ್ಯೆಗಳನ್ನು ಚರ್ಚಿಸಿ ಪರಿಹರಿಸದೆ, ದೇಶಗಳ ಆದಾಯದ ಹೆಚ್ಚಿನ ಭಾಗವನ್ನು ಸೇನೆಗೆ ಹಂಚಲಾಗುತ್ತದೆ ಏಕೆ! ಸೇನೆ ಇದುವರೆಗೆ ಎಷ್ಟು ಸಮಸ್ಯೆಗಳನ್ನು ಸುಗಮವಾಗಿ ಪರಿಹರಿಸಿದೆ? ಮಿಲಿಟರಿ ಉಪಕರಣಗಳನ್ನು ಉತ್ಪಾದಿಸುವ ಸಾಮ್ರಾಜ್ಯಶಾಹಿ ದೇಶಗಳು ವಿಭಜನೆಯ ತಂತ್ರದ ಮೂಲಕ ಪ್ರತಿಯೊಂದು ದೇಶದ ರಾಜಕೀಯ ಅಧಿಕಾರದಲ್ಲಿ ನುಸುಳಿ, ಉಪಕರಣಗಳನ್ನು ಖರೀದಿಸುವಂತೆ ಮಾಡುವ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತವೆ ಎಂಬುದು ಸತ್ಯ. ಇದನ್ನು ಜಗತ್ತಿನ ರಾಷ್ಟ್ರಗಳು ಅರಿತುಕೊಳ್ಳಬೇಕು. ಮಿಲಿಟರಿ ಶಸ್ತ್ರಾಸ್ತ್ರಗಳ ಮೇಲಿನ ಜಾಗತಿಕ ವೆಚ್ಚ ಸುಮಾರು 175 ಲಕ್ಷ ಕೋಟಿ ರೂಪಾಯಿ. ನಮ್ಮ ಭಾರತ ಸರ್ಕಾರ 2023ರ ಒಂದು ವರ್ಷದ ಅವಧಿಯಲ್ಲೇ ಸೇನೆಗೆ 5.94 ಲಕ್ಷ ಕೋಟಿ ರೂ. ಮೀಸಲಿಟ್ಟಿದೆ. ರೂ.1,06,800 ಕೋಟಿಗಳನ್ನು ಸ್ಥಳೀಯವಾಗಿ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಇದು ಮೀಸಲಿಡಲಾಗಿದೆ. ಅತ್ಯಂತ ಅಪಾಯಕಾರಿ ಅಂಶವೆಂದರೆ ಅದರಲ್ಲಿ ಖಾಸಗಿ ಕಂಪನಿಗಳೂ ಸೇರಿವೆ.

ಜಗತ್ತಿನ 260 ಕೋಟಿ ಜನರಿಗೆ ಶೌಚಾಲಯವಿಲ್ಲ

ಈ ಪರಿಸ್ಥಿತಿಯಲ್ಲಿ ಪ್ರತಿಯೊಂದು ದೇಶವೂ ಅಸ್ತ್ರಗಳನ್ನು ಸಂಗ್ರಹಿಸುತ್ತಿದೆ, ಆದರೆ ಇನ್ನೊಂದೆಡೆ ಜಗತ್ತು ಮತ್ತು ಜನರು ಹೇಗಿದ್ದಾರೆ ಎಂದು ಸ್ವಲ್ಪ ಅಧ್ಯಯನ ಮಾಡಿದರೆ, ನಮ್ಮ ತಲೆ ತಿರುಗುವಂತಾಗುತ್ತದೆ. ಪ್ರಪಂಚದಲ್ಲಿ 2.6 ಬಿಲಿಯನ್ ಜನರಿಗೆ ಶೌಚಾಲಯಗಳಿಲ್ಲ. ಇವರಲ್ಲಿ 60 ಕೋಟಿ ಜನರು ಭಾರತದಲ್ಲೇ ಇದ್ದಾರೆ. ವಾಯು ಮಾಲಿನ್ಯದಿಂದಾಗಿ ಪ್ರತಿಯೊಬ್ಬ ಭಾರತೀಯನೂ ತನ್ನ ಜೀವನದ ಒಂಬತ್ತು ವರ್ಷಗಳನ್ನು ಕಳೆದುಕೊಳ್ಳುತ್ತಾನೆ. 2100ನೇ ಇಸವಿಯ ವೇಳೆಗೆ ಜಗತ್ತು ಬೆಚ್ಚಗಾಗುತ್ತಿದ್ದಂತೆ ಅಂಟಾರ್ಕ್ಟಿಕಾದ ಮಂಜುಗಡ್ಡೆಗಳು ಕರಗಿ ಸಮುದ್ರಮಟ್ಟ ಹೆಚ್ಚಲಿದ್ದು, ಟ್ಯುಟಿಕೋರಿನ್, ಚೆನ್ನೈ ಹಾಗೂ ಸಾಗರದ ಮಧ್ಯದಲ್ಲಿರುವ ಪುಟ್ಟ ದ್ವೀಪಗಳು ಮುಳುಗಲಿವೆ. ಅರಣ್ಯನಾಶ ಮತ್ತು ಇಂಗಾಲದ ಡೈಆಕ್ಸೈಡ್ನ ಹೆಚ್ಚಿನ ಹೊರಸೂಸುವಿಕೆಯಿಂದಾಗಿ 1986 ರಿಂದ ಜಗತ್ತು ತನ್ನ ಗುಣಮಟ್ಟದ ಹವಾಮಾನ ಬದಲಾವಣೆಯ ಸೂತ್ರದಿಂದ ವಿ ಪ' ಥ' ಗ' ಾ ಂ ಡಿ ದ'. ಅದಕ್ಕಾಗಿಯೇ ಕಾಡುಗಳು ಇದ್ದಕ್ಕಿದ್ದಂತೆ ಉರಿಯುತ್ತಿವೆ. ಎರಡು ವರ್ಷಗಳ ಮಳೆ ಎರಡು ಗಂಟೆಗಳಲ್ಲಿ ಬೀಳುತ್ತದೆ. ಇದರಿಂದ ಕೆಲವು ನಗರಗಳು ಜಲಾವೃತವಾಗಿವೆ. ಇನ್ನು 20 ವರ್ಷಗಳಲ್ಲಿ ನಮ್ಮ ಭೂಮಿ ವಾಸಕ್ಕೆ ಯೋಗ್ಯವಲ್ಲದ ಸ್ಥಳವಾಗುವ ಅಪಾಯವಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಇತ್ತೀಚಿನ ಯುಎನ್ 2023–2027 ರಿಂದ ನಮ್ಮ ಗ್ರಹಕ್ಕೆ ಅಭೂತಪೂರ್ವ ಶಾಖವನ್ನು ಹೊಡೆಯುತ್ತದೆ ಎಂದು ಎಚ್ಚರಿಸಿದೆ.



ಮನುಕುಲಕ್ಕೆ ಅಪಾಯ

ಜಾಗತಿಕ ತಾಪಮಾನವನ್ನು ತಡೆಗಟ್ಟಲು ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಜಗತ್ತಿನ ದೇಶಗಳು ನಿಯತಕಾಲಿಕವಾಗಿ ಸಮ್ಮೇಳನಗಳನ್ನು ನಡೆಸುತ್ತವೆ ಮತ್ತು ನಿರ್ಣಯಗಳನ್ನು ಮಾಡುತ್ತವೆ. ಸಭೆಗಳ ನಂತರ, ನಿರ್ಣಯಗಳನ್ನು ಮರೆತು ವ್ಯವಹಾರದಲ್ಲಿ ಮುಳುಗುತ್ತಾರೆ. ಸತ್ಯವೇನೆಂದರೆ ಇಡೀ ಮನುಕುಲಕ್ಕೆ **"ಮರಣ ಶಿಕ್ಷೆ"** ಬರೆಯಲಾಗಿದೆ. ಶಿಕ್ಷೆ ನಿಧಾನವಾಗಿ ನಮ್ಮತ್ತ ಸಾಗುತ್ತಿದೆ. ಅಂತಹ ಅಪಾಯವನ್ನು ಅರ್ಥಮಾಡಿಕೊಳ್ಳಲು ವಿಶ್ವ ನಾಯಕರು ಏಕೆ ನಿರಾಕರಿಸುತ್ತಾರೆ? ಮಾನವ ಕುಲವಿದ್ದರೆ ಹೋರಾಡಲು ಆಯುಧಗಳು ಬೇಕು. ಮಾನವ ಕುಲವೇ ಇಲ್ಲವಾದಾಗ ಕೇವಲ ಆಯುಧಗಳಿಂದ ಯಾರು ಹೋರಾಡಬಹುದು? ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದು ವಿಷಪೂರಿತ ಹಾವುಗಳನ್ನು ನಮ್ಮ ಮಲಗುವ ಕೋಣೆಯಲ್ಲಿ ಇರಿಸುವುದಕ್ಕೆ ಸಮಾನವಾಗಿದೆ. ತನಗೆ ಮಾತ್ರ ಐದು ಸುತ್ತಿನ ರಕ್ಷಣೆ, ಶಸ್ತ್ರಸಜ್ಜಿತ ಮೆರವಣಿಗೆ ಬಯಸುವ ವಿಶ್ವ ನಾಯಕರ ದೃಷ್ಠಿಯಲ್ಲಿ ಕೋಟ್ಯಂತರ ಜನರು ಊಟ, ವಸತಿ ಇಲ್ಲದೇ ನರಳುತ್ತಿರುವುದು ಅವರಿಗೇಕೆ ಕಾಣುತ್ತಿಲ್ಲ? ನಾವು ಜೀವಿಸಿದ್ದೇವೆ ಮತ್ತು ನಮ್ಮ ಮುಂದಿನ ಜನಾಂಗಕ್ಕೆ ವಾಸಯೋಗ್ಯ ಭೂಮಿಯನ್ನು ಉಳಿಸುವುದು ಸಂಸ್ಕೃತಿ ಮತ್ತು ನಾಗರಿಕತೆಯಾಗಿದೆ. ಇದನ್ನು ಅರಿಯದೇ ಹೋದರೆ ನಮ್ಮ ಕಣ್ಣೆದುರೇ ಭೂ ಖಂಡಗಳು ತುಂಡು ತುಂಡಾಗಬಹುದು. ಲಕ್ಷ ದ್ವೀಪಗಳಂತೆ ಇನ್ನಷ್ಟು ಲಕ್ಷ ದ್ವೀಪಗಳು ರೂಪುಗೊಳ್ಳಬಹುದು. ಸಾವಿನ ಕಿರುಚಾಟ ನಮ್ಮ ಕಿವಿಗೆ ಬೀಳಬಹುದು.

ಈಗ ನಾವೇನು ಮಾಡಬೇಕು?

ಜಗತ್ತಿನಲ್ಲಿ ಪ್ರತಿದಿನ 80 ಸಾವಿರ ಎಕರೆ ಭೂಮಿ ನಾಶವಾಗುತ್ತಿದೆ. ಇದನ್ನು ತಡೆಯಬೇಕು. ಒಂದು ಮರ ಕಡಿದರೆ 50 ಸಸಿಗಳನ್ನು ನೆಡಬೇಕು. ಪರಾಗಸ್ಪರ್ಶದ ಮೂಲಕ ಹಣ್ಣುಗಳು, ಯಾಂತ್ರಿಕವಾಗಿ ಮಾನವರಿಗೆ ಉಡುಗೊರೆಯಾಗಿ ನೀಡುತ್ತಿರುವ ಹಾರುವ ಚಿಟ್ಟೆಗಳ ಜೀವಿತಾವಧಿಯನ್ನು ಹೆಚ್ಚಿಸಲು, ಅಂತಹ ಜಾತಿಗಳ ಚಿಟ್ಟೆಗಳ ಸಂಖ್ಯೆ ಹೆಚ್ಚಿಸಲು ನಿರಂತರ ಪ್ರಯತ್ನಗಳನ್ನು ಮಾಡಬೇಕು. ಪ್ರತಿ ದೇಶವೂ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಸಸ್ಯ ಆಧಾರಿತ ಕ್ರಮಗಳನ್ನು ಅಳವಡಿಸಿಕೊಳ್ಳಲು ಪ್ಯಾರಿಸ್ ಒಪ್ಪಂದವು ಬಯಸುತ್ತದೆ. ಖಾಸಗಿ ಸಾರಿಗೆಗೆ ಬದಲಾಗಿ ಸಾರ್ವಜನಿಕ ಸಾರಿಗೆಯನ್ನು ಪ್ರೋತ್ಸಾಹಿಸಬೇಕು. ಕೆಟ್ಟ ಯುದ್ಧವನ್ನು ಪ್ರಪಂಚದಿಂದ ನಿರ್ಮೂಲನೆ ಮಾಡಬೇಕು. ಮಳೆನೀರು ಜೀವಜಲ ಎಂಬುದನ್ನು ಅರಿತು ಮಳೆನೀರನ್ನು ಉಳಿಸಬೇಕು. ಈ ಕ್ರಮಗಳನ್ನು ನಿರಂತರವಾಗಿ ತೆಗೆದುಕೊಂಡರೆ, ಮಾನವ ಜನಾಂಗದ ಆಯುಷ್ಯವನ್ನು ವಿಸ್ತರಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ನಾವು ಮಾನವರು ಭೂಮಿಯ ಮೇಲಿನ ಅತಿಥಿಗಳು ಮತ್ತು ಪ್ರವಾಸಿಗರು! ಹುಟ್ಟು ಎಂದರೆ ಸಾವು ಇದ್ದೇ ಇರುತ್ತದೆ. ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಇಂದು ನಾವು ಸಂತೋಷ ಮತ್ತು ಸಹೋದರತ್ವದಿಂದ ಬಾಳೋಣ. ನಮ್ಮ ಮುಂದಿನ ಸಂತತಿಗೆ ಫಲವತ್ತಾದ ಭೂಮಿಯನ್ನು ನೀಡುವುದು ನಿಜವಾದ ಪೂರ್ವಜರ ಕರ್ತವ್ಯ ಎಂದು ನಾವು ಅರಿತುಕೊಳ್ಳೋಣ! ನಾವು ಅದನ್ನು ಮಾಡುತ್ತೇವೆ!

–ಆರ್.ಹರಿಹರನ್, ಕೊಯಮತ್ತೂರು

ಅನು:ಸಿಚಿ

ಕೊರಗ ಯುವಕರ ಮೇಲೆ ಸುಳ್ಳು ದರೋಡೆ ಪ್ರಕರಣ ದಾಖಲು: ಪಡುಬಿದ್ರಿಯಲ್ಲಿ ವಿವಿಧ ಸಂಘಟನೆಗಳಿಂದ ಆರೋಪ

ಇನ್ನಾ ಗ್ರಾಮದ ಕೊರಗ ಸಮುದಾಯದ ಯುವಕರ ವಿರುದ್ಧ ಪಡುಬಿದ್ರಿ ಠಾಣೆಯಲ್ಲಿ ಸುಳ್ಳು ದರೋಡೆ ಪ್ರಕರಣವನ್ನು ದಾಖಲಿಸಿರುವುದನ್ನು ವಿರೋಧಿಸಿ ಹಾಗೂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಿಗೆ ಪೊಲೀಸರು ಗೌರವ ನೀಡುತ್ತಿದ್ದಾರೆ ಎಂದು ಆರೋಪಿಸಿ ಪಡುಬಿದ್ರಿ ಮಾರ್ಕೆಟ್‌ನಲ್ಲಿ ಪೊಲೀಸ್ ಸ್ಟೇಶನ್ ಚಲೋ ಮತ್ತು ಪ್ರತಿಭಟನಾ ಸಭೆ ಜೂನ್ 10 ರಂದು ನಡೆಯಿತು.

ದ.ಕ. ಮತ್ತು ಉಡುಪಿ ಜಿಲ್ಲಾ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಕರೆ ನೀಡಿದ್ದ ಪ್ರತಿಭಟನಾ ಸಭೆಗೂ ಮುನ್ನ ಪಡುಬಿದ್ರಿಯ ಕಾರ್ಕಳ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿ, ಪಡುಬಿದ್ರಿಯ ಮಾರುಕಟ್ಟೆ ಪ್ರದೇಶದಲ್ಲಿ ಪ್ರತಿಭಟನಾ ಸಭೆಯನ್ನು ನಡೆಸಲಾಯಿತು. ಈ ವೇಳೆ ಪ್ರತಿಭಟನಾಕಾರರು ಪೊಲೀಸರ ಹಾಗೂ ತಪ್ಪಿತಸ್ಥರ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರಕರಣದಲ್ಲಿ ನ್ಯಾಯ ಒದಗಿಸದಿದ್ದಲ್ಲಿ ರಾಜ್ಯ ಮಟ್ಟದಲ್ಲಿ ಹೋರಾಟಕ್ಕೆ ಮುಂದಾಗುವುದಾಗಿ ತಿಳಿಸಿದರು.

ಇಡೀ ಪ್ರಕರಣದಲ್ಲಿ ಮೂಲ ತಪ್ಪಿತಸ್ಥನಾಗಿರುವ ಆರೋಪಿ ನಿವೃತ್ತ ಬಿಎಸ್ಸೆನ್ನೆಲ್ ಉದ್ಯೋಗಿ ಲಕ್ಷ್ಮೀನಾರಾಯಣ ವಿರುದ್ಧ ಆದಿವಾಸಿ ಮಹಿಳೆಗೆ ನೀಡಿದ ಲೈಂಗಿಕ ಕಿರುಕುಳದ ಪ್ರಕರಣವನ್ನು ದಾಖಲಿಸಬೇಕು. ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ಕ್ರಮವನ್ನು ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಂಘಟನೆಯ ರಾಜ್ಯ ಸಹಸಂಚಾಲಕ ಡಾ. ಕೃಷ್ಣಪ್ಪ ಕೊಂಚಾಡಿ, ಕರಾವಳಿ ಕರ್ನಾಟಕದ ಮೂಲ ನಿವಾಸಿ ಕೊರಗ ಸಮುದಾಯದವರು ಇಂದೂ ತುಳಿತಕ್ಕೊಳಗಾಗುತ್ತಿದ್ದಾರೆ. ಅಳಿವಿನ ಅಂಚಿನಲ್ಲಿರುವ ಜನಸಂಖ್ಯೆ ಕುಸಿಯುತ್ತಿರುವ ಪ್ರಿಮಿಟಿವ್ ಟ್ರೈಬ್ ಎಂದು ಕೇಂದ್ರ ಸರಕಾರ ಗುರುತಿಸಿ ಸರಕಾರದ ಪ್ರತಿಯೊಂದೂ ಇಲಾಖೆಗೂ ಈ ಸಮುದಾಯದ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕೆಂಬ ನಿಯಮಾವಳಿ ಇದೆ. ಇವರನ್ನು ಸಂವಿಧಾನಾತ್ಮಕವಾಗಿ ರಕ್ಷಿಸಿಕೊಳ್ಳಬೇಕಾದ ಪೊಲೀಸರೂ ಕೂಡಾ ಈ ಪ್ರಕರಣದಲ್ಲಿ ಏಕಪಕ್ಷೀಯವಾಗಿ ವರ್ತಿಸಿದ್ದಾರೆ ಎಂದು ದೂರಿದರು.



ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ಸಹ ಸಂಚಾಲಕ ಡಾ.ಎಸ್.ವೈ.ಗುರುಶಾಂತ್ ರವರು ಆದಿವಾಸಿ ಮಹಿಳೆ ತನ್ನ ಮೇಲಾದ ದೌರ್ಜನ್ಯದ ಪ್ರಕರಣ ಬಗ್ಗೆ ದೂರು ನೀಡಿದರೂ ದೌರ್ಜನ್ಯ ಎಸಗಿದ ಆರೋಪಿಯ ಮೇಲೆ ಯಾವುದೇ ಕ್ರಮಗಳನ್ನು ಜರುಗಿಸದೆ ಅಂತಹ ವಿಕೃತಕಾಮಿಯನ್ನು ಹಿಡಿದುಕೊಟ್ಟ ಯುವಕರ ಮೇಲೆಯೇ ದರೋಡೆ ಯಂತಹ ಗಂಭೀರ ಮೊಕದ್ದಮೆ ದಾಖಲಿಸಿರುವುದು ಖಂಡನೀಯ ಎಂದರು. ಪೊಲೀಸ್ ಇಲಾಖೆ ಇಷ್ಟೊಂದು ಭ್ರಷ್ಟತೆ ಮತ್ತು ಅಮಾನವೀಯತೆಯಿಂದ ಕೂಡಿದೆ ಮತ್ತು ದಮನಿತ ಕೊರಗ ಸಮುದಾಯದ ಮೇಲೆ ದ್ವೇಷ ಹೊಂದಿದೆ ಎನ್ನುವುದನ್ನು ಪ್ರಸ್ತಾವಿಸಿದರು. ನಮ್ಮ ದೇಶದ ಸಂವಿಧಾನ, ಕಾನೂನುಗಳು ಆದಿವಾಸಿಗಳ ಸಂರಕ್ಷಣೆಗೆ ಒತ್ತು ನೀಡುತ್ತಿವೆ. ಆದರೆ ಅಳಿವಿನಂಚಿನಲ್ಲಿರುವ ಕೊರಗ ಸಮುದಾಯದ ಮೇಲೆ ಪೊಲೀಸ್ ಇಲಾಖೆ ನಡೆಸಿರುವ ದೌರ್ಜನ್ಯ ಅಕ್ಷಮ್ಯ. ಈ ವಿಷಯದಲ್ಲಿ ಕೂಡಲೇ ಸೂಕ್ತವಾದ ಕ್ರಮವನ್ನು ಜರುಗಿಸದಿದ್ದಲ್ಲಿ ಉಗ್ರ ಸ್ವರೂಪದ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರಕರಣದ ಆರೋಪಿ ಸ್ಥಳೀಯ ಪರಿಶಿಷ್ಟ ಯುವಕರಿಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದ. ತಪ್ಪೆಸಗಿದ ಈ ವ್ಯಕ್ತಿಯ ವಿರುದ್ಧ ಪೊಲೀಸರಿಗೆ ದೂರು ನೀಡಲು ತೆರಳಿದ ಮಹಿಳೆಗೆ ಠಾಣೆಯಲ್ಲೇ ಅಪಮಾನವನ್ನು ಮಾಡಲಾಯಿತು. ಲೈಂಗಿಕ ಕಿರುಕುಳದ ದೂರನ್ನು ಪೊಲೀಸರು ಸ್ವೀಕರಿಸಲಿಲ್ಲ. ಹೀಗಾಗಿ ಇಡೀ ಪ್ರಕರಣದ ಮರು ತನಿಖೆ, ಲೈಂಗಿಕ ಕಿರುಕುಳದ ಪ್ರಕರಣವನ್ನು ದಾಖಲಿಸಿ ತಪ್ಪಿತಸ್ಥ ಲಕ್ಷ್ಮೀನಾರಾಯಣನ ಬಂಧನವಾಗಬೇಕು ಎಂದು ಪೊಲೀಸ್ ಅಧೀಕ್ಷಕರನ್ನು

ಪುಟ 14 ಕ್ಕೆ

ಕಾರ್ಪೊರೇಟ್‌ಗಳ ಲಾಭಕ್ಕೆ ರೈತರ ಕಡೆಗಣನೆ

ಪ್ರಧಾನಿ ನರೇಂದ್ರ ಮೋದಿಯವರು ಹೇಳಿಕೊಂಡಂತೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಬದಲು, ಹೆಚ್ಚುತ್ತಿರುವ ಇನ್‌ಪುಟ್ ವೆಚ್ಚಗಳು ಮತ್ತು ಅನ್ಯಾಯದ ಎಂಎಸ್‌ಪಿ ರೈತರ ದೊಡ್ಡ ವಿಭಾಗಗಳನ್ನು ವಿಶೇಷವಾಗಿ ಸಣ್ಣ, ಅತಿ ಸಣ್ಣ, ಮಧ್ಯಮ ರೈತರು ಮತ್ತು ಹಿಡುವಳಿದಾರರನ್ನು ಸಾಲಭಾದೆಗೆ ತಳ್ಳುತ್ತದೆ. ಸ್ವಾಮಿನಾಥನ್ ಆಯೋಗದ ಶಿಫಾರಸಿನ ಸಿ2+50 ಶೇಕಡಾ (ಅಂದರೆ, ಉತ್ಪಾದನೆಯ ಒಟ್ಟು ವೆಚ್ಚಕ್ಕಿಂತ ಕನಿಷ್ಠ ಶೇ.50ರಷ್ಟು ಹೆಚ್ಚು) ಅನುಗುಣವಾಗಿ ಎಂಎಸ್‌ಪಿ ನಿಗದಿಪಡಿಸಲಾಗುವುದು ಎಂಬ ನರೇಂದ್ರ ಮೋದಿಯವರ ಭರವಸೆಯನ್ನು ಸತತ ಒಂಬತ್ತನೇ ವರ್ಷಕ್ಕೆ ಮತ್ತೊಮ್ಮೆ ಘೋಷಿಸಿದ ಎಂಎಸ್‌ಪಿ ದ್ರೋಹ ಮಾಡಿದೆ.

ಪ್ರಕಾಶ್ ಕಾರತ್

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಜೂನ್ 7, 2023 ರಂದು 2023–24 ರ ಖಾರಿಫ್ ಋತುವುಗೆ ಕನಿಷ್ಠ ಬೆಂಬಲ ಬೆಲೆಗಳನ್ನು (MSP) ಘೋಷಿಸಿ, "ಬೆಳೆಗಾರರಿಗೆ ಅವರ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಬೆಳೆ ವೈವಿಧ್ಯೀಕರಣವನ್ನು ಉತ್ತೇಜಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ"ಎಂದು ಅದು ಹೇಳಿಕೊಳ್ಳುತ್ತದೆ. ಘೋಷಿತ MSP ನ್ಯಾಯಯುತವೂ ಅಲ್ಲ ಅಥವಾ ಪ್ರತಿಫಲದಾಯಕವೂ ಅಲ್ಲ; ಇದು ರೈತರ ಭರವಸೆಯನ್ನು ಸುಳ್ಳಾಗಿಸುತ್ತದೆ ಮತ್ತು ಅವರ ಆದಾಯದಲ್ಲಿ ದೊಡ್ಡ ನಷ್ಟವನ್ನು ಉಂಟುಮಾಡುತ್ತದೆ. ಬೆಳೆ ವೈವಿಧ್ಯತೆಯನ್ನು ಪ್ರೋತ್ಸಾಹಿಸುವುದಿರಲಿ, ಇದು ಕೃಷಿಯಲ್ಲಿ ಹೂಡಿಕೆ ಮಾಡುವುದರಿಂದ ರೈತರನ್ನು ನಿರುತ್ಸಾಹಗೊಳಿಸುತ್ತದೆ. ಪ್ರಧಾನಿ ನರೇಂದ್ರ ಮೋದಿಯವರು ಹೇಳಿಕೊಂಡಂತೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಬದಲು, ಹೆಚ್ಚುತ್ತಿರುವ ಇನ್‌ಪುಟ್ ವೆಚ್ಚಗಳು ಮತ್ತು ಅನ್ಯಾಯದ ಎಂಎಸ್‌ಪಿ ರೈತರ ದೊಡ್ಡ ವಿಭಾಗಗಳನ್ನು ವಿಶೇಷವಾಗಿ ಸಣ್ಣ, ಅತಿ ಸಣ್ಣ, ಮಧ್ಯಮ ರೈತರು ಮತ್ತು ಹಿಡುವಳಿದಾರರನ್ನು ಸಾಲಭಾದೆಗೆ ತಳ್ಳುತ್ತದೆ. ಸ್ವಾಮಿನಾಥನ್ ಆಯೋಗದ ಶಿಫಾರಸಿನ ಸಿ2+50 ಶೇಕಡಾ (ಅಂದರೆ, ಉತ್ಪಾದನೆಯ ಒಟ್ಟು ವೆಚ್ಚಕ್ಕಿಂತ ಕನಿಷ್ಠ ಶೇ.50ರಷ್ಟು ಹೆಚ್ಚು) ಅನುಗುಣವಾಗಿ ಎಂಎಸ್‌ಪಿ ನಿಗದಿಪಡಿಸಲಾಗುವುದು ಎಂಬ ನರೇಂದ್ರ ಮೋದಿಯವರ ಭರವಸೆಯನ್ನು ಸತತ ಒಂಬತ್ತನೇ ವರ್ಷಕ್ಕೆ ಮತ್ತೊಮ್ಮೆ ಘೋಷಿಸಿದ ಎಂಎಸ್‌ಪಿ ದ್ರೋಹ ಮಾಡಿದೆ.



ಒಂದು ಕ್ವಿಂಟಾಲ್ ಭತ್ತದ ಕನಿಷ್ಠ ಬೆಂಬಲ ಬೆಲೆಯನ್ನು ರೂ. 2,183 ನಿಗದಿಪಡಿಸಲಾಗಿದೆ. ಕಳೆದ ಹಂಗಾಮಿನಲ್ಲಿನ ಬೆಂಬಲ ಬೆಲೆ 2,040 ರೂ. ಗೆ ಹೋಲಿಸಿದರೆ, ಇದು ಶೇ. 7 ರಷ್ಟು ಮಾತ್ರ ಏರಿಕೆಯಾಗಿದೆ. ಒರಟು ಧಾನ್ಯಗಳಿಗೆ 2022–23 ರಲ್ಲಿ ಕ್ವಿಂಟಲ್ ಒಂದಕ್ಕೆ 2,350 ರೂ. ಬೆಂಬಲ ಬೆಲೆ ಇತ್ತು. ಈಗ ಈ ಧಾನ್ಯಗಳಿಗೆ 2500 ರೂ. ನಿಗಧಿಪಡಿಸಲಾಗಿದೆ. ಇದಕ್ಕೆ ಹೋಲಿಸಿದರೆ, ಇಂದಿನ ಬೆಂಬಲ ಬೆಲೆಯನ್ನು ಶೇ. 6.3 ರಿಂದ 7.8 ರಷ್ಟು ಮಾತ್ರ ಹೆಚ್ಚಿಸಲಾಗಿದೆ. ಒಂದು ವರ್ಷದ ಹಿಂದೆ ಕ್ವಿಂಟಾಲ್ ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ 1,962 ರೂ. ಇದ್ದುದನ್ನು ಈ ವರ್ಷ 2,090 ರೂಪಾಯಿಗೆ ಹೆಚ್ಚಿಸಲಾಗಿದೆ. ಹಿಂದಿನ ವರ್ಷಕ್ಕಿಂತ ಶೇ. 6.5 ರಷ್ಟು ಹೆಚ್ಚಾಗಿದೆ. ಕ್ವಿಂಟಲ್ ತೊಗರಿಗೆ MSP ರೂ. 400 ಹೆಚ್ಚಳವಾಗಿ 7,000 ರೂ.ಗೆ, ಮತ್ತು ಉದ್ದಿನ ಕಾಳು ಬೆಂಬಲ ಬೆಲೆ ರೂ. 350 ಹೆಚ್ಚಳವಾಗಿ 6,950 ರೂ.ಗಳಿಗೆ ನಿಗಧಿ ಮಾಡುವ ಮೂಲಕ ಕೇವಲ ಶೇ. 6 ಮತ್ತು ಶೇ. 5.3 ರಷ್ಟು ಅತ್ಯಲ್ಪ ಹೆಚ್ಚಳವನ್ನು ಹೊಂದಿದೆ. ಕ್ವಿಂಟಾಲ್ ಹತ್ತಿಗೆ ರೂ.540 ಹೆಚ್ಚಳವಾಗಿದ್ದು, ರೂ. ಮೀಡಿಯಂ ಸ್ಟೆಪಲ್ ಗೆ 6080ರಿಂದ ರೂ. 6620 ಆಗಿದೆ. ಇದು ಶೇ.8.9ರಷ್ಟು ಏರಿಕೆಯಾಗಿದೆ. ಕ್ವಿಂಟಲ್ ಸೂರ್ಯಕಾಂತಿ ಬೀಜದ MSP ರೂ. 60 ಹೆಚ್ಚಳವಾಗಿದ್ದು ರೂ. 6760 ಆಗಿದೆ. 2022–23 ಕ್ಕಿಂತ ಹಸಿರು ಕಾಳು MSP ಶೇ. 10.4 ರಷ್ಟು, ಎಳ್ಳು ಶೇ. 10.3 ಮತ್ತು ಕಡಲೆಕಾಯಿ ಶೇ. 9 ಹೆಚ್ಚಳವಾಗಿದೆ. ಹೆಚ್ಚಿನ ಬೆಳೆಗಳಿಗೆ ಈ ಶ್ರೇಣಿಯಲ್ಲಿ ಹೆಚ್ಚಳವಾಗಿದೆ. ಇದು, 2019–20 ರಿಂದ 2021–22 ರವರೆಗಿನ ಉತ್ಪಾದನಾ ವೆಚ್ಚದ ಅಂದಾಜಿನ ಮೇಲೆ ಆಧಾರಿತವಾಗಿರುವುದರಿಂದ, 2021–22 ರಿಂದ 2023–24 ರವರೆಗೆ ವೆಚ್ಚದ ಹೆಚ್ಚಳವನ್ನು ಸರಿದೂಗಿಸಲು MSP ವಿಫಲವಾಗಿದೆ.

ಬಿಜೆಪಿ ಸರ್ಕಾರವು C2 ವೆಚ್ಚದಿಂದ ಗೋಲ್‌ಪೋಸ್ಟ್‌ಗಳನ್ನು ಅನುಕೂಲಕರವಾಗಿ ಸ್ಥಳಾಂತರಿಸಿದೆ, ಇದು ಒಟ್ಟು ಸಾಗುವಳಿ ವೆಚ್ಚವನ್ನು ಅಳೆಯುತ್ತದೆ, ಇದು A2+FL ವೆಚ್ಚವಾಗಿದೆ, ಇದು ಮಾಲೀಕತ್ವದ ಭೂಮಿಯ ಬಾಡಿಗೆ ಮೌಲ್ಯ ಮತ್ತು ಸ್ಥಿರ ಬಂಡವಾಳದ ಮೇಲಿನ ಬಡ್ಡಿಯನ್ನು ಒಳಗೊಂಡಿಲ್ಲ. ಇದಲ್ಲದೆ, A2+FL ಸೂತ್ರದ ಪ್ರಕಾರ ಲೆಕ್ಕಹಾಕಿದ ಬೆಲೆಗಳಲ್ಲಿಯೂ ಸಹ ಹಿಡಿತವಿದೆ. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗವು (CACP) ವಿವಿಧ ರಾಜ್ಯಗಳಿಗೆ ಕಡಿಮೆ ಅಂದಾಜು ವೆಚ್ಚಗಳನ್ನು ಲೆಕ್ಕ ಮಾಡುತ್ತದೆ ಮತ್ತು MSP ಅನ್ನು ಲೆಕ್ಕಾಚಾರ ಮಾಡಲು ಈ ಕಡಿಮೆ ಅಂದಾಜು ವೆಚ್ಚಗಳ ಅಖಿಲ ಭಾರತ ಮಟ್ಟದ ಸರಾಸರಿಯನ್ನು ಬಳಸುತ್ತದೆ. ಆಂಧ್ರಪ್ರದೇಶ, ಬಿಹಾರ, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು, ತೆಲಂಗಾಣ ಮತ್ತು ಪಶ್ಚಿಮ ಬಂಗಾಳದ ಭತ್ತದ ಉತ್ಪಾದನಾ ವೆಚ್ಚದ ಅಂದಾಜುಗಳು CACP ಅಂದಾಜುಗಳಿಂತ ಹೆಚ್ಚಿವೆ ಎಂದು ಖಾರಿಫ್ ಬೆಳೆಗಳಿಗೆ CACP ದಾಖಲೆ ಬೆಲೆ ನೀತಿ, ಮಾರ್ಕೆಟಿಂಗ್ ಸೀಸನ್ 2023–24 ಒಪ್ಪಿಕೊಳ್ಳುತ್ತದೆ. CACP ಮಾಡಿದ ವಾಡಿಕೆಯ ಅಂದಾಜುಗಳು ಹೆಚ್ಚುತ್ತಿರುವ ಇನ್‌ಪುಟ್ ವೆಚ್ಚಗಳು ಅಥವಾ ಹಣದುಬ್ಬರದ ಅಂಶವನ್ನು ಗಣನೆಗೆ ತೆಗೆದುಕೊಳ್ಳಲು ವಿಫಲವಾಗಿವೆ. ಬಿಜೆಪಿ ಆಡಳಿತವಿರುವ ರಾಜ್ಯಗಳ ಶಿಫಾರಸುಗಳನ್ನೂ ಪರಿಗಣನೆಗೆ ತೆಗೆದುಕೊಳ್ಳಲು ಕೇಂದ್ರ ತಲೆಕೆಡಿಸಿಕೊಂಡಿಲ್ಲ.

ಕ್ವಿಂಟಲ್ ಭತ್ತಕ್ಕೆ, ಕೇರಳ ರಾಜ್ಯ ಕೃಷಿ ಇಲಾಖೆಯ ಅಂದಾಜು C2 ವೆಚ್ಚವು ರೂ. 2847 ಆಗಿದ್ದರೆ, CACP ಅಂದಾಜು ಕೇವಲ ರೂ. 2338 ಆಗಿದೆ. ಕ್ವಿಂಟಲ್ ಭತ್ತಕ್ಕೆ, ಪಂಜಾಬ್ ರಾಜ್ಯದ ಅಂದಾಜು C2 ವೆಚ್ಚವು ರೂ. 2089 ಆಗಿದ್ದರೆ, CACP ಅಂದಾಜು ಕೇವಲ ರೂ. 1462 ಆಗಿದೆ. ಹೆಚ್ಚಿನ ಬೆಳೆಗಳಲ್ಲಿ, ರಾಜ್ಯದ ಅಂದಾಜುಗಳು CACP ಅಂದಾಜುಗಳಿಗಿಂತ ಹೆಚ್ಚು. ಕೇರಳದಲ್ಲಿ ಉತ್ಪಾದನಾ ವೆಚ್ಚಗಳು ಹೆಚ್ಚು ಮತ್ತು ಕೇಂದ್ರ ನಿಗದಿಪಡಿಸಿದ MSP ಈ ವೆಚ್ಚವನ್ನು ಪೂರೈಸುವುದಿಲ್ಲ ಎಂದು ತಿಳಿದಿರುವ LDF ಸರ್ಕಾರವು, ಕ್ವಿಂಟಲ್ ಭತ್ತಕ್ಕೆ ಸುಮಾರು ರೂ. 800 ಬೋನಸ್ ನೀಡುವ ಮೂಲಕ 2850 ರೂ.ಗಳಲ್ಲಿ ಸಂಗ್ರಹಿಸುತ್ತದೆ. ರಾಜ್ಯಗಳ ಇಂತಹ ಉಪಕ್ರಮಗಳನ್ನು ವಿರೋಧಿಸುವ ಬಿಜೆಪಿ ಸರ್ಕಾರ, ಇದು ಮಾರುಕಟ್ಟೆಯನ್ನು ವಿರೂಪಗೊಳಿಸುತ್ತದೆ ಎಂದು ಆರೋಪಿಸುತ್ತದೆ.

ಒಂದು ವೇಳೆ C2 ವೆಚ್ಚಗಳಂತೆ ಕ್ವಿಂಟಲ್ ಬತ್ತಕ್ಕೆ ರೂ. 1911 ರಂತೆ CACP ಲೆಕ್ಕಾಚಾರವನ್ನು ತೆಗೆದುಕೊಂಡರೂ, ಭತ್ತದ MSP ಅನ್ನು ಲೆಕ್ಕಹಾಕಲು C2+50 ಪ್ರತಿಶತ ಸೂತ್ರವನ್ನು ಅನ್ವಯಿಸಿದರೆ, ಅದು ಕ್ವಿಂಟಲ್ ಗೆ ರೂ. 2866 ಆಗಿರಬೇಕು. ಆದರೆ, ಈಗ ಘೋಷಿಸಿದ MSP ಕೇವಲ ರೂ. 2183 ಆಗಿದೆ. ರಾಜ್ಯ ಕೃಷಿ ಇಲಾಖೆಗಳು ಒದಗಿಸುವ ತೂಕದ ಸರಾಸರಿ C2 ವೆಚ್ಚವನ್ನು (ರೂ. 2139/Qtl) ಗಣನೆಗೆ ತೆಗೆದುಕೊಂಡರೆ, C2+50 ಶೇಕಡಾ ರೂ. 3208.5/Qtl ಆಗುತ್ತಿತ್ತು. ಎರಡೂ ಸಂದರ್ಭಗಳಲ್ಲಿ ಘೋಷಿಸಲಾದ MSP ಕಡಿಮೆ ಇರುತ್ತದೆ ಮತ್ತು ರೈತರು ಕ್ರಮವಾಗಿ ಕ್ವಿಂಟಲ್ ಗೆ ರೂ. 683.5 ಮತ್ತು ರೂ. 1025.5 ನಷ್ಟವನ್ನು ಅನುಭವಿಸುತ್ತಾರೆ. ಹೆಕ್ಟೇರ್ ಒಂದರಲ್ಲಿ 6 ಟನ್ ಉತ್ಪಾದಕತೆಯನ್ನು ಹೊಂದಿರುವ ಆಂಧ್ರಪ್ರದೇಶದ ಒಬ್ಬ ರೈತ ಈ ವೆಚ್ಚದಲ್ಲಿ ಕ್ರಮವಾಗಿ ಪ್ರತಿ ಹೆಕ್ಟೇರ್ ಗೆ ರೂ. 41,010 ಮತ್ತು ರೂ. 61,530 ನಷ್ಟವನ್ನು ಅನುಭವಿಸುತ್ತಾನೆ. ಇದು ಆಂಧ್ರಪ್ರದೇಶದ ರೈತರಿಗೆ ಪ್ರತಿ ಹಂಗಾಮಿಗೆ ರೂ. 9020 ಕೋಟಿಗಳಿಂದ ಸುಮಾರು ರೂ. 13,540 ಕೋಟಿಗಳಷ್ಟು ನಷ್ಟವನ್ನು ಉಂಟುಮಾಡುತ್ತದೆ (ಆಂಧ್ರಪ್ರದೇಶದಲ್ಲಿ 22 ಲಕ್ಷ ಹೆಕ್ಟೇರ್ ಗಿಂತಲೂ ಹೆಚ್ಚಿನ ಭೂಮಿಯಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ).

ಹತ್ತಿಯ ವಿಷಯದಲ್ಲಿ ನೋಡಿದಾಗ, ತೆಲಂಗಾಣ ರಾಜ್ಯದ ಅಂದಾಜು C2 ಗಳು ರೂ. ಕ್ವಿಂಟಲ್ ಗೆ 11,031 ಆಗಿದ್ದರೆ, CACP ಅಂದಾಜುಗಳು ರೂ. 6264 ನಲ್ಲಿದೆ. ಇದು ಕ್ವಿಂಟಲ್ ಗೆ 4767 ರೂಪಾಯಿ ಕಡಿಮೆಯಾಗಿದೆ. ನಾವು ಕ್ವಿಂಟಲ್ ಹತ್ತಿಗೆ MSP (ರೂ. 5786) ಹಾಗೂ CACP ಅಂದಾಜು C2 ಅನ್ನು (ರೂ. 6,620) ತೆಗೆದುಕೊಂಡರೂ ಸಹ C2+50 ಬೆಲೆ ರೂ. 8679 ಆಗಿರುತ್ತದೆ ಅಥವಾ ರೂ. 2059 ನಷ್ಟವಾಗುತ್ತದೆ. ಹೆಕ್ಟೇರ್ ಗೆ ಸರಾಸರಿ 15 ಕ್ವಿಂಟಲ್ ಉತ್ಪಾದನೆಯನ್ನು ತೆಗೆದುಕೊಂಡರೆ ಪ್ರತಿ ಹೆಕ್ಟೇರ್ ಗೆ ರೂ. 30,885 ನಷ್ಟವಾಗುತ್ತದೆ. ರಾಜ್ಯದ ಲೆಕ್ಕಾಚಾರದ ಪ್ರಕಾರ ಕ್ವಿಂಟಲ್ ಗೆ C2+50 ರೂ. 16547 ಆಗಿರುತ್ತದೆ ಅಥವಾ ಘೋಷಿಸಿದ MSP ಗಿಂತ ರೂ. 927 ಹೆಚ್ಚು, ಅಂದರೆ ರೂ. 1,48,905/ಹೆಕ್ಟೇರ್ ನಷ್ಟವಾಗುತ್ತದೆ. ತೆಲಂಗಾಣ ರಾಜ್ಯವು ಸುಮಾರು 19 ಲಕ್ಷ ಹೆಕ್ಟೇರ್‌ಗಳಷ್ಟು ವಿಸ್ತೀರ್ಣವನ್ನು ಹೊಂದಿರುವುದರಿಂದ, ಕೇಂದ್ರ MSP ಮತ್ತು ರಾಜ್ಯ ಪ್ರಸ್ತಾವಿತ MSP ಯಲ್ಲಿನ ನಷ್ಟವು ಸುಮಾರು ರೂ. 5868 ಕೋಟಿಗಳಿಂದ ರೂ. 28,291 ಕೋಟಿಗಳಷ್ಟಿರುತ್ತದೆ. ರೈತನಿಗೆ ದೊಡ್ಡ ನಿರಾಸೆ ಮತ್ತು ರೈತರ ಆತ್ಮಹತ್ಯೆಗಳು ಹತ್ತಿ ಭಾಗದಲ್ಲಿ ಏಕೆ ಹೆಚ್ಚುತ್ತಿವೆ ಎಂಬುದನ್ನು ಯಾರಾದರೂ ಊಹಿಸಬಹುದು.

ಮೂರು ಹಂತಗಳಲ್ಲಿ ರೈತರಿಗೆ ವಂಚನೆ

ಒಂದು ಹಂತದಲ್ಲಿ ನಿಜವಾದ ವೆಚ್ಚಕ್ಕಿಂತ ತೀರಾ ಕಡಿಮೆ ವೆಚ್ಚವನ್ನು ಅಂದಾಜು ಮಾಡುವ ಮೂಲಕ ರೈತರಿಗೆ ಮೊದಲು ವಂಚನೆ ಮಾಡಲಾಗುತ್ತದೆ. ತೂಕದ ಸರಾಸರಿ

ಪುಟ 10 ಕ್ಕೆ

ಕರ್ನಾಟಕದ ತೊಗರಿ ಎಂಎಸ್‌ಪಿ

ಕ್ವಿಂಟಲ್ ತೊಗರಿಗೆ, ಕರ್ನಾಟಕ ರಾಜ್ಯವು ಯೋಜಿಸಿರುವ C2 ವೆಚ್ಚಗಳು ರೂ. 9588 ಆಗಿದ್ದರೆ, CACP ಅಂದಾಜು ಕೇವಲ ರೂ. 5744 ಆಗಿದೆ. ಇದು ರೂ. 3844 ಕಡಿಮೆಯಾಗಿದೆ. ತೊಗರಿ, ಹಸಿರು ಕಾಳು, ಉದ್ದು, ಸೂರ್ಯಕಾಂತಿ, ಎಳ್ಳು, ಉಚ್ಚೆಳ್ಳು ಮತ್ತು ಹತ್ತಿ ಇವುಗಳ ಮೇಲಿನ ನಷ್ಟವು CACP ಯೋಜಿತ C2 ದರಗಳಲ್ಲಿಯೂ ಸಹ ಕ್ವಿಂಟಲ್ ಗೆ ಸುಮಾರು ರೂ. 2000 ರಿಂದ ರೂ. 3000 ಗಿಂತ ಹೆಚ್ಚಿನದಾಗಿರುತ್ತದೆ. ಖಚಿತವಾದ ಸಂಗ್ರಹಣೆಯ ವ್ಯವಸ್ಥೆ ಇಲ್ಲದ ಸ್ಥಿತಿಯಲ್ಲಿ ನಿಗದಿತ ಎಂಎಸ್‌ಪಿ ಕೂಡ ರೈತರಿಗೆ ಸೇರುವುದಿಲ್ಲ. ಈ ಕಾರಣಗಳಿಂದ ರೈತರು ಅನುಭವಿಸಿದ ನಷ್ಟ ಸಾವಿರಾರು ಕೋಟಿಗಳಷ್ಟಿದೆ ಎಂಬುದನ್ನು ಯಾರಾದರೂ ಊಹೆ ಮಾಡಬಹುದು. ಹತ್ತಿ ಹಾಗೂ ಬೇಳೆಕಾಳುಗಳು ಮತ್ತು ಎಣ್ಣೆಕಾಳುಗಳಲ್ಲಿ ದೋಷಪೂರಿತ ವ್ಯಾಪಾರ ನೀತಿ, ಶೂನ್ಯ ಸುಂಕದಲ್ಲಿ ಆಮದು ಹೀಗೆ ಅದರ ಕಾರ್ಪೊರೇಟ್ ಕ್ರೌರ್ಯಗಳ ಒತ್ತಾಯದಿಂದ ರೈತರನ್ನು ಮತ್ತಷ್ಟು ಬಿಕ್ಕಟ್ಟಿಗೆ ತಳ್ಳಿದೆ.



ಅಸಹನೆ ಏಕೆನ್ನುವ ಪ್ರಶ್ನೆಗೆ ಎರಡು ಮೂರು ಉತ್ತರಗಳು ಸಾಧ್ಯ. ಒಂದು, ಗ್ಯಾರಂಟಿಗಳ ದಿಶೆಯಿಂದ ಕಾಂಗ್ರೆಸ್ ಚುನಾವಣೆ ಗೆದ್ದಿದೆ. ಗ್ಯಾರಂಟಿಗಳನ್ನು ಈಡೇರಿಸಲು ಬಿಟ್ಟರೆ ತಾನೇ ಕಾಂಗ್ರೆಸ್ ತನ್ನ ಮಾತು ಉಳಿಸಿಕೊಳ್ಳಲು ಸಾಧ್ಯ. ಅಕ್ಕಿ ನಿರಾಕರಿಸಿದರೆ ಕಾಂಗ್ರೆಸ್ ಪಕ್ಷದ ಒಂದು ಗ್ಯಾರಂಟಿಯನ್ನು ಈಡೇರಿಸುವುದು ಕಷ್ಟವಾಗುತ್ತದೆ. ಆವಾಗ ಕಾಂಗ್ರೆಸ್ ಪಕ್ಷ ಮತದಾರರಿಗೆ 10 ಕೆಜಿ ಅಕ್ಕಿ ಭರವಸೆ ಕೊಟ್ಟು ಮೋಸ ಮಾಡಿದೆ ಎಂದು ಪ್ರಚಾರ ಮಾಡಬಹುದು. ಜನರು ಕಾಂಗ್ರೆಸ್ ಪಕ್ಷದ ಮೇಲೆ ಭರವಸೆ ಕಳೆದುಕೊಂಡು ಬಿಜೆಪಿಯತ್ತ ಬರಬಹುದೆನ್ನುವ ಒಂದು ಸಮೀಪ ದೃಷ್ಟಿಯ ರಾಜಕೀಯ ಲೆಕ್ಕಚಾರ ಸಾಧ್ಯ. ಇದೊಂದು ಸಮೀಪ ದೃಷ್ಟಿಯ ರಾಜಕೀಯ ಲೆಕ್ಕಚಾರ ಏಕೆಂದರೆ ಒಂದು ವೇಳೆ ಕಾಂಗ್ರೆಸ್ ಪಕ್ಷ ಕೇಂದ್ರದ ಹುನ್ನಾರದಿಂದ 10 ಕೆಜಿ ಅಕ್ಕಿ ನೀಡಲು ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಜನವರಿಗೆ ಮನವರಿಕೆ ಮಾಡಿದರೆ ಕೇಂದ್ರದ ಲೆಕ್ಕಚಾರವೆಲ್ಲ ಬುಡಮೇಲಾಗಬಹುದು. ಇನ್ನೊಂದು ದೃಷ್ಟಿಯಿಂದಲೂ ಇದೊಂದು ಸಮೀಪ ದೃಷ್ಟಿಯ ರಾಜಕೀಯ ಏಕೆಂದರೆ ಇದೊಂದು ಬಡವರ ತಟ್ಟೆಯಿಂದ ಅನ್ನ ಕಸಿಯುವ ಕ್ರಮ. ಇದನ್ನೂ ಮಾಸ್ಟರ್ ಸ್ಟ್ರೋಕ್ ಎನ್ನುವವರಿದ್ದರೆ ಅವರಲ್ಲಿ ಮನುಷ್ಯತ್ವ ಸಂಪೂರ್ಣ ಸತ್ತು ಹೋಗಿದೆಯೆಂದು ತೀರ್ಮಾನಿಸಬಹುದು.



ಅಕ್ಕಿ ನಿರಾಕರಣೆ–ಸಮೀಪ ದೃಷ್ಟಿಯ ರಾಜಕೀಯ

ಪ್ರೊ. ಎಂ.ಚಂದ್ರಪೂಜಾರಿ

ಅಕ್ಕಿ ನಿರಾಕರಣೆ ಬಿಜೆಪಿಯ ಬಡವರ ವಿರುದ್ಧ ಪಾಲಿಸಿಗೆ ಹೊಸ ಸೇರ್ಪಡೆ. ಬಡತನ ನಿವಾರಣೆ ವಿಚಾರದಲ್ಲೇ ಬಿಜೆಪಿಯ ಟ್ರಾಕ್ ರೆಕಾರ್ಡ್ ಅಷ್ಟೇನು ಉತ್ತಮವಾಗಿಲ್ಲ. ಬಿಜೆಪಿ ಸರಕಾರ ನೇಮಕ ಮಾಡಿದ ಶಾಂತ ಕುಮಾರ್ ಸಮಿತಿ ಶೇ.67ರಷ್ಟು ಜನರಿಗೆ ಅನ್ವಯವಾಗಬೇಕಾದ ಆಹಾರ ಭದ್ರತೆ ಕಾಯಿದೆಯನ್ನು ತಿದ್ದುಪಡಿ ಶೇ.40ಕ್ಕೆ ಇಳಿಸಲು ಶಿಫಾರಸ್ಸು ಮಾಡಿದ್ದು, ಉದ್ಯೋಗ ಖಾತರಿ ಯೋಜನೆಗೆ ಪ್ರತಿ ವರ್ಷ ಬಜೆಟ್‌ಲ್ಲಿ ಬೇಡಿಕೆಗಿಂತ ಕಡಿಮೆ ಮೊತ್ತ ತೆಗೆದಿರಿಸುವುದು, ಇದರಿಂದಾಗಿ ಬಡವರು ಸಂಬಳವಿಲ್ಲದೆ ಒಂದೆರಡು ತಿಂಗಳು ಪರದಾಡುವುದು, ಏನೇನೂ ಉಳಿತಾಯ ಇಲ್ಲದ ಬಡವರ ಬದುಕನ್ನು ಅರ್ಥಮಾಡಿಕೊಳ್ಳದೆ, ವಲಸೆ ಕಾರ್ಮಿಕರಿಗೆ ವಾಪಸ್ ಹೋಗಲು ಅವಕಾಶ ನೀಡದೆ ಲಾಕ್‌ಡೌನ್ ಘೋಷಿಸಿದ್ದು, ಕೋವಿಡ್ ಲಸಿಕೆಯನ್ನು ಉಚಿತ ನೀಡಲು ನಿರಾಕರಿಸಿದ್ದು, ಉಜ್ವಲ್ ಯೋಜನೆಯಲ್ಲಿ ಸಿಲಿಂಡರ್ ರಿಫಿಲ್ ಮಾಡಿಸಲು ಬಡ ಕುಟುಂಬಗಳು ಪರದಾಡಿದ್ದು, ಜಿರೋ ಬ್ಯಾಲೆನ್ಸ್ ಜನ್‌ಧನ್ ಯೋಜನೆಯಲ್ಲಿ ಜಿರೋ ಸವಲತ್ತು ಇರುವುದು ಇತ್ಯಾದಿಗಳೆಲ್ಲ ಕೇಂದ್ರ ಸರಕಾರದ ಬಡತನ ನಿವಾರಣೆಯ ಕೆಲವು ಸ್ಯಾಂಪಲ್‌ಗಳು.

ಬಡತನ ನಿವಾರಣೆ ವಿಚಾರದಲ್ಲಿ ರಾಜ್ಯದ ಬಿಜೆಪಿ ಸರಕಾರ ಕೇಂದ್ರಕ್ಕಿಂತ ಬಿನ್ನವಾಗಿ ವ್ಯವಹರಿಸಿಲ್ಲ. ಹಿಂದಿನ ಸರಕಾರದ ಅನ್ನಭಾಗ್ಯ ಯೋಜನೆಯ 7 ಕೆಜಿ ಅಕ್ಕಿಯನ್ನು 5 ಕೆಜಿಗೆ ಇಳಿಸಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸಾಲುಸಾಲು ಸವಲತ್ತುಗಳನ್ನು ಘೋಷಿಸುವಾಗ ಬಿಜೆಪಿ ಅರ್ಧ ಲೀಟರ್ ಹಾಲು, ಒಂದು ಸಿಲಿಂಡರ್ ಉಚಿತ ಘೋಷಿಸಿದೆ. ಚುನಾವಣೆ ಗೆಲ್ಲಲು ಸವಲತ್ತುಗಳ ಬದಲು ಹಿಜಾಬ್, ಅಜಾನ್, ಹಲಾಲ್, ಟಿಪ್ಪು ಸುಲ್ತಾನ್ ಇವನ್ನೇ ನಂಬಿತ್ತು. ಸೋತ ನಂತರ ಏಕೆ ಇನ್ನೂ ಕೂಡ ಗ್ಯಾರಂಟಿಗಳನ್ನು ಜಾರಿಗೊಳಿಸಿಲ್ಲ? ಗ್ಯಾರಂಟಿಗಳನ್ನು ನೀಡುವಾಗ ಶರತ್ತುಗಳು ಏಕೆ? ಎಲ್ಲರಿಗೂ ಏಕೆ ಸವಲತ್ತುಗಳನ್ನು ನೀಡುತ್ತಿಲ್ಲ? ಇವಕ್ಕೆಲ್ಲ ಎಲ್ಲಿಂದ ಸಂಪನ್ಮೂಲ ತರುತ್ತೀರಾ? ರಾಜ್ಯ ದಿವಾಳಿ ಮಾಡಲು ಹೊರಟಿದ್ದೀರಾ? ಇವೆಲ್ಲ ರಾಜ್ಯದ ಬಿಜೆಪಿ ನಾಯಕರು ಕೇಳುವ ಪ್ರಶ್ನೆಗಳು. ಈಗ ಅವರದ್ದೇ ಪಕ್ಷದ ಕೇಂದ್ರ ಸರಕಾರ ಅಕ್ಕಿ ನೀಡಲು ನಿರಾಕರಿಸುತ್ತಿದೆ. ಮೇಲಿನ ಪ್ರಶ್ನೆಗಳನ್ನು ಕೇಳುವಾಗ ಬಿಜೆಪಿ ನಾಯಕರಿಗೆ ರಾಜ್ಯದ ಬಡಜನರ ಹಿತ ಮುಖ್ಯವಾಗಿತ್ತೆಂದು ರಾಜ್ಯದ ಜನ ನಂಬಬೇಕಾದರೆ ಅಕ್ಕಿ ನಿರಾಕರಿಸುವ ಕೇಂದ್ರದ ಕ್ರಮವನ್ನು ಬಿಜೆಪಿ ಎಂಪಿಗಳು ಮತ್ತು ರಾಜ್ಯದ ನಾಯಕರು ಪ್ರಶ್ನಿಸಬೇಕಾಗುತ್ತದೆ. ಇಲ್ಲವಾದರೆ ರಾಜ್ಯ ಮತ್ತು ರಾಜ್ಯದ ಜನರ ಹಿತಕ್ಕಿಂತ ಇವರಿಗೆ ತಮ್ಮ ಪಕ್ಷದ ಆಸಕ್ತಿ ಮುಖ್ಯ ಎಂದಾಗುತ್ತದೆ. ಮತ್ತು ತಮ್ಮ ಪಕ್ಷದ ಆಸಕ್ತಿಯನ್ನು ಸಾಧಿಸಲು ರಾಜ್ಯದ ಬಡಜನರ ಹಿತವನ್ನೂ ಬಲಿಕೊಡಲು ಸಿದ್ಧಾರಿದ್ದಾರೆಂದಾಗುತ್ತದೆ.

ಏಕೆಂದರೆ ರಾಜ್ಯ ಸರಕಾರ ನೀಡಲಿಚ್ಛಿಸುವ ತಿಂಗಳಿಗೆ ತಲಾ 10 ಕೆಜಿ ಅಕ್ಕಿ ಮಾಧ್ಯಮಗಳಲ್ಲಿ ಬರುತ್ತಿರುವ ವಿರೋಧವನ್ನು ನಂಬುವ ಜನರಿಗೆ ದೊಡ್ಡ ಪ್ರಮಾಣ ಅನ್ನಿಸಬಹುದು. ಆದರೆ ವಾಸ್ತವದಲ್ಲಿ ಇದು ದೊಡ್ಡ ಪ್ರಮಾಣದ ಪೂರೈಕೆಯೇ ಅಲ್ಲ. ಮೂರನೇ ಎರಡರಷ್ಟು ಜನರಿಗೆ ತಿಂಗಳಿಗೆ ತಲಾ 5 ಕೆಜಿ ಆಹಾರ ಪದಾರ್ಥವನ್ನು ಅತ್ಯಂತ ಕಡಿಮೆ ಬೆಲೆಗೆ ಪೂರೈಕೆ ಮಾಡಬೇಕೆಂದು ದೇಶದ ಆಹಾರ ಭದ್ರತೆ ಕಾಯಿದೆ ಹೇಳುತ್ತಿದೆ. ಕೇಂದ್ರದ ಎಲ್ಲ ಯೋಜನೆಗಳಂತೆ ಇಲ್ಲೂ ರಾಜ್ಯಗಳು ಈ 5 ಕೆಜಿ ಜೊತೆಗೆ ತಮ್ಮ ಸಂಪನ್ಮೂಲ ಬಳಸಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪೂರೈಕೆ ಮಾಡಬಹುದು. ಇದೇ ಅವಕಾಶವನ್ನು ಬಳಸಿಕೊಂಡು ಕರ್ನಾಟಕ ಸರಕಾರ ಕೇಂದ್ರದ 5 ಕೆಜಿ ಜೊತೆಗೆ ತನ್ನ 5 ಕೆಜಿ ಸೇರಿಸಿ ಒಟ್ಟು 10 ಕೆಜಿ ಕೊಡಲು ನಿರ್ಧರಿಸಿದೆ. 10 ಕೆಜಿ ಏಕೆಂದು ಅರ್ಥವಾಗಬೇಕಾದರೆ ಈ ಕೆಳಗಿನ ಲೆಕ್ಕಚಾರವನ್ನು ನೋಡಬೇಕು. ತಿಂಗಳಿಗೆ ಒಬ್ಬರಿಗೆ 10 ಕೆಜಿ ಅಕ್ಕಿ ಅಂದರೆ ತಲಾ 10000 ಗ್ರಾಂ ಅಕ್ಕಿ. 10000 ಗ್ರಾಂ ಅಕ್ಕಿಯನ್ನು 30 ದಿನಗಳಿಂದ ಭಾಗಿಸಿದರೆ ದಿನಾ ಒಬ್ಬರಿಗೆ 333 ಗ್ರಾಂ ಅಕ್ಕಿ ಲಭ್ಯವಾಗುತ್ತದೆ. ಕೆಲವು ಅಧ್ಯಯನಗಳು 100 ಗ್ರಾಂ ಅಕ್ಕಿ 130 ಕ್ಯಾಲರಿ ಶಕ್ತಿ (ಏನರ್ಜಿ) ಉತ್ಪಾದಿಸುತ್ತದೆ ಎನ್ನುತ್ತವೆ. ಅಂದರೆ 1 ಗ್ರಾಂ ಅಕ್ಕಿ 1.3 ಕ್ಯಾಲರಿಯಷ್ಟು ಶಕ್ತಿ ಉತ್ಪಾದಿಸುತ್ತದೆ ಅಥವಾ 333 ಗ್ರಾಂ ಅಕ್ಕಿ 432 ಕ್ಯಾಲರಿ ಶಕ್ತಿ ಉತ್ಪಾದಿಸುತ್ತದೆ. ಸರಕಾರಿ ಲೆಕ್ಕಚಾರ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ವ್ಯಕ್ತಿಯೊಬ್ಬರು ದುಡಿದು ಗಳಿಸುವಷ್ಟು ಶಕ್ತಿ ಪಡೆಯಬೇಕಾದರೆ ದಿನವೊಂದಕ್ಕೆ ಕನಿಷ್ಠ 2400 ಕ್ಯಾಲರಿ ಶಕ್ತಿ ಗಳಿಸುವಷ್ಟು ಆಹಾರ ಸೇವಿಸಬೇಕು. 2400 ಕ್ಯಾಲರಿ ಎಲ್ಲಿ 432 ಕ್ಯಾಲರಿ ಎಲ್ಲಿ. ಬಡ ಜನರಿಗೆ ನೀಡುವ ಇಷ್ಟೊಂದು ಸಣ್ಣ ಪ್ರಮಾಣದ ಸವಲತ್ತಿಗೂ ಇಷ್ಟೊಂದು ಅಸಹನೆ ಏಕೆ?

ಅಸಹನೆ ಏಕೆನ್ನುವ ಪ್ರಶ್ನೆಗೆ ಎರಡು ಮೂರು ಉತ್ತರಗಳು ಸಾಧ್ಯ. ಒಂದು, ಗ್ಯಾರಂಟಿಗಳ ದಿಶೆಯಿಂದ ಕಾಂಗ್ರೆಸ್ ಚುನಾವಣೆ ಗೆದ್ದಿದೆ. ಗ್ಯಾರಂಟಿಗಳನ್ನು ಈಡೇರಿಸಲು ಬಿಟ್ಟರೆ ತಾನೇ ಕಾಂಗ್ರೆಸ್ ತನ್ನ ಮಾತು ಉಳಿಸಿಕೊಳ್ಳಲು ಸಾಧ್ಯ. ಅಕ್ಕಿ ನಿರಾಕರಿಸಿದರೆ ಕಾಂಗ್ರೆಸ್ ಪಕ್ಷದ ಒಂದು ಗ್ಯಾರಂಟಿಯನ್ನು ಈಡೇರಿಸುವುದು ಕಷ್ಟವಾಗುತ್ತದೆ. ಆವಾಗ ಕಾಂಗ್ರೆಸ್ ಪಕ್ಷ ಮತದಾರರಿಗೆ 10 ಕೆಜಿ ಅಕ್ಕಿ ಭರವಸೆ ಕೊಟ್ಟು ಮೋಸ ಮಾಡಿದೆ ಎಂದು ಪ್ರಚಾರ ಮಾಡಬಹುದು. ಜನರು ಕಾಂಗ್ರೆಸ್ ಪಕ್ಷದ ಮೇಲೆ ಭರವಸೆ ಕಳೆದುಕೊಂಡು ಬಿಜೆಪಿಯತ್ತ ಬರಬಹುದೆನ್ನುವ ಒಂದು ಸಮೀಪ ದೃಷ್ಟಿಯ ರಾಜಕೀಯ ಲೆಕ್ಕಚಾರ ಸಾಧ್ಯ. ಇದೊಂದು ಸಮೀಪ ದೃಷ್ಟಿಯ ರಾಜಕೀಯ ಲೆಕ್ಕಚಾರ ಏಕೆಂದರೆ ಒಂದು ವೇಳೆ ಕಾಂಗ್ರೆಸ್ ಪಕ್ಷ ಕೇಂದ್ರದ ಹುನ್ನಾರದಿಂದ 10 ಕೆಜಿ ಅಕ್ಕಿ ನೀಡಲು ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಜನವರಿಗೆ ಮನವರಿಕೆ ಮಾಡಿದರೆ ಕೇಂದ್ರದ ಲೆಕ್ಕಚಾರವೆಲ್ಲ ಬುಡಮೇಲಾಗಬಹುದು. ಇನ್ನೊಂದು ದೃಷ್ಟಿಯಿಂದಲೂ ಇದೊಂದು ಸಮೀಪ ದೃಷ್ಟಿಯ ರಾಜಕೀಯ ಏಕೆಂದರೆ ಇದೊಂದು ಬಡವರ ತಟ್ಟೆಯಿಂದ ಅನ್ನ ಕಸಿಯುವ ಕ್ರಮ. ಇದನ್ನೂ ಮಾಸ್ಟರ್ ಸ್ಟ್ರೋಕ್ ಎನ್ನುವವರಿದ್ದರೆ ಅವರಲ್ಲಿ ಮನುಷ್ಯತ್ವ ಸಂಪೂರ್ಣ ಸತ್ತು ಹೋಗಿದೆಯೆಂದು ತೀರ್ಮಾನಿಸಬಹುದು.

ಎರಡು, ಬಲಪಂಥೀಯ ಪಕ್ಷಗಳ ಇತಿಹಾಸದಲ್ಲಿ ಅವು ಬಡವರ ಪರ ನಿಂತ ಉದಾಹರಣೆಗಳು ತುಂಬಾ ಕಡಿಮೆ. ಪ್ರಪಂಚದ ಯಾವುದೇ ದೇಶದಲ್ಲೂ ಫೆಸಿಸ್ಟ್ (ಬಲಪಂಥೀಯ) ಪಕ್ಷಗಳು ಬಡವರ, ತಳಸ್ತರದ ಜನರ, ಕಾರ್ಮಿಕರ, ಮಹಿಳೆಯರ, ಅಲ್ಪಸಂಖ್ಯಾತರ, ದುಡಿಯುವ ವರ್ಗದ ಪರ ನಿಂತ ಉದಾಹರಣೆ ಇಲ್ಲ. ಜರ್ಮನಿ, ಗ್ರೀಸ್, ಪೋರ್ಚುಗಲ್, ಬ್ರೆಜಿಲ್, ಚೈನಾ, ಹಂಗೇರಿ, ಫ್ರಾನ್ಸ್ ಇವೆಲ್ಲ ಹಿಂದೆ ಫೆಸಿಸ್ಟ್ ಪಕ್ಷಗಳ ಆಳ್ವಿಕೆ ಕಂಡ ದೇಶಗಳು. ಇಲ್ಲೆಲ್ಲ ಫೆಸಿಸ್ಟ್ ಪಕ್ಷಗಳು ಒಂದೋ ಭೂಮಾಲೀಕರ ಪರ ಅಥವಾ ಬಂಡವಾಳಿಗರ ಪರ ಕೆಲಸ ಮಾಡಿವೆ. ಎಲ್ಲ ಕಡೆ ದುಡಿಯುವ ವರ್ಗ ಮತ್ತು ಅವರ ಪಕ್ಷಗಳು ಫೆಸಿಸ್ಟ್ ಪಕ್ಷಕ್ಕೆ ಬಹುದೊಡ್ಡ ಶತ್ರುಗಳು. ದುಡಿಯುವ ವರ್ಗವನ್ನು ಮತ್ತು ಅವರ ಪಕ್ಷಗಳನ್ನು ನಿರ್ನಾಮ ಮಾಡುವುದು ಫೆಸಿಸ್ಟ್ ಪಕ್ಷದ ಪರಮ ಗುರಿ. ನಮ್ಮಲ್ಲೂ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಕಮ್ಯುನಿಸ್ಟರು ಇವರ ಬಹುದೊಡ್ಡ ಶತ್ರುಗಳು. ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಮತ್ತು ನಂತರ ಬಡತನದ ಬಗ್ಗೆ, ಬಡವರ ಬಗ್ಗೆ, ಅಸಮಾನತೆ ಬಗ್ಗೆ, ನಿರುದ್ಯೋಗದ ಬಗ್ಗೆ ಗಂಭೀರವಾಗಿ ಚರ್ಚಿಸಿದ್ದನ್ನು ನೋಡಲು ಸಾಧ್ಯವಾಗಿಲ್ಲ. ಆರ್ಟಿಕಲ್ 370 ರದ್ದುಗೊಳಿಸುವುದು, ರಾಮ ಜನ್ಮ ಭೂಮಿ, ಆಯೋಧ್ಯಯಲ್ಲಿ ಮಂದಿರ ನಿರ್ಮಿಸುವುದು, ಗೋಹತ್ಯ ನಿಷೇಧ, ಚರಿತ್ರೆ ಪುನರ್ ರಚಿಸುವುದು ಇತ್ಯಾದಿಗಳು ಅವರಿಗೆ ಮುಖ್ಯವಾದಷ್ಟು ಬಡತನ, ಅಸಮಾನತೆಗಳು ಮುಖ್ಯವಾಗಿಲ್ಲ.

ಒಂದು ದೇಶ– ಒಂದು ಭಾಷೆ, ಒಂದು ಧರ್ಮ, ಒಂದು ಸಂಸ್ಕೃತಿ, ಒಂದು ಮಾರುಕಟ್ಟೆ, ಒಂದು ತೆರಿಗೆ ಹೀಗೆ ಎಲ್ಲದವುಗಳಲ್ಲಿ ಒಂದನ್ನು ಕಾಣುವ ಪಕ್ಷ ಯಾವುತ್ತೂ ಒಂದು ದೇಶ – ಒಂದು ಶಿಕ್ಷಣ, ಒಂದು ಆರೋಗ್ಯ, ಒಂದು ಕನಿಷ್ಟ ವೇತನ, ಒಂದು ಉದ್ಯೋಗದ ಬಗ್ಗೆ ಮಾತಾಡುವುದಿಲ್ಲ. ಭಾಷೆ, ಧರ್ಮ, ಗಡಿ, ಧ್ವಜ ಇತ್ಯಾದಿ ನಿರ್ಜೀವ ವಸ್ತುಗಳಲ್ಲಿ ದೇಶಪ್ರೇಮವನ್ನು ನೋಡುವ ಮತ್ತು ಬೆಳೆಸಲು ಪ್ರಯತ್ನಿಸುವ ಪಕ್ಷಕ್ಕೆ ಜನರಲ್ಲಿ ದೇಶವನ್ನು ಮತ್ತು ಪರಸ್ಪರ ಪ್ರೀತಿಸುವ ಜನರಲ್ಲಿ ದೇಶಪ್ರೇಮವನ್ನು ನೋಡಲು ಸಾಧ್ಯವಾಗಿಲ್ಲ. ಜನರೇ ದೇಶ ಮತ್ತು ದೇಶ, ರಾಜ್ಯಕ್ಕೆ ಸೇರಿದ ನಾವೆಲ್ಲ ಒಂದೇ ಎನ್ನುವ ಭಾವನೆ ದೇಶಪ್ರೇಮ. ಪ್ರಪಂಚದಲ್ಲಿ ಇಂದು ಮುಂಚೂಣಿಯಲ್ಲಿರುವ ದೇಶಗಳೆಲ್ಲ ಇದೇ ಮಾದರಿಯನ್ನು ದೇಶ ಮತ್ತು ದೇಶಪ್ರೇಮವನ್ನು ಕಟ್ಟಿಕೊಂಡಿರುವುದು. ಈ ಬಗೆಯ ದೇಶಪ್ರೇಮದಲ್ಲಿ ಮಾತ್ರ ದೇಶದ ಯಾವುದೇ ಮೂಲೆಯಲ್ಲಿ ಯಾವುದೇ ವ್ಯಕ್ತಿಗಾಗುವ ಅನ್ಯಾಯ, ಅಸಮಾನತೆ ತನಗೇ ಆದ ಅನುಭವ ಆಗಲು ಸಾಧ್ಯ. ಭಾಷೆ, ಸಂಸ್ಕೃತಿ, ಧರ್ಮ, ಗಡಿ, ಧ್ವಜಗಳಲ್ಲಿ ಮಾತ್ರ ದೇಶ ಮತ್ತು ದೇಶಪ್ರೇಮ ಕಾಣುವವರಿಗೆ ಜೀವಂತ ಜನರನ್ನು ಜಾತಿ, ಧರ್ಮದ ಹೆಸರಲ್ಲಿ ವಿಭಜಿಸುವುದು ಮತ್ತು ಜನರ ನಡುವೆ ಕೋಮು ವೈಷಮ್ಯವನ್ನು ಹುಟ್ಟು ಹಾಕುವುದು ಅಸಹಜವಾಗುವುದಿಲ್ಲ. ವಾಸ್ತವ ಹೀಗಿರುವಾಗ ಬಡಜನರಿಗೆ ಅಕ್ಕಿ ನಿರಾಕರಿಸುವುದು ವಿಶೇಷ ಅನ್ನಿಸುವುದಿಲ್ಲ.



ಮೂರು, ಕಾಂಗ್ರೆಸ್ ಪಕ್ಷ ನೀಡಲಿಚ್ಛಿಸುವ ಸವಲತ್ತುಗಳು ಬಿಜೆಪಿ ಅಭಿವೃದ್ಧಿ ಕಲ್ಪನೆಯಲ್ಲಿ ಫ್ರೀಬೀಸ್ ಎಂದು ಬ್ರಾಂಡ್ ಆಗಿವೆ. ಫ್ರೀಬೀಸ್ ಎಂದರೆ ಉಚಿತ ಎನ್ನುವ ಅರ್ಥದ ಜೊತೆಗೆ ಅಭಿವೃದ್ಧಿಗೆ ಏನೇನೂ ಕೊಡುಗೆ ಇಲ್ಲದ ಸವಲತ್ತುಳೆನ್ನುವ ಅರ್ಥ ಇದೆ. ದೇಶದ ಪ್ರಧಾನಿ ಪ್ರಕಾರ ಇಂತಹ ಸವಲತ್ತುಗಳ ಬದಲು ಸಿಕ್ಸ್ ಲೇನ್ ಹೈವೇಸ್, ಬುಲೆಟ್ ಟ್ರೈನ್‌ಗಳು, ಏರ್‌ಪೋರ್ಟ್‌ಗಳು, ಬಂದರುಗಳು ಇವುಗಳ ಮೇಲೆ ಮಾಡುವ ವಿನಿಯೋಜನೆಗಳು ಅಭಿವೃದ್ಧಿ ಪೂರಕ. ಪ್ರಧಾನಿಗಳು ಉದ್ದಿಮೆದಾರರಲ್ಲಿ ಉತ್ಪಾದಕರನ್ನು ನೋಡುತ್ತಾರೆ ಹೊರತು ಸಣ್ಣಪುಟ್ಟ ಕಾರ್ಮಿಕರಲ್ಲಿ ಉತ್ಪಾದಕರನ್ನು ನೋಡುವುದಿಲ್ಲ. ದೊಡ್ಡ ಉದ್ದಿಮೆಗಳಿಗೆ ಕಡಿಮೆ ಬಡ್ಡಿಗೆ ಸಾಲ ಕೊಡುವುದು, ಸಾಲ ಕಟ್ಟದಿದ್ದರೆ ಸಾಲ ಮನ್ನಾ ಮಾಡುವುದು, ಕಡಿಮೆ ಬೆಲೆಗೆ ಭೂಮಿ ಕೊಡುವುದು, ಕಡಿಮೆ ಬೆಲೆಗೆ ಪ್ರಾಕೃತಿ ಸಂಪನ್ಮೂಲ ಕೊಡುವುದು, ಪರಿಸರ ಮಾಲಿನ್ಯ ಕಾಯಿದೆಯನ್ನು ಸಡಿಲಗೊಳಿಸುವುದು, ಭೂಸ್ವಾಧೀನ ಮಸೂದೆಯನ್ನು ಸಡಿಲಗೊಳಿಸುವುದು ಇತ್ಯಾದಿಗಳೆಲ್ಲ ಬಿಜೆಪಿ ಸರಕಾರದ ಉತ್ಪಾದಕರನ್ನು ಬೆಂಬಲಿಸುವ ಕ್ರಮಗಳು. ಈ ಉದ್ದಿಮೆಗಳು ಉತ್ಪಾದಿಸುವ ಸರಕುಸೇವೆಗಳನ್ನು ಖರೀದಿಸಿ ಅನುಭವಿಸುವ ತಳಸ್ತರದ ಜನರ ಸ್ವಾಧೀನ ಅಲ್ಪಸ್ವಲ್ಪ ಖರೀದಿಸುವ ಶಕ್ತಿ ತುಂಬುವುದನ್ನು ಕೇಂದ್ರ ಸರಕಾರ ಪ್ರೊಡಕ್ಟಿವ್ ಎಂದು ಪರಿಗಣಿಸಿಲ್ಲ.

ಕೇಂದ್ರ ಸರಕಾರ ಅಕ್ಕಿ ನಿರಾಕರಿಸಿದ ಕೂಡಲೇ ಯೋಜನೆ ನಿಲ್ಲುವುದಿಲ್ಲ. ಯೋಜನೆಯನ್ನು ಜಾರಿ ಕೊಡಲು ಹಲವು ದಾರಿಗಳಿವೆ. ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸುವುದು, ಅಕ್ಕಿ ಪೂರೈಕೆ ಮಾಡುತ್ತೇನೆಂದು ಒಪ್ಪಿಕೊಂಡ ಫುಡ್ ಕಾರ್ಪೋರೇಶನ್ ಆಫ್ ಇಂಡಿಯಾವನ್ನು ಪ್ರಶ್ನಿಸುವುದು, ಕೇಂದ್ರದ ಮೇಲೆ ಒತ್ತಡ ಹೇರುವುದು ಹೀಗೆ ಹಲವು ದಾರಿಗಳಿವೆ. ಇವೆಲ್ಲವುಗಳ ಜೊತೆಗೆ ರಾಜ್ಯ ಸರಕಾರ ಪೂರೈಕೆ ಮಾಡಲು ನಿರ್ಧರಿಸಿರುವ 10 ಕೆಜಿ ಅಕ್ಕಿಯ ಬೆಲೆಯನ್ನು (ರೂ.365ನ್ನು) ನೇರವಾಗಿ ಫಲಾನುಭವಿಗಳಿಗೆ ನೀಡುವುದು ಹೆಚ್ಚು ಉಪಯುಕ್ತ. ಈ ಪರಿಹಾರದಲ್ಲಿ ಎರಡು ಉತ್ತರಗಳಿವೆ. 10 ಕೆಜಿ ಅಕ್ಕಿ ಪೂರೈಕೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಸಾಧಿಸುವುದರ ಜೊತೆಗೆ ಅಕ್ಕಿ ಬದಲು ಕ್ಯಾಶ್ ಏಕೆ ನೀಡಲಾಗಿದೆ ಎನ್ನುವುದನ್ನು ರಾಜ್ಯದ ಜನರಿಗೆ ತಿಳಿಸಿದಂತಾಗುತ್ತದೆ. ಅಕ್ಕಿ ಬದಲು ಕ್ಯಾಶ್ ಏಕೆ ನೀಡಲಾಗಿದೆ ಎನ್ನುವ ಮಾಹಿತಿ ತುಂಬಾ ಅಗತ್ಯ. ನೆಮ್ಮದಿಯ ಬದುಕಿಗಾಗಿ ಈ ದೇಶದ ಜನರೆಲ್ಲ ಸೇರಿ ಸಂವಿಧಾನ ರಚಿಸಿಕೊಂಡಿದ್ದೇವೆ. 5 ವರ್ಷಕ್ಕೊಮ್ಮೆ ಪಕ್ಷವೊಂದನ್ನು ಚುನಾಯಿಸಿ ಸಂವಿಧಾನವನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ನೀಡುತ್ತೇವೆ. ಅಧಿಕಾರಕ್ಕೇರಿದ ಪಕ್ಷ ದೇಶದ ಸಂವಿಧಾನವನ್ನು ಅನುಷ್ಠಾನಗೊಳಿಸುವುದಕ್ಕಿಂತ ಹೆಚ್ಚು ಮಹತ್ವವನ್ನು ತನ್ನ ಪಕ್ಷದ ಸಂವಿಧಾನ ಅನುಷ್ಠಾನಗೊಳಿಸಲು ನೀಡಿದರೆ ಅದು ಜನದ್ರೋಹವಾಗುತ್ತದೆ; ದೇಶದ್ರೋಹವಾಗುತ್ತದೆ. ಇಂತಹ ಗಂಭೀರ ಸಮಸ್ಯೆಗೆ ಜನರು ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ.

ಸರಕಾರಕ್ಕೆ ಏನೂ ಗೊತ್ತಿಲ್ಲ ಎಂಬುದು ವಿಲಕ್ಷಣ ಸಂಗತಿ–ಯೆಚೂರಿ ಟೀಕೆ

ಮಾಧ್ಯಮಗಳಲ್ಲಿ ಪ್ರಕಟವಾದ ಸುದ್ದಿಗಳಿಗೆ ಪ್ರತಿಕ್ರಿಯಿಸಿರುವ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಿ ರಾಜೀವ್ ಚಂದ್ರಶೇಖರ್ ಟ್ವೀಟ್ ಇನ್ನೂ ಹಲವು ಪ್ರಶ್ನೆಗಳನ್ನು ಎತ್ತಿವೆ. ಫೋನ್ ನಂಬರ್ ಹಾಕಿದಾಗ ಒಂದು ಟೆಲಿಗ್ರಾಂ ಬಾಟ್ ಕೊವಿನ್ ಆಪ್‌ನ ವಿವರಗಳನ್ನು ಹೊರಹಾಕುತ್ತಿದೆ ಎಂಬುದಕ್ಕೆ CERT-In ತಕ್ಷಣ ಸ್ಪಂದಿಸಿದೆ ಮತ್ತು ಪರಾಮರ್ಶೆ ನಡೆಸಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ. ಅವರ ಪ್ರಕಾರ ಈ ಬಾಟ್ ಒಂದು 'ಥ್ರೆಟ್ ಆಕ್ಟರ್' ದತ್ತಾಂಶ ಸಂಗ್ರಹದಿಂದ ಇದನ್ನು ಪಡೆಯುತ್ತಿದ್ದು, ಅದು ಈ ಹಿಂದೆಯೇ ಕದ್ದಿರುವ ದತ್ತಾಂಶದಿಂದ ತುಂಬಿರುವಂತೆ ಕಾಣುತ್ತದೆ. ಕೊವಿನ್ ಆಪ್ ಅಥವ ದತ್ತಾಂಶ ಸಂಗ್ರಹವನ್ನು ನೇರವಾಗಿ ಭೇದಿಸಿದಂತೆ ಕಾಣುತ್ತಿಲ್ಲ ಎಂದು ಅವರು ಹೇಳಿದ್ದಾರೆ.

ಸರಕಾರಕ್ಕೆ ಈ ಬಗ್ಗೆ ಏನೂ ಗೊತ್ತಿಲ್ಲ ಎಂಬುದು ನಿಜವಾಗಿಯೂ ವಿಲಕ್ಷಣ ಸಂಗತಿ ಎಂದು ಇದಕ್ಕೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಪ್ರತಿಕ್ರಿಯಿಸಿದ್ದಾರೆ.

ಈ ಮೊದಲೇ ಭೇದಿಸುದಂತೆ "ಕಾಣುತ್ತದೆ" ಎಂದರೆ ಏನರ್ಥ? ಯಾವಾಗ? ಯಾವ ದತ್ತಾಂಶ? ಹೇಗೆ? ಯಾರು? ಎಫ್‌ಐಆರ್ ಹಾಕಲಾಗಿದೆಯೇ? ಸೂಕ್ಷ್ಮದತ್ತಾಂಶಗಳ ಹೊಣೆಗಾರಿಕೆಯನ್ನು ವಹಿಸಿಕೊಂಡಿರುವ ಸಂಸ್ಥೆಗಳು ಏನು ಮಾಡುತ್ತಿವೆ? ಎಂದು ಯೆಚುರಿ ಪ್ರಶ್ನಿಸಿದ್ದಾರೆ.

ಈ ಸರಕಾರದ ಅಡಿಯಲ್ಲಿ ದತ್ತಾಂಶ ಭದ್ರತೆಯೂ ಇಲ್ಲ, ಆರೋಗ್ಯ ಭದ್ರತೆಯೂ ಇಲ್ಲ, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ತಳ ಸಮುದಾಯದ ಜನಗಳ ಜೀವ ಮತ್ತು ಸ್ವಾತಂತ್ರ್ಯದ ಭದ್ರತೆಯೂ ಇಲ್ಲ. ಮಣಿಪುರ ಹೊತ್ತಿ ಉರಿಯುತ್ತಿದೆ. ದ್ವೇಷ ಮತ್ತು ಭಯೋತ್ಪಾದನೆಯ ಉರಿ ಹಚ್ಚುವ ಪ್ರಚಾರಗಳು ನಡೆಯುತ್ತಿವೆ. ಕೇವಲ ಗಲಭೆ, ಅರಾಜಕತೆಯನ್ನು ಹರಡಿಸಲಾಗುತ್ತಿದೆ ಎಂದು ಅವರು ಯೆಚುರಿ ತಮ್ಮ ಟ್ವೀಟ್‌ನಲ್ಲಿ ಖೇದ ವ್ಯಕ್ತಪಡಿಸಿದ್ದಾರೆ.

ಜನತೆಯ ಉಳಿತಾಯದ ಕ್ರಿಮಿನಲ್ ಲೂಟಿಗೆ ಕಾನೂನುಬದ್ಧತೆ!

ಬೇಕೆಂದೇ ಸುಸ್ತಿದಾರರಾಗುವ ವಂಚಕರು ಮತ್ತು ಕ್ರಿಮಿನಲ್ ಅಪರಾಧಗಳನ್ನು ಎಸಗುವವರ ಲೂಟಿಗಳನ್ನು ಆರ್‌ಬಿಐ ಸುತ್ತೋಲೆ ಕಾನೂನುಬದ್ಧಗೊಳಿಸಿದೆ. ಜನತೆಯ ಉಳಿತಾಯಗಳ ಲೂಟಿಯನ್ನು ಕಾನೂನುಬದ್ಧಗೊಳಿಸುವ ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಆಗ್ರಹಿಸಿದ್ದಾರೆ.

ಮೋದಿ ನೇತೃತ್ವದ ಕೋಮುವಾದಿ–ಕಾರ್ಪೊರೇಟ್ ನಂಟು ಕಳೆದ 10 ವರ್ಷಗಳಲ್ಲಿ 13,22,309 ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ ಸುಸ್ತಿಸಾಲಗಳನ್ನು 'ರೈಟ್–ಆಫ್' ಮಾಡಿದೆ. ಮೋದಿ ಸರಕಾರ ಜನತೆಯ ಹಣವನ್ನು ವಸೂಲು ಮಾಡಲು ಈ ವಂಚಕರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿತ್ತು ಎಂದು ಅವರು ಹೇಳಿದ್ದಾರೆ.

ಕಾರ್ಪೊರೇಟ್‌ಗಳ ಲಾಭಕ್ಕೆ ರೈತರ ಕಡೆಗಣನೆ..... ಪುಟ 8 ರಿಂದ

ವೆಚ್ಚವು ಅವರ ನಿಜವಾದ ವೆಚ್ಚಕ್ಕಿಂತ ಕಡಿಮೆ ಇರುತ್ತವುದರಿಂದ, ಹೆಚ್ಚಿನ ಉತ್ಪಾದನಾ ವೆಚ್ಚವನ್ನು ಹೊಂದಿರುವ ರಾಜ್ಯಗಳಲ್ಲಿನ ರೈತರು ಎರಡನೇ ಬಾರಿಗೆ ವಂಚನೆಗೊಳಗಾಗುತ್ತಾರೆ. ಈ ಎಂಎಸ್‌ಪಿ ಬಹುತೇಕ ಕಾಲ್ಪನಿಕ ಅಥವಾ ಕಾಗದದ ಮೇಲೆ ಇರುವುದರಿಂದ ಹೆಚ್ಚಿನ ಸಂದರ್ಭಗಳಲ್ಲಿ ಖಚಿತವಾದ ಸಂಗ್ರಹಣೆ ಇಲ್ಲದಿರುವುದರಿಂದ ಮೂರನೇ ಬಾರಿ ರೈತರು ವಂಚನೆಗೊಳಗಾಗುತ್ತಾರೆ. 2021–22 ರಲ್ಲಿ ಒಟ್ಟು ಉತ್ಪಾದನೆಯ ಶೇಕಡಾವಾರು ಸಂಗ್ರಹಣೆಯು ತೊಗರಿ ಶೇ. 1.14, ಉದ್ದು ಶೇ. 5.07 ಉದ್ದು ಶೇ. 0.21 ಕಡಲೆಕಾಯಿಗೆ ಶೇ. 2.05 ಮತ್ತು ಸೋಯಾಬೀನ್‌ಗೆ ಶೇಕಡಾ ಶೂನ್ಯವಾಗಿದೆ. 2022–23 ರಲ್ಲಿ ಫೆಬ್ರವರಿ 28, 2023 ರಂತೆ ವರದಿ ಮಾಡಲಾದ ಅಂಕಿಅಂಶಗಳ ಪ್ರಕಾರ ಇದು ತೊಗರಿ, ಉದ್ದು ಮತ್ತು ಸೋಯಾಬೀನ್‌ಗೆ ಶೂನ್ಯ ಶೇಕಡಾ ಮತ್ತು ಹಸಿರು ಶೇಕಡಾ 6.39 ರಷ್ಟಿತ್ತು.

ಸರ್ಕಾರದ ಈ ನೀತಿಗಳು ಕಾರ್ಪೊರೇಟ್ ಕಂಪನಿಗಳಿಗೆ ಸರ್ಕಾರದ ಯಾವುದೇ ನಿಯಂತ್ರಣವಿಲ್ಲದೆ ಬೆಲೆಗಳನ್ನು ನಿಗದಿಪಡಿಸಲು ಮುಕ್ತ ಅವಕಾಶವನ್ನು ನೀಡಿರುವುದರಿಂದ, ರೈತರು ಒಂದಡೆ ತಮ್ಮ ಉತ್ಪನ್ನಗಳಿಗೆ ಅನ್ಯಾಯದ ಕಡಿಮೆ ಬೆಲೆಯಿಂದ ಮತ್ತೊಂದಡೆ ನಿರಂತರವಾಗಿ ಹೆಚ್ಚುತ್ತಿರುವ ಕೃಷಿ ಉತ್ಪನ್ನಗಳಿಗೆ ಮಾಡುವ ವೆಚ್ಚಗಳು, ಈ ಎರಡರ ನಡುವೆ ಸಿಲುಕಿ ನರಳುತ್ತಿದ್ದಾರೆ.

ಎಂಎಸ್‌ಪಿ ಹೆಚ್ಚಳ ಗ್ರಾಹಕರಿಗೆ ಹೊರೆಯೇ?

ಎಂಎಸ್‌ಪಿಯಲ್ಲಿನ ಹೆಚ್ಚಳವು ಗ್ರಾಹಕರಿಗೆ ಬೆಲೆಗಳನ್ನು ಹೆಚ್ಚಿಸುತ್ತದೆ, ಇದರಿಂದ ಗ್ರಾಹಕರಿಗೆ ಹೆಚ್ಚಿನ ಹೊರೆಯಾಗುತ್ತದೆ ಎಂಬುದು ಸಾಮಾನ್ಯವಾಗಿ ಬಳಸುವ ಕುತಂತ್ರವಾಗಿದೆ. ಆದರೆ ರೈತರು ಮತ್ತು ಗ್ರಾಹಕರ ಜೀವನ ವೆಚ್ಚದಲ್ಲಿ ಆಗುತ್ತಿರುವ ನಿರಂತರ ಏರಿಕೆಯನ್ನು ತಡೆಯಲು ಸರ್ಕಾರ ಏನನ್ನೂ ಮಾಡುವುದಿಲ್ಲ. ನಿಸ್ಸಂದೇಹವಾಗಿ, ಉತ್ತಮ ಕೃಷಿ ಪದ್ಧತಿಗಳು, ಹೆಚ್ಚು ಇಳುವರಿ ನೀಡುವ ತಳಿಗಳು ಮತ್ತು ಕೈಗೆಟುಕುವ ಹಾಗೂ ಗುಣಮಟ್ಟದ ಇನ್‌ಪುಟ್‌ಗಳನ್ನು ಸಬ್ಸಿಡಿ ದರಗಳಲ್ಲಿ ಒದಗಿಸುವುದರೊಂದಿಗೆ ಉತ್ಪಾದಕತೆಯನ್ನು ಹೆಚ್ಚಿಸುವ ಅವಶ್ಯಕತೆಯಿದೆ. ವೈಜ್ಞಾನಿಕ ಬೆಳವಣಿಗೆಗಳನ್ನು ರೈತರಿಗೆ ಕೊಂಡೊಯ್ಯಲು ಬಲವರ್ಧಿತ ವಿಸ್ತರಣಾ ಸೇವೆಗಳೊಂದಿಗೆ ವೈಜ್ಞಾನಿಕ ಕೃಷಿ ಪದ್ಧತಿಗಳ ವಿಸ್ತಾರದ ಅಗತ್ಯವಿದೆ. ಆದರೆ, ಇದು ನರೇಂದ್ರ ಮೋದಿ ಮತ್ತು ಬಿಜೆಪಿ ಸರ್ಕಾರದ ಆದ್ಯತೆಯಾಗಿಲ್ಲ. ರೈತರನ್ನು ಉದ್ದೇಶಪೂರ್ವಕವಾಗಿ ಋಣಭಾರಕ್ಕೆ ತಳ್ಳಿ, ಅವರನ್ನು ಅಸಹಾಯಕರನ್ನಾಗಿಸುವ ಮತ್ತು ಅವರ ಭೂಮಿಯಿಂದ ಹೊರ ತಳ್ಳುವ ಉದ್ದೇಶದಿಂದ, ರೈತರಿಗೆ ನಷ್ಟವನ್ನುಂಟು ಮಾಡುವ ದಿಕ್ಕಿನತ್ತ ಬಿಜೆಪಿ ಸರ್ಕಾರವು ಸಾಗುತ್ತಿದೆ. ಇದು ಕಾರ್ಪೊರೇಟ್ ಕಂಪನಿಗಳ ಲಾಭವನ್ನು ಹೆಚ್ಚಿಸುವ ಮತ್ತು ಬೊಕ್ಕಸವನ್ನು ತುಂಬುವ ಅವರ ಉದ್ದೇಶವನ್ನು ಸಹ ಪೂರೈಸುತ್ತದೆ. ಈ ಹಿಂದೆ ತರಲಾದ ಮೂರು ಕೃಷಿ ಕಾಯಿದೆಗಳು ಮತ್ತು ವಿದ್ಯುತ್ ಕಾಯ್ದೆಗೆ ತಿದ್ದುಪಡಿಗಳು ರೈತರನ್ನು ಕೃಷಿಯಿಂದ ಹೊರತಳ್ಳುವ ಆಟದ ಯೋಜನೆಯ ಭಾಗವಾಗಿದೆ. ಈ ಸಂದರ್ಭದಲ್ಲಿಯೇ ಖಚಿತವಾದ ಸಂಗ್ರಹಣೆಯೊಂದಿಗೆ ಎಂಎಸ್‌ಪಿಯ ಕಾನೂನುಬದ್ಧ ಖಾತರಿಯನ್ನು ಖಚಿತಪಡಿಸಿಕೊಳ್ಳಲು ಐಕ್ಯ ಹೋರಾಟಗಳು ಪ್ರಸ್ತುತವಾಗಿವೆ ಮತ್ತು ಅದನ್ನು ತೀವ್ರಗೊಳಿಸಬೇಕಾಗಿದೆ.

ಅನು: ಸಿಚಿ

ಕ್ರಿಮಿನಲ್‌ಗಳೊಂದಿಗೆ ರಾಜಸಂಧಾನವೇ?

ಈ ಆರ್‌ಬಿಐ ಸುತ್ತೋಲೆಯ ಬಗ್ಗೆ ಟಿಪ್ಪಣಿ ಮಾಡುತ್ತ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾಒಕ್ಕೂಟದ ಮಾಜಿ ಪ್ರಧಾನ ಕಾರ್ಯದರ್ಶಿ ಥಾಮಸ್ ಫ್ರಾಂಕೋ ಈ ಪ್ರಶ್ನೆ ಕೇಳುತ್ತಾರೆ.

ಬ್ಯಾಂಕುಗಳು ಆರ್‌ಬಿಐಗೆ ವರದಿ ಮಾಡಿರುವ ವಂಚನೆಗಳ ಸಂಖ್ಯೆ 2023 ವರ್ಷವೊಂದರಲ್ಲೇ 13,530. ಹಿಂದಿನ ಎರಡು ವರ್ಷಗಳಲ್ಲಿ 100 ಕೋಟಿ ರೂ. ಹೆಚ್ಚಿನ ಮೊತ್ತದ ಖಾತೆಗಳಲ್ಲಿ ಒಟ್ಟು 97245 ಕೋಟಿ ರೂ.ಗಳ ನಷ್ಟ ಬ್ಯಾಂಕುಗಳಿಗಾಗಿದೆ.

ಕಳೆದ 5 ವರ್ಷಗಳಲ್ಲಿ ಬ್ಯಾಂಕುಗಳಲ್ಲಿ 983 ದೊಡ್ಡ ಪ್ರಕರಣಗಳಲ್ಲಿ ಒಟ್ಟು 3,76, 400 ಕೋಟಿ ರೂ.ಗಳನ್ನು ಕಳೆದುಕೊಂಡಿರುವುದಾಗಿ ಬ್ಯಾಂಕುಗಳು ವರದಿ ಮಾಡಿವೆ.

ಇಂತಹ ಕ್ರಿಮಿನಲ್‌ಗಳೊಂದಿಗೆ ರಾಜಿ ಇತ್ಯರ್ಥಕ್ಕೆ ಬರುವುದು ಸರಿಯೇ ಎಂದು ಅವರು ಕೇಳುತ್ತಾರೆ.

ಇದರ ಲಾಭ ಪಡೆಯುವವರು ಯಾರು ಎಂಬುದು ಸ್ಪಷ್ಟ ಎನ್ನುತ್ತಾರೆ ಅವರು.

ಉದಾ: 28 ಬ್ಯಾಂಕುಗಳಿಗೆ 23000 ಕೋಟಿ ರೂ. ವಂಚನೆ ಮಾಡಿದ್ದ ಎಬಿಜಿ ಶಿಪ್‌ಯಾರ್ಡ್‌ನ ರಿಷಿ ಅಗರ್‌ವಾಲ್ ಈಗ ಬಿಡಿಗಾಸು ಕೊಟ್ಟು ಒಂದು ರಾಜಿ ಇತ್ಯರ್ಥ ಮಾಡಿಕೊಳ್ಳಬಹುದು. ಅದೇ ರೀತಿ ವಿನ್‌ಸಮ್ ಡೈಮಂಡ್ಸ್‌ನ ಜತಿನ್ ಮೆಹ್ತ, ಅದಾನಿಯ ನಿಕಟ ಸಂಬಂಧಿ, ದೇಶದಿಂದ ಪಲಾಯನ ಮಾಡಿದಾತ ಈಗ ವಾಪಾಸ್ ಬರಬಹದು, ಜತೆಗೆ ವಿಜಯ ಮಲ್ಯ, ಮೆಹೆರ್ ಚೊಕ್ಸಿ, ನೀರವ್ ಮೋದಿ ಮತ್ತಿತರರೂ ಮರಳಿ ಬಂದು ಚುನಾವಣಾ ನಿಧಿಗಳಿಗೆ ಕಾಣಿಕೆ ಸಲ್ಲಿಸಬಹುದು ಎನ್ನುತ್ತಾರೆ ಫ್ರಾಂಕೋ.(cenfa.org/, ಜೂನ್ 15).

ವಂಚಕ ಸುಸ್ತಿದಾರರ ಸಾಲಗಳ ಸಂಧಾನದ ಮೂಲಕ ಇತ್ಯರ್ಥ–ಸಾರ್ವಜನಿಕ ಹಣದ ಲೂಟಿಗೆ ರಹದಾರಿ

ಜೂನ್ 21 ರಂದು ದೇಶಾದ್ಯಂತ ಪ್ರತಿಭಟನೆಗೆ ಬಿಇಎಫ್‌ಐ ಕರೆ

ಉದ್ದೇಶಪೂರ್ವಕವಾಗಿಯೇ ಬ್ಯಾಂಕ್ ಸಾಲಗಳ ಮರುಪಾವತಿ ಮಾಡದೆ ಸುಸ್ತಿದಾರರಾಗಿರುವವರು ಮತ್ತು ವಂಚನೆಯಲ್ಲಿ ತೊಡಗಿರುವ ಕಂಪನಿಗಳು ಇನ್ನು ಮುಂದೆ ರಾಜಿಸಂಧಾನ ಇತ್ಯರ್ಥಗಳ ಮೂಲಕ ತಮ್ಮ ಸಾಲಗಳನ್ನು ರೈಟ್ ಆಫ್ ಮಾಡಿಕೊಳ್ಳಬಹುದು. ದೇಶದ ಕೇಂದ್ರೀಯ ಬ್ಯಾಂಕ್ ಇದಕ್ಕೆ ಅವಕಾಶ ಮಾಡಿಕೊಟ್ಟಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (RBI), 8 ಜೂನ್ 2023 ರಂದು ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಬ್ಯಾಂಕೇತರ ವಿತ್ತೀಯ ಸಂಸ್ಥೆ (NBFC)ಗಳು, ಅಖಿಲ ಭಾರತ ಹಣಕಾಸು ಸಂಸ್ಥೆಗಳು ಸುಸ್ತಿ ಸಾಲ ವಸೂಲಾತಿಗಾಗಿ, ರಾಜಿ ಸಂಧಾನ ಮೂಲಕ ಇತ್ಯರ್ಥ (Compromise Settlement) ಮತ್ತು ತಾಂತ್ರಿಕವಾಗಿ ಸಾಲ ವಜಾ (write off) ಮಾಡುವ ವಿಧಾನಗಳ ಚೌಕಟ್ಟಿನ ಬಗ್ಗೆ ಪ್ರಕಟಣೆ ಹೊರಡಿಸಿದೆ.

ಆರ್‌ಬಿಐ ನಿರೂಪಿಸಿರುವ ಈ ಹೊಸ ನೀತಿಯು 'ಉದ್ದೇಶ ಪೂರ್ವಕ ಸುಸ್ತಿದಾರರು' ಮತ್ತು ವಂಚನೆಯ ಪ್ರಕರಣಗಳೆಂದು ನಿರ್ಣಯಿಸಲ್ಪಟ್ಟ ಸುಸ್ತಿದಾರರೊಂದಿಗೆ ರಾಜಿ ಸಂಧಾನದ ಮೂಲಕ ಸಾಲ ವಸೂಲಾತಿ ಮಾಡುವ ಹಾಗೂ ಆ ಮೂಲಕ ವಸೂಲಾಗದ ಸಾಲದ ಮೊತ್ತಗಳನ್ನು ತಾಂತ್ರಿಕವಾಗಿ ತಮ್ಮ ಆಂತರಿಕ ಲೆಕ್ಕ ಪತ್ರಗಳಿಂದ ಹೊರಹಾಕಲು ನೀತಿಗಳನ್ನು ರೂಪಿಸಲು ವಾಣಿಜ್ಯ ಬ್ಯಾಂಕ್‌ಗಳು ಹಾಗೂ ಮೇಲೆ ತಿಳಿಸಿದ ಎಲ್ಲ ವಿತ್ತೀಯ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಅವಕಾಶ ನೀಡುತ್ತದೆ.

ಅಕ್ರಮ ಹಣ ವರ್ಗಾವಣೆಯ ಪ್ರಕರಣಗಳೇ..

ಉದ್ದೇಶಪೂರ್ವಕ ಸುಸ್ತಿದಾರರು ಎಂದರೆ ಸಾಲವನ್ನು ಪಾವತಿಸುವ ಸಾಮರ್ಥ್ಯವನ್ನು ಹೊಂದಿರುವ ಆದರೆ ಉದ್ದೇಶಪೂರ್ವಕವಾಗಿ ಮರುಪಾವತಿ ಮಾಡದೇ ಇರುವವರು., ಆದರೆ ವಂಚನೆ ಎಂದು ಗುರುತಿಸಲಾದ ಸಾಲಗಾರರು, ಬ್ಯಾಂಕುಗಳಿಗೆ ವಂಚನೆ ಎಸಗಿ ಸಾಲಪಡೆದು ಹಣ ಲಪಟಾಯಿಸಿದವರು. ಆಗಾಗ್ಗೆ, ಈ ಚಟುವಟಿಕೆಗಳು ದೊಡ್ಡ ಕಾರ್ಪೊರೇಟ್ ಘಟಕಗಳನ್ನು ಒಳಗೊಂಡಿರುತ್ತವೆ ಮತ್ತು ಅವುಗಳ ಪಟ್ಟಿಯು ಬೆಳೆದಿದೆ. ಉದಾಹರಣೆಗೆ ನೀರವ್ ಮೋದಿ, ವಿಡಿಯೋಕಾನ್, ಸತ್ಯಂ ಕಂಪ್ಯೂಟರ್ಸ್, ಯೆಸ್ ಬ್ಯಾಂಕ್ ಹಗರಣ, ಇತ್ತೀಚೆಗೆ ವರದಿಯಾಗಿರುವ ಭೂಷಣ್ ಸ್ಟೀಲ್ ಇತ್ಯಾದಿ.. ಎಲ್ಲವೂ ವಂಚನೆ ಹಾಗೂ ಅಕ್ರಮ ಹಣ ವರ್ಗಾವಣೆಯ ಪ್ರಕರಣಗಳೇ ಆಗಿವೆ ಎಂದು ಬ್ಯಾಂಕ್ ನೌಕರರ ಸಂಘಟನೆಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

2016ರಲ್ಲೇ ಕೇಂದ್ರ ಸರ್ಕಾರ ಜಾರಿಗೆ ತಂದ ದಿವಾಳಿತನ ಮತ್ತು ದಿವಾಳಿತನ ಕೋಡ್ (IBC) ಪ್ರಕಾರ NCLT ಮೂಲಕ ಈಗಾಗಲೇ ಹಲವಾರು ದೊಡ್ಡ ದೊಡ್ಡ ಕಂಪನಿಗಳ ಬೃಹತ್ ಮೊತ್ತದ ಸುಸ್ತಿಸಾಲಗಳನ್ನು ಅತ್ಯಂತ ಕಡಿಮೆ ಮೊತ್ತ ವಸೂಲಿ ಮಾಡಿ ಇತ್ಯರ್ಥ ಮಾಡಿ, ಬ್ಯಾಂಕುಗಳು ಅಪಾರ ಮೊತ್ತದ ಹಣವನ್ನು ನಷ್ಟ ಮಾಡಿಕೊಂಡಿವೆ. ಈ ಪ್ರಕ್ರಿಯೆಯಲ್ಲಿ ಬಾಕಿ ಸಾಲದ ಮೊತ್ತದಲ್ಲಿ ವಸೂಲಿಯ ಪ್ರಮಾಣ ಹೆಚ್ಚಿನ ಪ್ರಕರಣಗಳಲ್ಲಿ 50% ಕ್ಕಿಂತ ಕಡಿಮೆ. ಕೆಲವು ಪ್ರಕರಣಗಳಲ್ಲಿ ಬಿಟ್ಟುಕೊಟ್ಟ ಮೊತ್ತ ಬರಬೇಕಿರುವ ಬಾಕಿಯ 90% ರಷ್ಟು. ಹೀಗೆ ಬ್ಯಾಂಕುಗಳು ಬಿಟ್ಟುಕೊಟ್ಟ ಮೊತ್ತಕ್ಕೆ "ಕೂದಲು ಕತ್ತರಿಸಿ ಕೊಳ್ಳುವುದು "(Hair cut) ಎಂದು ಹೆಸರಿಸಲಾಗಿದೆ. ಈ ಹಣ ಬ್ಯಾಂಕ್‌ಗಳು ಗಳಿಸಿದ ಲಾಭದಲ್ಲಿ ಸುಸ್ತಿ ಸಾಲಕ್ಕಾಗಿ ಮೀಸಲಿಟ್ಟ ಮೊತ್ತದಿಂದ ಭರಿಸುವುದರಿಂದ, ಇದು ಸಾರ್ವಜನಿಕ ಹಣದ ಕಾನೂನು ಬದ್ಧ ಲೂಟಿಯಾಗಿದೆ.

ಕಾರ್ಪೊರೇಟ್ ಸುಸ್ತಿದಾರರ ಅನುಕೂಲಕ್ಕಾಗಿ?

ಉದ್ದೇಶ ಪೂರ್ವಕ ಸುಸ್ತಿದಾರರು ಮತ್ತು ವಂಚನೆಯ ಸಾಲ ಪ್ರಕರಣಗಳಲ್ಲಿ ಸುಸ್ತಿದಾರರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿ, ಸಾಲ ವಸೂಲಿಗೆ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳುವ ಬದಲು ರಾಜಿ ಸಂಧಾನದ ಮೂಲಕ ಇತ್ಯರ್ಥ ಮಾಡಲು ಮತ್ತು ಈ ರೀತಿ ಸಾಲ ಮುಕ್ತಾಯ ಮಾಡಿ ಕೊಂಡವರಿಗೆ ಒಂದು ವರ್ಷದ ಅವಧಿಯ ನಂತರ ಪುನಃ ಸಾಲ ಸೌಲಭ್ಯಗಳನ್ನು ಪಡೆಯಲು ಅವಕಾಶ ನೀಡಿರುವುದು, ಸಾರ್ವಜನಿಕ ಸಂಪತ್ತಿನ ಲೂಟಿಕೋರರಿಗೆ ಇನ್ನಷ್ಟು ಪ್ರೋತ್ಸಾಹ ಕೊಟ್ಟಂತಾಗಿದೆ.

ಬ್ಯಾಂಕ್ ಎಂಪ್ಲೋಯೀಸ್ ಫೆಡರೇಶನ್ ಆಫ್ ಇಂಡಿಯಾ(ಬಿಇಎಫ್‌ಐ) (ಸೇರಿದಂತೆ ಬ್ಯಾಂಕ್ ಸಂಘಟನೆಗಳ ಐಕ್ಯ ವೇದಿಕೆ (ಯುಎಫ್‌ಬಿಯು), ಅನುತ್ಪಾದಕ ಆಸ್ತಿ (ಎನ್‌ಪಿಎ) ವಸೂಲಿಗೆ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು 'ಉದ್ದೇಶ ಪೂರ್ವಕ ಸುಸ್ತಿದಾರರ' ಪಟ್ಟಿಯನ್ನು ಪ್ರಕಟಿಸುವಂತೆ ಒತ್ತಾಯಿಸಿ ಮುಷ್ಕರಗಳು ಸೇರಿದಂತೆ ಹಲವಾರು ಹೋರಾಟಗಳನ್ನು ನಡೆಸುತ್ತಾ ಬಂದಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಈ ಹೊಸ ಸಾಲ ವಸೂಲಿ ನೀತಿಯ ಪ್ರಕಟಣೆಯ ಹಿಂದೆ ದೊಡ್ಡ ಕಾರ್ಪೊರೇಟ್ ಸುಸ್ತಿದಾರರಿಗೆ ಅನುಕೂಲ ಮಾಡಲು ರಿಸರ್ವ್ ಬ್ಯಾಂಕ್ ಮೇಲೆ ಒತ್ತಡವೇನಾದರೂ ಇರಬಹುದೇ ಎಂಬ ಸಂಶಯ ವ್ಯಕ್ತ ಪಡಿಸುತ್ತ ಈ ಕೂಡಲೇ ಈ ಪ್ರಕಟಣೆ ಹಿಂಪಡೆಯಬೇಕೆಂದು ಬಿ.ಇ.ಎಫ್.ಐ. ಆಗ್ರಹಿಸಿದೆ ಮತ್ತು ಜೂನ್ ತಿಂಗಳ 21 ರಂದು ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿದೆ ಎಂದು ಬಿ.ಇ.ಎಫ್.ಐ.ನ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ನಾಗರಾಜ ಶಾನುಭೋಗ್ ತಿಳಿಸಿದ್ದಾರೆ.

ಇತ್ತೀಚೆಗೆ ಒಡಿಶಾದಲ್ಲಿ ಭೀಕರ ರೈಲು ಅಪಘಾತ ಸಂಭವಿಸಿತು. ಈ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುರಕ್ಷತೆಯ ವಿಷಯದಲ್ಲಿ ಕೇಂದ್ರದ ಮೋದಿ ಸರ್ಕಾರ ಮತ್ತು ರೈಲ್ವೇ ಆಡಳಿತವು ಆದ್ಯತೆಯ ಆಧಾರದ ಮೇಲೆ ತಕ್ಷಣವೇ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತೋರಿದ ಉದಾಸೀನತೆ, ನಿರ್ಲಕ್ಷ್ಯತನದ ಕುರಿತು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ ವಾದಿ)ದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು 05.06.2023 ರಂದು 'ನ್ಯೂಸ್ ಕ್ಲಿಕ್' ಮಾಧ್ಯಮಕ್ಕೆ ನೀಡಿದ ಸಂದರ್ಶನ:

ಸಂದರ್ಶನ: ಪ್ರಜ್ಞಾ ಸಿಂಗ್ (ನ್ಯೂಸ್ ಕ್ಲಿಕ್)

ರೈಲ್ವೆ ಮತ್ತು ರಾಜಕೀಯ

–ಸೀತಾರಾಮ್ ಯೆಚೂರಿ ಸಂದರ್ಶನ

ಪ್ರಶ್ನೆ: ಒಡಿಶಾದ ಬಾಲಸೋರ್‌ನಲ್ಲಿ ಸಂಭವಿಸಿದ ಭೀಕರ ರೈಲು ಅಪಘಾತವು ಹೇಳಲಾಗದ ದುಃಖ ಮತ್ತು ಸಂಕಟವನ್ನು ಉಂಟುಮಾಡಿದೆ. ಈ ಹಿನ್ನೆಲೆಯಲ್ಲಿ ರಾಜ್ಯಸಭಾ ಮಾಜಿ ಸದಸ್ಯರಾಗಿ, ಹತ್ತು ವರ್ಷಕ್ಕೂ ಹೆಚ್ಚು ಕಾಲ ರೈಲ್ವೆ ಸಂಸದೀಯ ಸಮಿತಿಯಲ್ಲಿ ಸಕ್ರಿಯರಾಗಿದ್ದ ತಾವು, ಭಾರತೀಯ ರೈಲ್ವೆಯ ಕಾರ್ಯನಿರ್ವಹಣೆಯಲ್ಲಿ ಸರ್ಕಾರ ತಕ್ಷಣ ಗಮನಹರಿಸಬೇಕಾದ ಸಮಸ್ಯೆ ಯಾವುದು ಎಂಬುದು ನಿಮ್ಮ ಅನಿಸಿಕೆ?

ಯೆಚೂರಿ: ರೈಲ್ವೆಗೆ ಸಂಬಂಧಿಸಿದಂತೆ ಹೇಳುವುದಾದರೆ, ರೈಲು ಪ್ರಯಾಣಿಕರ ಸುರಕ್ಷತೆಯು ಅತ್ಯಂತ ಮಹತ್ವದ್ದಾಗಿದೆ. ಆದಾಗ್ಯೂ, ಕಳೆದ ಹಲವಾರು ವರ್ಷಗಳಿಂದ ಸುರಕ್ಷತೆಗೆ ಸಂಬಂಧಿಸಿದ ಅಂಶಗಳನ್ನು ನಿರ್ಲಕ್ಷಿಸಲಾಗಿದೆ. ರೈಲ್ವೇ ಖಾಸಗೀಕರಣದ ಮಾತುಗಳು ಪ್ರಾರಂಭವಾದ ನಂತರ ಇಂಥ ಅಸಡ್ಡೆ ಚಿಗುರೊಡೆಯತೊಡಗಿತು. ಈ ಮಹಾನ್ ಭಾರತ ದೇಶವನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುವಲ್ಲಿ ರೈಲ್ವೆ ಪ್ರಮುಖ ಪಾತ್ರ ವಹಿಸುತ್ತಿದೆ. ದೇಶದ ಒಂದು ತುದಿಯಿಂದ ಇನ್ನೊಂದು ತುದಿಗೆ ಜನರನ್ನು ಸಂಪರ್ಕಿಸುವಲ್ಲಿ ರೈಲ್ವೆ ಮತ್ತು ಅಂಚೆ ಇಲಾಖೆ ವಹಿಸಿದ ಪಾತ್ರ ಅಪಾರವಾಗಿದೆ. ಆದರೆ ಸರಕಾರ ತನ್ನ ಕಾರ್ಯವೈಖರಿಯಲ್ಲಿನ ನಿರ್ಲಕ್ಷ್ಯದಿಂದ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಒಡಿಶಾ ರೈಲು ದುರಂತದ ಬಗ್ಗೆ ಹೇಳುವುದಾದರೆ, ರೈಲ್ವೆಯಲ್ಲಿ ಗ್ಯಾಂಗ್‌ಮೆನ್ ಕೆಲಸಗಾರರು ಮಾಡುವ ಕೆಲಸವನ್ನು ಉಲ್ಲೇಖಿಸದೆ ಇರುವಂತಿಲ್ಲ. ರೈಲು ಮಾರ್ಗಗಳಲ್ಲಿ ಹಗಲು, ರಾತ್ರಿಯೆನ್ನದೆ ದೂರದ ಪ್ರಯಾಣದ ಪ್ರತಿ ರೈಲು ಹಾದುಹೋದ ನಂತರ, ರೈಲು ಹಳಿಗಳನ್ನು ಪರೀಕ್ಷಿಸಿ, ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸುವ ಗ್ಯಾಂಗ್‌ಮೆನ್‌ಗಳ ಕೆಲಸ ಪ್ರಮುಖವಾಗಿದೆ. ಆದರೆ ದೇಶದ ಎಲ್ಲಾ ವಿಭಾಗಗಳಲ್ಲಿ ಗ್ಯಾಂಗ್‌ಮೆನ್‌ಗಳ ಕೊರತೆಯಿದೆ. ಹೊಸ ನೇಮಕಾತಿಗಳನ್ನು ವೆಚ್ಚದ ಆಧಾರದ ಮೇಲೆ ನಿರಾಕರಿಸಲಾಗುತ್ತದೆ ಮತ್ತು ಕಡಿಮೆ ಸಂಖ್ಯೆಯ ಉದ್ಯೋಗಿಗಳು ದೀರ್ಘ ಗಂಟೆಗಳವರೆಗೆ ಕೆಲಸ ಮಾಡಲು ಒತ್ತಾಯಿಸಲಾಗುತ್ತದೆ. ಇಂತಹ ಪ್ರವೃತ್ತಿಯಿಂದ ರೈಲ್ವೇ ಕ್ಷೇತ್ರದ ಸಂಪೂರ್ಣ ದಕ್ಷತೆಯ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಅರಿತುಕೊಳ್ಳಲು ಸರ್ಕಾರ ನಿರಾಕರಿಸುತ್ತದೆ.



ಭಾರತೀಯ ರೈಲ್ವೆಯ ಪರವಾಗಿ, ರೈಲು ಪ್ರಯಾಣ ಸುರಕ್ಷತೆಗೆ ಸಂಬಂಧಿಸಿದ ಅಂಶಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವ ಮತ್ತು ವರದಿ ಮಾಡುವ ಉದ್ದೇಶದಿಂದ 2017 ರಲ್ಲಿ ದೇಶಾದ್ಯಂತ ವಿಶೇಷ ಕಾರ್ಯಪಡೆ (ಟಾಸ್ಕ್ ಫೋರ್ಸ್) ಅನ್ನು ಸ್ಥಾಪಿಸಲಾಯಿತು. ಅಂದಿನಿಂದ, ಕಾರ್ಯಪಡೆಯು ಸಂಶೋಧನೆಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಸಾರ್ವಜನಿಕವಾಗಿ ಹಂಚಿಕೊಳ್ಳಲಾಗಿದೆ. ಈ ವರದಿಗಳನ್ನು ಓದಿದರೆ, ರೈಲ್ವೆ ಸುರಕ್ಷತಾ ವೈಶಿಷ್ಟ್ಯಗಳಲ್ಲಿ ಸಾಕಷ್ಟು ಲೋಪಗಳಿವೆ ಎಂದು ಕಾರ್ಯಪಡೆಯು ನಿರಂತರವಾಗಿ ಎಚ್ಚರಿಸುತ್ತಲೇ ಬಂದಿದ್ದು, ಮುರಿದ ಸಿಗ್ನಲ್ ಉಪಕರಣಗಳನ್ನು ತಕ್ಷಣವೇ ಬದಲಾಯಿಸದೆ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ ಎಂದು ನಮಗೆ ಅರಿವಾಗುತ್ತದೆ. ರೈಲ್ವೆ ಹಳಿಗಳ ನಿರ್ವಹಣೆಗೆ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ ಎಂದು ವಿಶೇಷ ಕಾರ್ಯಪಡೆ ಗಮನಸೆಳೆದಿದ್ದು, ಇವೆಲ್ಲವನ್ನು ಕೂಡಲೇ ಸರಿಪಡಿಸುವಂತೆ ಆಡಳಿತವನ್ನು ಒತ್ತಾಯಿಸಿದೆ. ಆದರೆ ಕಾರ್ಯಪಡೆಯ ಶಿಫಾರಸುಗಳನ್ನು ಎಂದಿಗೂ ಗಮನಿಸಲಿಲ್ಲ. ಸುರಕ್ಷತೆಯ ನಿರ್ಲಕ್ಷ್ಯವು ಅನೇಕ ಅಪಘಾತಗಳಿಗೆ ಕಾರಣವಾಗಿದೆ. ತಂತ್ರಜ್ಞಾನ ಅಭಿವೃದ್ಧಿ ಮತ್ತು ಆಧುನಿಕ ಉಪಕರಣಗಳ ಪೂರೈಕೆ, ಸಿಗ್ನಲ್ ವ್ಯವಸ್ಥೆಗಳ ಬಲವರ್ಧನೆ ಸೇರಿದಂತೆ ಭದ್ರತೆಗೆ ಸಂಬಂಧಿಸಿದ ವೆಚ್ಚಗಳಿಗೆ ನಿಧಿಯ ಹಂಚಿಕೆಯನ್ನು 2022ರ ಬಜೆಟ್‌ನಲ್ಲಿ 14 ಪ್ರತಿಶತದಷ್ಟು ಕಡಿಮೆ ಮಾಡಿರುವುದನ್ನು ನೋಡಿದಾಗ, ರೈಲು ಪ್ರಯಾಣಿಕರ ಸುರಕ್ಷತೆಯು ಸರ್ಕಾರದ ಆದ್ಯತೆಯ ಪಟ್ಟಿಯಲ್ಲಿಲ್ಲ ಎಂದು ಅರ್ಥಮಾಡಿಕೊಳ್ಳಬಹುದು. ಆದರೆ ರೈಲ್ವೆ ವಲಯದ ಕಾರ್ಯಾಚರಣೆ ವೆಚ್ಚಗಳಿಗೆ ಬಜೆಟ್‌ನಲ್ಲಿ ಸಾಕಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ, ಅಷ್ಟೊಂದು ಹಣ ಎಲ್ಲಿಗೆ ಹೋಗುತ್ತದೆ? ಮಂಜೂರು ಮಾಡಿದ ಹಣವನ್ನು ಹೇಗೆ ಬಳಸಲಾಗುತ್ತದೆ? ಇದನ್ನು ಯಾವುದಕ್ಕೆ ಬಳಸಲಾಗಿದೆ ಎನ್ನುವುದಕ್ಕಿಂತ, ರೈಲ್ವೇಯ ಯಾವ ವಿಭಾಗಗಳಿಗೆ ನಿಜವಾದ ಅವಶ್ಯಕತೆ ಇದೆ ಮತ್ತು ಯಾವುದನ್ನು ಬಳಸುತ್ತಿಲ್ಲ ಎಂದು ಖಚಿತವಾಗಿ ಹೇಳಲು ಸಾಧ್ಯವಿದೆ. ಸುರಕ್ಷತಾ ಸಾಧನಗಳನ್ನು ಹೆಚ್ಚಿಸಲು, ರೈಲುಗಳ ಸಂಖ್ಯೆಗೆ ಅನುಗುಣವಾಗಿ ಎಲ್ಲಾ ಹಂತಗಳಲ್ಲಿ ಹೊಸ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಮತ್ತು ತಂತ್ರಜ್ಞಾನದ ಬಳಕೆಯನ್ನು ವಿಸ್ತರಿಸಲು ಅಸಮರ್ಪಕ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. ಆದರೆ ಸರ್ಕಾರಿ ಕಾರ್ಯಕ್ರಮಗಳು ಮತ್ತು ಜಾಹೀರಾತುಗಳಿಗೆ ಸಾಕಷ್ಟು ಮೊತ್ತವನ್ನು ಖರ್ಚು ಮಾಡಲಾಗುತ್ತದೆ. ಸಣ್ಣ, ಸ್ಥಳೀಯ ಘಟನೆಗಳು ಸಹ ದೊಡ್ಡ ಹಬ್ಬಗಳಾಗಿ ರೂಪಾಂತರಗೊಳ್ಳುತ್ತವೆ. ಭಾರಿ ವೆಚ್ಚದಲ್ಲಿ ಹೊಸ ರೈಲುಗಳನ್ನು ಧ್ವಜಾರೋಹಣ ಮಾಡುವಲ್ಲಿ ತೋರಿದ ಕಾಳಜಿಯು ಕೋಟಿಗಟ್ಟಲೆ ರೈಲು ಪ್ರಯಾಣಿಕರ ಸುರಕ್ಷತೆಗೆ ಪಾವತಿಸುವುದಿಲ್ಲ.

ಪ್ರಶ್ನೆ: ದೇಶದ ಹಲವು ಭಾಗಗಳಲ್ಲಿ ಹೈಸ್ಪೀಡ್ ಎಕ್ಸ್‌ಪ್ರೆಸ್ ರೈಲುಗಳನ್ನು ಪರಿಚಯಿಸಲಾಗಿದೆ. ಇವೆಲ್ಲವೂ ಪ್ರಯಾಣಿಕರ ಹಿತಾಸಕ್ತಿಗಾಗಿಯೇ?

ಯೆಚೂರಿ: ಹೊಸ ರೈಲುಗಳನ್ನು ಈಗಾಗಲೇ ಚಾಲನೆಯಲ್ಲಿರುವ ರೈಲುಗಳ ವೇಗದಿಂದ ಪ್ರಾರಂಭಿಸುವ ಬದಲು ಹೆಚ್ಚುವರಿ ಶುಲ್ಕದೊಂದಿಗೆ ಹೈ ಸ್ಪೀಡ್ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್‌ನಂತೆ ಓಡಿಸಲಾಗುತ್ತದೆ. ಇವುಗಳಲ್ಲದೆ ಬುಲೆಟ್ ರೈಲುಗಳೂ ಚಲಾವಣೆಗೆ ಬಂದಿವೆ. ಆದರೆ ಈ ವೇಗದ ರೈಲುಗಳನ್ನು ತಡೆದುಕೊಳ್ಳುವಷ್ಟು ನಮ್ಮ ರೈಲು ಹಳಿಗಳು ಬಲವಾಗಿವೆಯೇ ಎಂಬುದು ಇಂದಿನ ಮೂಲಭೂತ ಪ್ರಶ್ನೆಯಾಗಿದೆ. ಹಳಿಗಳ ನವೀಕರಣ, ನಿರ್ವಹಣಾ ಕಾರ್ಯದಲ್ಲಿ ಆಧುನಿಕ ವಿಧಾನಗಳ ಅಳವಡಿಕೆ ಇತ್ಯಾದಿ ದಶಕಗಳಿಂದ ನಡೆದಿಲ್ಲ. ಈ ಮೂಲಭೂತ ಅಂಶಕ್ಕೆ ಗಮನ ಕೊಡದೆ ಸಾಕಷ್ಟು ಹೊಸ ಹೈಸ್ಪೀಡ್ ರೈಲುಗಳನ್ನು ಓಡಿಸುವುದರಲ್ಲಿ ಯಾವುದೇ ಅರ್ಥವಿಲ್ಲ.

ಪ್ರಶ್ನೆ: ರೈಲ್ವೆಯಲ್ಲಿ ಸಿಬ್ಬಂದಿ ಕೊರತೆ ಇದೆ ಎಂದು ಪದೇ ಪದೇ ಹೇಳುತ್ತಿದ್ದೀರಿ. ಆದರೆ ಇಂಜಿನಿಯರಿಂಗ್ ವಿಭಾಗದ ಹಲವು ಕೆಲಸಗಳಿಗೆ ಆಧುನಿಕ ಆಟೋಮೇಷನ್ ಅಳವಡಿಸಲಾಗಿದ್ದು, ಹೊಸ ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ಅಗತ್ಯವಿಲ್ಲ ಎಂದು ರೈಲ್ವೆ ಆಡಳಿತ ಮಂಡಳಿ ಹೇಳುತ್ತಿದೆಯೇ?

ಯೆಚೂರಿ: ರೈಲ್ವೆಯಲ್ಲಿ 3,12,000 ಹುದ್ದೆಗಳು ಭರ್ತಿಯಾಗಿಲ್ಲ ಎಂದು ವಿವಿಧ ಮಾಹಿತಿಗಳು ಸ್ಪಷ್ಟವಾಗಿ ತೋರಿಸುತ್ತವೆ. ಇಂಜಿನಿಯರಿಂಗ್ ವಿಭಾಗದ ಕಾರ್ಯಗಳಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಮಾತ್ರ ತಂತ್ರಜ್ಞಾನವನ್ನು ಬಳಸಿಕೊಂಡು ಸ್ವಯಂಚಾಲಿತಗೊಳಿಸಬಹುದು. ಸುಮಾರು 2,90,000 ಹುದ್ದೆಗಳು ಮೂಲಭೂತ ವರ್ಗಗಳಿಗೆ ಸೇರಿವೆ, ಅಲ್ಲಿ ಕಾರ್ಮಿಕರು ನೇರವಾಗಿ ಕೆಲಸ ಮಾಡುತ್ತಾರೆ ಮತ್ತು ಕೈಯಿಂದ ಕೆಲಸ ಮಾಡುವ ಅಗತ್ಯವಿದೆ. ಗ್ಯಾಂಗ್‌ಮೆನ್ ಕೆಲಸಗಾರರು ಮಾಡುವ ಕೆಲಸದ ಮಹತ್ವವನ್ನು ನಾವು ಈಗಾಗಲೇ ನೋಡಿದ್ದೇವೆ. ರೈಲು ಬೋಗಿಯ ಹಳಿಯಲ್ಲಿ ಒಂದೇ ಒಂದು ಬೋಲ್ಟ್ ಕೂಡ ಸರಿಯಾಗಿ ಫಿಕ್ಸ್ ಆಗದೇ ಇದ್ದರೂ ರೈಲು ಹಳಿ ತಪ್ಪುವ ಅಪಾಯವಿದೆ. ಅದೇ ರೀತಿ ಸಿಗ್ನಲ್ ಉಪಕರಣಗಳನ್ನು ಅಳವಡಿಸುವುದು, ಅವುಗಳ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಸರಿಪಡಿಸುವುದು ಸೇರಿದಂತೆ ಹಲವು ಕೆಲಸಗಳಿಗೆ ಸಿಬ್ಬಂದಿ ಕೊರತೆ ಇದೆ. ಸಿಗ್ನಲ್ ವೈಫಲ್ಯದಿಂದ ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ಅಪಘಾತ ಸಂಭವಿಸಿರಬಹುದು ಎಂದು ಪ್ರಾಥಮಿಕ ತನಿಖೆ ಹೇಳಿದೆ. ಸಮಸ್ಯೆಯನ್ನು ನಿವಾರಿಸಿದರೆ, ಖಾಯಂ ಸಿಬ್ಬಂದಿ ಅಗತ್ಯವಿರುವ ಎಲ್ಲಾ ಕೆಲಸಗಳನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸಬಹುದು ಎಂದು ಕೇಂದ್ರ ಸರ್ಕಾರ ಮತ್ತು ರೈಲ್ವೆ ಆಡಳಿತವು ನಿರಂಕುಶವಾಗಿ ನಿರ್ಧರಿಸುತ್ತದೆ. ಇಂತಹ ಪ್ರವೃತ್ತಿಯು ರೈಲ್ವೆಯ ದಕ್ಷತೆಯ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದನ್ನು ಒಪ್ಪಿಕೊಳ್ಳಲು ಸರ್ಕಾರ ಮತ್ತು ಆಡಳಿತವು ನಿರಾಕರಿಸುತ್ತದೆ.

ರೈಲು ಬೋಗಿಗಳಲ್ಲಿ ಜನದಟ್ಟಣೆ ಮತ್ತೊಂದು ಪ್ರಮುಖ ಸಮಸ್ಯೆಯಾಗಿದೆ. ಕೋರಮಂಡಲ್ ಎಕ್ಸ್‌ಪ್ರೆಸ್‌ನಲ್ಲಿಯೂ ಸಹ, ಅಪಘಾತದ ಕೆಲವು ನಿಮಿಷಗಳ ಮೊದಲು, ರಿಸರ್ವೇಶನ್ ಬೋಗಿಗಳಿಂದ ಕೇಂದ್ರ ರೈಲ್ವೆ ಸಚಿವರು, ಜನರಲ್

ಪುಟ 14 ಕ್ಕೆ

ರೈಲ್ವೆ ಮತ್ತು ಅಂಚೆ ಸೇವೆಗಳು ಈ ವಿಶಾಲ ದೇಶದ ಸಂಪರ್ಕ ಸೇತುವೆಗಳಾಗಿವೆ. ಆದರೆ ಸರ್ಕಾರದ ಖಾಸಗೀಕರಣ ನೀತಿಯಿಂದ ಇವೆರಡೂ ಸಂಕಷ್ಟಕ್ಕೆ ಸಿಲುಕಿವೆ. ಕೇವಲ ಐದು ರೂಪಾಯಿಗಳಿಗೆ ಭಾರತದಲ್ಲಿ ಎಲ್ಲಿಂದಲಾದರೂ ಅಂಚೆ ಕಳುಹಿಸುವ ಮೂಲಕ ಜನರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಆದರೆ ಇಂದು ಖಾಸಗಿ ಕೊರಿಯರ್ ಸೇವಾ ಸಂಸ್ಥೆಗಳು ಅಂಚೆ ಸೇವೆಯನ್ನು ದುರ್ಬಲಗೊಳಿಸಿವೆ. ರೈಲ್ವೆಯ ಎಲ್ಲಾ ಕಾಮಗಾರಿಗಳು ಮತ್ತು ಸೇವೆಗಳನ್ನು ಖಾಸಗಿ ಗುತ್ತಿಗೆದಾರರ ಕೈಗೆ ತಂದು ಪ್ರಶ್ನಾತೀತ ಮಟ್ಟಕ್ಕೆ ತರಲಾಗಿದೆ. ಇವೆಲ್ಲವುಗಳ ಬಗ್ಗೆ ಜನರಲ್ಲಿ ಸುದೀರ್ಘ ಚರ್ಚೆ ನಡೆಯಬೇಕು.



ಭಾರತೀಯ ರೈಲ್ವೇಯ ವಿಶಿಷ್ಟತೆಯೆಂದರೆ ಅದು ಕಡು ಬಡವರಿಂದ ಹಿಡಿದು ಸಮಾಜದ ಉನ್ನತ ಶ್ರೇಣಿಯಲ್ಲಿರುವ ಶ್ರೀಮಂತರವರೆಗೆ ಎಲ್ಲರಿಗೂ ಸೇವೆ ಸಲ್ಲಿಸಲು ತನ್ನ ಬಾಗಿಲು ತೆರೆದಿದೆ. ಎಲ್ಲರೂ ಒಂದೇ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾರೆ ಎಂಬ ಅರ್ಥದಲ್ಲಿ ಸಮಾನತೆಯ ಅಂಶವಿದೆ ಎಂದು ಕೂಡ ಹೇಳಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ರೈಲ್ವೆ ಆಡಳಿತದ ಗಮನ ಮತ್ತು ದೃಷ್ಟಿಕೋನವು ಶ್ರೀಮಂತ ಮೇಲ್ವರ್ಗದ ಕಡೆಗಿದೆ. ಬಡವರು ಮತ್ತು ಸಾಮಾನ್ಯ ಜನರನ್ನು ರೈಲು ಪ್ರಯಾಣದಿಂದ ದೂರವಿಡುತ್ತಿದೆ.



ಕೊವಿನ್ ದತ್ತಾಂಶ ಸೋರಿಕೆ: ಸರಕಾರದ ಉತ್ತರಗಳೇ ಪ್ರಶ್ನೆಗಳಾಗಿ ಕಾಡುತ್ತಿವೆ

ಇದು ಅಮೃತ ಕಾಲ!

ಕೊವಿನ್ ದತ್ತಾಂಶ ಸೋರಿಕೆಯು ಸುದ್ದಿ ಬಂದಿದೆ. ಈ ಹಿಂದೆಯೂ 2021ರಲ್ಲಿ ಬಂದಿತ್ತು. ಆದರೆ ಈ ಬಾರಿ ಅದು ಬೃಹತ್ ಪ್ರಮಾಣದಲ್ಲಿ ಮೇಲೆದ್ದು ಬಂದಿದೆ. ಕೊವಿನ್ ಲಸಿಕೆ ಪಡೆದ ವಿವರಗಳಲ್ಲದೆ, ಲಿಂಗ, ಜನನ ದಿನಾಂಕ, ವಿಳಾಸ, ಆಧಾರ್ ನಂಬರ್, ಮೊಬೈಲ್ ನಂಬರ್ ಇತ್ಯಾದಿ ವಿವರಗಳು ಬಯಲಾಗಿವೆ. ಹಲವು ಪ್ರತಿಷ್ಠಿತ ವ್ಯಕ್ತಿಗಳ ಇಂತಹ ಮಾಹಿತಿಗಳು ಬಯಲಾಗಿರುವ ಉದಾಹರಣೆಗಳು ಮಾಧ್ಯಮಗಳಲ್ಲಿ ಕಂಡು ಬಂದಿವೆ.

2011ರಲ್ಲಿ ದತ್ತಾಂಶ ಸೋರಿಕೆಯ ಸುದ್ದಿ ಬಂದಾಗ ಕೇಂದ್ರ ಆರೋಗ್ಯ ಮಂತ್ರಾಲಯ ಅದನ್ನು ನಿರಾಕರಿಸಿತ್ತು. ಈ ಬಾರಿಯೂ ಅದನ್ನು ನಿರಾಕರಿಸಿದೆ, ಈ ಸುದ್ದಿ ಕಿಡಿಗೇಡಿತನದ ಸ್ವರೂಪದ್ದಾಗಿದ್ದು, ಅದಕ್ಕೆ ಯಾವುದೇ ಆಧಾರವಿಲ್ಲ ಎಂದಿದೆ. ಕುತೂಹಲಕಾರೀ ಸಂಗತಿಯೆಂದರೆ ಕೊವಿನ್ ದತ್ತಾಂಶ ಸಂಪೂರ್ಣವಾಗಿ ಸುಭದ್ರವಾಗಿದೆ ಎಂದು ಈ ಹಿಂದೆ ಖಡಾಖಂಡಿತವಾಗಿ ಹೇಳಿದ್ದ ಕೊವಿನ್ ಸಮಿತಿಯ ಅಧ್ಯಕ್ಷ ರಾಂಸೇವಕ್ ಶರ್ಮರವರ ದತ್ತಾಂಶಗಳೂ ಈ ಬಾರಿಯ ಸೋರಿಕೆಯಲ್ಲಿ ಬಯಲಾಗಿವೆ!

ಇನ್ನೊಂದೆಡೆಯಲ್ಲಿ ಮಾಹಿತಿ ತಂತ್ರಜ್ಞಾನ(ಐಟಿ) ಮಂತ್ರಾಲಯದ ಪ್ರತಿಕ್ರಿಯೆ ಮಾತ್ರ ಸಂಪೂರ್ಣ ಭಿನ್ನವಾಗಿದೆ. ಸೋರಿಕೆಯಾಗಿರುವುದು ನೇರವಾಗಿ ಕೊವಿನ್ ಜಾಲತಾಣದಿಂದಲ್ಲ ಎಂದು ಆ ಇಲಾಖೆಯ ಮಂತ್ರಿಗಳು ಹೇಳಿದ್ದಾರೆ. ಅಲ್ಲದೆ, ಈ ಮೊದಲೇ ಕದ್ದಿದ್ದ ದತ್ತಾಂಶಗಳಿಂದ ಸೋರಿಕೆಯಾಗಿದೆ ಎಂದು ಅದು ಹೇಳಿದೆ. ಇದು ಮತ್ತೆ ಹಲವು ಪ್ರಶ್ನೆಗಳನ್ನಬ್ಬಿಸಿದೆ. ಅಲ್ಲದೆ ಕೊವಿನ್ ಲಸಿಕೆ ಪಡೆದವರು ಮತ್ತು ನೀಡಿದವರಲ್ಲದೆ, ಮೂರನೇಯವರು ಎಪಿಐ ಮೂಲಕ ದತ್ತಾಂಶಗಳನ್ನು ಪಡೆಯಬಹುದು, ಅದಕ್ಕೆ ಒಟಿಪಿ ಮುಂತಾದ ಕಟ್ಟುಪಾಡುಗಳಿವೆ ಎಂದು ಅದು ಹೇಳಿದೆ.



ಯೋಗ ದಿನದಂದು, ಐಟಿ ಮಂತ್ರಿಗಳು ಒಂದೇ ಉಸಿರಿನಲ್ಲಿ ದತ್ತಾಂಶ ಖಾಸಗಿತ್ವ, ಮುಕ್ತ ಟ್ವೀಟ್, ವಾಕ್‌ಸ್ವಾತಂತ್ರ್ಯ ಮುಂತಾದವುಗಳನ್ನು ಒಂದೇ ಉಸಿರಿನಲ್ಲಿ ಸಮರ್ಥಿಸಿಕೊಳ್ಳುತ್ತಾರೆ..

ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಕೊವಿನ್ ದತ್ತಾಂಶದಿಂದ ಸೋರಿಕೆಯಾಗಿಲ್ಲ, ಬದಲಿಗೆ ಒಂದು ಟೆಲಿಗ್ರಾಂ ತಂತ್ರಾಂಶದಲ್ಲಿ ಫೋನ್ ನಂಬರ್ ಹಾಕಿದಾಗ ಅದು ಕೊವಿನ್ ದತ್ತಾಂಶಗಳನ್ನು ಹೊರಹಾಕುತ್ತಿತ್ತು ಎಂಬ ಐಟಿ ಮಂತ್ರಿಗಳ ಈ ಹೇಳಿಕೆಯೇ ಈಗ ಹಲವಾರು ಪ್ರಶ್ನೆಗಳನ್ನು ಎಬ್ಬಿಸಿದೆ.

* ಅಂದರೆ ಕೊವಿನ್ ದತ್ತಾಂಶ ಸೋರಿಕೆಯಾಗಿರುವುದು ನಿಜವೇ?
* ಈ ಹಿಂದೆ ಕದ್ದ ದತ್ತಾಂಶಗಳು ಎಂದರೆ, ಕೊವಿನ್ ದತ್ತಾಂಶ ಭಂಡಾರವನ್ನು ಈ ಹಿಂದೆ ಬೇಧಿಸಲಾಗಿದ್ದು, ಅದು ಈಗ ಈ ಟೆಲಿಗ್ರಾಂ ತಂತ್ರಾಂಶದಿಂದ ಹೊರಬರುತ್ತಿದೆಯೇ?
* ಈ ಹಿಂದೆ ಈ ರೀತಿ ಭೇದನೆಯಾಗಿರುವುದು ಸರಕಾರದ ಅರಿವಿಗೆ ಬಂದಿತ್ತೇ?
* ಬಂದಿದ್ದರೆ ಯಾವಾಗ ಬಂದಿತ್ತು, ಸರಕಾರ ಕೈಗೊಂಡ ಕ್ರಮಗಳೇನು?
* ಇದರ ತನಿಖೆ ಮಾಡಲು CERT-In ನ್ನು ಯಾವಾಗ ಹೇಳಲಾಯಿತು?
* ಕೊವಿನ್ ಆಪ್ 'ಬಿಳಿ–ಪಟ್ಟಿ'ಯಲ್ಲಿರುವ ವಿಶ್ವಾಸಾರ್ಹ ಎಪಿಐ ನ ಮೂಲಕ ಬಂದ ಕೋರಿಕೆಗಳಿಗೆ ಅವಕಾಶ ನೀಡಲಾಗಿದೆ ಎನ್ನುವುದಾದರೆ, ಈ 'ಬಿ–ಪಟ್ಟಿ'ಯಲ್ಲಿ ಎಷ್ಟು ವಿಶ್ವಾಸಾರ್ಹ ಎಪಿಐ ಗಳಿವೆ, ಅವುಗಳಿಗೆ ದತ್ತಾಂಶ ಪಡೆಯಲು ಅವಕಾಶ ಕೊಡುವ ಮೊದಲು ಕಟ್ಟುನಿಟ್ಟಾದ ಪರೀಕ್ಷಣೆ ನಡೆಸಲಾಗುತ್ತಿತ್ತೇ?

ಕೊವಿಡ್–19 ಲಸಿಕೆ ಪಡೆಯಲು ವೆಬ್‌ತಾಣದಲ್ಲಿ ಅಥವ ಕೊವಿನ್ ಆಪ್ ಮೂಲಕ ನೋಂದಾಯಿಸಿಕೊಳ್ಳಬೇಕಿತ್ತು. 100 ಕೋಟಿಗೂ ಹೆಚ್ಚು ಜನರು ಈ ರೀತಿ ನೋಂದಾಯಿಸಿಕೊಂಡಿದ್ದಾರೆ, ಇದರಲ್ಲಿ 45 ವರ್ಷ ಮೀರಿದವರು ಸುಮಾರು 37 ಕೋಟಿ, 12–14 ವಯೋಗುಂಪಿನ ಮಕ್ಕಳು ಸುಮಾರು 4 ಕೋಟಿ ಎಂದು ಹೇಳಲಾಗಿದೆ.

ಐಟಿ ಮಂತ್ರಾಲಯದ ತರ್ಕವನ್ನು ನೋಡಿದರೆ, ಈ ಸೋರಿಕೆ ಸರಕಾರದ ಗಮನಕ್ಕೆ ಬಂದಂತಿಲ್ಲ. ಅಂದರೆ ಸೈಬರ್ ಭದ್ರತೆಯ ಒಟ್ಟು ವ್ಯವಸ್ಥೆಯಲ್ಲಿ ಗಂಭೀರ ಲೋಪಗಳಿವೆ ಎಂಬುದನ್ನು ಇದು ತೋರಿಸುತ್ತದೆ ಎಂದು ಪರಿಣಿತರು ಅಭಿಪ್ರಾಯ ಪಡುತ್ತಿದ್ದಾರೆ.



"ಹೊಸದಾಗಿಯೇನೂ ಭೇದಿಸಿಲ್ಲ. ಈ ಮೊದಲು ಕದ್ದಿದ್ದ ದತ್ತಾಂಶವಷ್ಟೇ ಸೋರಿಕೆಯಾಗಿದೆ. ನಾವೀಗಾಗಲೇ ಇಂತಹ ಭೇದನೆಗಳನ್ನು ಯಶಸ್ವಿಯಾಗಿ ನಿರಾಕರಿಸಿದ್ದೇವೆ."


ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

ಈ ಸಂದೇಹವನ್ನು ಮುಕ್ತ ತಂತ್ರಾಂಶ ಆಂದೋಲನ(ಎಫ್‌ಎಸ್‌ಎಂ), ಮತ್ತು ಇತರ ಡಿಜಿಟಲ್ ಹಕ್ಕುಗಳ ಸಂಘಟನೆಗಳು ಬಹಳ ಹಿಂದಿನಿಂದಲೇ ಎತ್ತುತ್ತ ಬಂದಿವೆ, ಭದ್ರತೆಯ ಪ್ರಶ್ನೆಯನ್ನು ಸೂಕ್ತವಾಗಿ ನಿಭಾಯಿಸದಿದ್ದರೆ ಸರಕಾರ ಡಂಗುರ ಸಾರುವಂತೆ ಭಾರತ ಒಂದು ದತ್ತಾಂಶ ಸೂಪರ್ ಪವರ್ ಆಗಲು ಸಾಧ್ಯವಿಲ್ಲ ಎಂಬುದನ್ನೂ ಎಚ್ಚರಿಸುತ್ತ ಬಂದಿವೆ ಎಂಬುದನ್ನು ಇಲ್ಲಿ ಗಮನಿಸಬಹುದು.

"ಸೆಂಗೋಲ್ ಹೆಸರಲ್ಲಿ 25 ಸೀಟುಗಳನ್ನು ಕೊಡೀರಪ್ಪಾ...!"

ಜೂನ್ 11 ರಂದು ತಮಿಳುನಾಡಿನ ವೆಲ್ಲೂರು ನಗರದಲ್ಲಿ ಬಿಜೆಪಿ ನಡೆಸಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಕೇಂದ್ರ ಗೃಹ ಸಚಿವರು 2024ರಲ್ಲಿ ಮತ್ತೊಮ್ಮೆ 300 ಸ್ಥಾನಗಳೊಂದಿಗೆ ನರೇಂದ್ರ ಮೋದಿ ಸರ್ಕಾರ ರಚನೆಯಾಗಲಿದೆ, ತಮಿಳುನಾಡಿನ ಸೆಂಗೋಲ್ ಅನ್ನು ಸ್ಥಾಪಿಸಿದ್ದಕ್ಕಾಗಿ ಮೋದಿಯವರಿಗೆ ಕೃತಜ್ಞತೆ ಸಲ್ಲಿಸಲು ನೀವು 25 ಸಂಸದರನ್ನು ಸಂಸತ್ತಿಗೆ ಆಯ್ಕೆ ಮಾಡಬೇಕೆಂದು ವಿನಂತಿಸಲು ನಾನು ಇಲ್ಲಿಗೆ ಬಂದಿದ್ದೇನೆ ಎಂದು ಅವರು ಸಭೆಯಲ್ಲಿ ಹಿಂದಿಯಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ತಮಿಳುನಾಡಿನ ಒಂದು ಶೈವ ಮಠದವರು 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯದ ಘೋಷಣೆಯಾದಾಗ, ಆಗ ಸ್ವತಂತ್ರ ದೇಶದ ಮೊದಲ ಪ್ರಧಾನಿಯಾಗಲಿದ್ದ ನೆಹರೂರವರಿಗೆ ಕೊಡುಗೆಯಾಗಿ ಕೊಟ್ಟಿದ್ದರೆನ್ನಲಾದ ಚೋಳ ರಾಜವಂಶದ ರಾಜದಂಡವನ್ನು ಹೋಲುವ ಸೆಂಗೋಲ್ ಬಗ್ಗೆ ಆಳುವ ಪಕ್ಷ ಮಾಡಿದ ಪ್ರಚಾರ ಕಾರ್ಯದಲ್ಲಿ ಮತ್ತು ಮೇ 28 ರಂದು ಪ್ರಸಕ್ತ ಪ್ರಧಾನಿಗಳು ಹೊಸ ಸಂಸತ್ತಿನ ಕಟ್ಟಡದಲ್ಲಿ ಅದನ್ನು ಪ್ರತಿಷ್ಠಾಪಿಸುವಾಗ ಹೇಳಿದ ಮಾತುಗಳಲ್ಲಿ ಅರೆಸತ್ಯಗಳೇ ತುಂಬಿದ್ದವು ಎಂದು ಈಗ ಸ್ಪಷ್ಟವಾದ ನಂತರವೂ ಗೃಹಮಂತ್ರಿಗಳ ಈ ಹೇಳಿಕೆ ಈ ಸೆಂಗೋಲ್ ಪ್ರಚಾರದ ನಿಜ ಉದ್ದೇಶವೇನು ಎಂಬುದನ್ನು ಬಯಲಿಗೆಳೆದಿದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.



ಸಾಮ, ದಾನ, ಭೇದ, ದಂಡ.. .. ..

"ತಮಿಳು ಪ್ರಧಾನಿ.." **ಇ.ಡಿ.–ಸಿಬಿಐ–ಐಟಿ**

'ಸೆಂಗೋಲ್ ಹೆಸರಲ್ಲಿ 25 ಸೀಟು .....' **'25 ಸೀಟು ಬೇಕು!'**

ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಸೌತ್ ಫಸ್ಟ್

ಮುಂದಿನ ದಿನಗಳಲ್ಲಿ ತಮಿಳು ವ್ಯಕ್ತಿಯನ್ನು ಪ್ರಧಾನಿಯನ್ನಾಗಿ ಮಾಡಬೇಕೆಂದು ಚೆನ್ನೈನಲ್ಲಿ ನಡೆದ ಬಿಜೆಪಿ ಕಾರ್ಯಕಾರಿ ಸಭೆಯಲ್ಲಿ ಶಾ ಪ್ರಸ್ತಾಪಿಸಿದ್ದಾರೆ ಎಂದು ಕೂಡ ಪಿಟಿಐ ವರದಿ ಮಾಡಿದೆ. ಆದರೆ ಅದು 2024ರಲ್ಲಂತೂ ಅಲ್ಲ ಎಂಬುದು ಸ್ಪಷ್ಟ.

ತಮಿಳುನಾಡಿನ ಮತದಾರರು 2019ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಯ ಕೇವಲ ಒಬ್ಬ ಸಂಸದನನ್ನು ಆರಿಸಿ ಕಳಿಸಿದರು. ಅವರು ಕೂಡ ಬಿಜೆಪಿಯವರಲ್ಲ, ಎಐಎಡಿಎಂಕೆ ಯವರು. ಆ ಪಕ್ಷದ ಮುಖಂಡರು ಷಾ ಅವರ ಕರೆಯ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದಾರೆ.

2024ರ ಲೋಕಸಭಾ ಚುನಾವಣೆಯಲ್ಲಿ ತನ್ನ ಮೈತ್ರಿಕೂಟದಲ್ಲಿ ಸೇರ್ಪಡೆಗೊಳ್ಳುವ ಪಕ್ಷಗಳನ್ನು ಎಐಎಡಿಎಂಕೆ ನಿರ್ಧರಿಸಲಿದೆ ಎಂದ ಆ ಪಕ್ಷದ ಹಿರಿಯ ನಾಯಕರೊಬ್ಬರು, ವಾಸ್ತವವಾಗಿ ಬಿಜೆಪಿ ತಮ್ಮ ನೇತೃತ್ವದ ಮೈತ್ರಿಕೂಟಕ್ಕೆ ಒಂದು ಹೊರೆಯೇ, ಏಕೆಂದರೆ ಅದರ ಅತಿ–ರಾಷ್ಟ್ರವಾದ ಮತ್ತು ಒಕ್ಕೂಟತತ್ವ–ವಿರೋಧಿ ಚಾರಿತ್ರ್ಯ ರಾಜ್ಯದ ಜನತೆಗೆ ಸರಿಬರುವುದಿಲ್ಲ ಎಂದಿರುವುದಾಗಿಯೂ ವರದಿಯಾಗಿದೆ.

ಅಲ್ಲದೆ ಸೆಂಗೋಲ್ ಬ್ರಾಹ್ಮಣವಾದಿಯಾಗಿದ್ದ ಚೋಳ ರಾಜ್ಯಭಾರದ ಪ್ರತೀಕ, ಅಲ್ಲಿಂದ ತಮಿಳುನಾಡಿನ ಸಾಮಾಜಿಕ ಆಂದೋಲನ ಬಹಳ ದೂರ ಸಾಗಿ ಬಂದಿದೆ, ಹೀಗಿರುವಾಗ ಸೆಂಗೋಲ್ ಪ್ರತಿಷ್ಠಾಪಿಸಿದ್ದಕ್ಕಾಗಿ ರಾಜ್ಯದ ಮತದಾರರು ಬಿಜೆಪಿ ಸಂಸದರನ್ನು ಆರಿಸಬೇಕು ಎಂದು ಕೇಳುವುದು ರಾಜ್ಯದ ಚರಿತ್ರೆಯ ಬಗ್ಗೆ ಅರಿವಿನ ಅಭಾವವನ್ನು ತೋರಿಸುತ್ತದೆ ಎಂದು ರಾಜಕೀಯ ವಿಶ್ಲೇಷಕರು ಸೂಚಿಸುತ್ತಾರೆ.

ಈ ನಡುವೆ ಇದೇ ಕೇಂದ್ರ ಗೃಹಮಂತ್ರಿಗಳ ಅಡಿಯಲ್ಲಿರುವ ಇ.ಡಿ. ತಮಿಳುನಾಡಿನ ಮಂತ್ರಿಯೊಬ್ಬರ ವಿರುದ್ಧ ಕಾರ್ಯಾಚರಣೆ ನಡೆಸಿರುವ ಬಗ್ಗೆ, ಮತ್ತು ಅಲ್ಲಿಯ ರಾಜ್ಯಪಾಲರು ಅವರನ್ನು ವಜಾ ಮಾಡಬೇಕೆಂದು ಸಂಸದೀಯ ನಡವಳಿಕೆಗೆ ವಿರುದ್ಧವಾಗಿ ಮುಂದಾಗಿರುವುದಕ್ಕೆ ಆ ರಾಜ್ಯದಲ್ಲಿ ಮತ್ತು ದೇಶದಲ್ಲಿಯೂ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ನಿಲ್ಲದ ಮಣಿಪುರ ಹಿಂಸಾಚಾರ


ಬಹುಸಂಖ್ಯಾಕವಾದ – ಧ್ರುವೀಕರಣದ ರಾಜಕೀಯದ ದುಷ್ಫಲ?

ಜೂನ್ 16ರಂದು ಮಣಿಪುರದ ರಾಜಧಾನಿ ಇಂಫಾಲಿನಲ್ಲಿ ಕೇಂದ್ರ ಮಂತ್ರಿಗಳ ಮನೆಗೆ ಬೆಂಕಿ ಹಚ್ಚಿರುವ ಸುದ್ದಿ ಬಂದಿದೆ. ಅದರ ಹಿಂದಿನ ದಿನವೇ ರಾಜ್ಯದ ಮಂತ್ರಿಗಳ ನಿವಾಸಕ್ಕೆ ಬೆಂಕಿ ಹಚ್ಚಲಾಗಿತ್ತು.

ಕಳೆದ ಒಂದೂವರೆ ತಿಂಗಳಲ್ಲಿ ಇದುವರೆಗೆ ಗಲಭೆಗಳಲ್ಲಿ 130ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ, 800ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. 5000 ಮನೆಗಳನ್ನು ಸುಟ್ಟು ಹಾಕಲಾಗಿದೆ. ಇದರಲ್ಲಿ ಶಾಸಕರ ಮನೆಗಳೂ ಇದ್ದವು. ಈಗ ರಾಜ್ಯ ಮತ್ತು ಕೇಂದ್ರ ಮಂತ್ರಿಗಳ ಮನೆಗಳೂ ಆ ಪಟ್ಟಿಗೆ ಸೇರಿವೆ. 200 ಹಳ್ಳಿಗಳು ಧ್ವಂಸಗೊಂಡಿವೆ. 60000ಕ್ಕೂ ಹೆಚ್ಚು ಮಂದಿ ಮನೆಮಾರು ಕಳಕೊಂಡಿದ್ದಾರೆ. 10000 ಮಂದಿ ಬೇರೆ ರಾಜ್ಯಗಳಿಗೆ ಓಡಿ ಹೋಗಿದ್ದಾರೆ.

35000 ಸೇನಾ ಮತ್ತು ಅರೆ ಸೇನಾ ಸಿಬ್ಬಂದಿಯನ್ನು

–ಪುಟ 14 ನೋಡಿ







2022–23ರ ಜಿಡಿಪಿ ಅಂದಾಜು ಮತ್ತು ಸರಕಾರದ ಪ್ರಚಾರದ ಸುರಿಮಳೆ

ಇತ್ತೀಚಿನ ಜಿಡಿಪಿ ಬೆಳವಣಿಗೆಯ ಅಂಕಿಅಂಶಗಳ ಆಧಾರದ ಮೇಲೆ ಪ್ರಚಾರದ ಒಂದು ಸುರಿಮಳೆಯೇ ನಡೆಯುತ್ತಿದೆ. ಭಾರತದ ಅರ್ಥವ್ಯವಸ್ಥೆಯು ಈಗ ವಿಶ್ವದಲ್ಲೇ ಅತಿ ಹೆಚ್ಚು ವೇಗವಾಗಿ ಬೆಳೆಯುತ್ತಿದೆ, ಮತ್ತು ಈ ಸಂಗತಿಯೇ ತಾನು ಅರ್ಥವ್ಯವಸ್ಥೆಯನ್ನು ಚಾಣಾಕ್ಷವಾಗಿ ನಿರ್ವಹಿಸಿರುವುದಕ್ಕೆ ಒಂದು ಸಾಕ್ಷಿ ಎಂದು ಮೋದಿ ಸರಕಾರ ಹೇಳಿಕೊಳ್ಳುತ್ತಿದೆ. ಆದರೆ ಜಿಡಿಪಿಯು ಹೆಚ್ಚುತ್ತಿರುವ ಈ ಅವಧಿಯಲ್ಲಿ ನಿರುದ್ಯೋಗ ದರವೂ ಏರಿದೆ. ಏಕೆ? ಅಲ್ಲದೆ ದುಡಿಯುವ ಜನರ ಬಳಕೆಯು ತಗ್ಗಿದೆ ಎಂಬುದು ಇದೇ ಜಿಡಿಪಿ ಅಂಕಿಅಂಶಗಳು ಬಹಿರಂಗಪಡಿಸಿರುವ ಅತ್ಯಂತ ಆತಂಕಕಾರಿ ಸಂಗತಿ. ಭಾರತವು ವಿಶ್ವದ "ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆ" ಎಂದು ಎಷ್ಟೇ ಜೋರಾಗಿ ಡಂಗುರ ಹೊಡೆದರೂ ಈ ವಾಸ್ತವವನ್ನು ಬಹುಶಃ ಮರೆಮಾಚುವುದು ಸಾಧ್ಯವಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

2022–23ರ ನಾಲ್ಕನೇ ತ್ರೈಮಾಸಿಕದ ಜಿಡಿಪಿಯ ಅಂದಾಜುಗಳನ್ನು ಮೇ 31ರಂದು ಪ್ರಕಟಿಸಲಾಗಿದೆ. ಇದರಲ್ಲಿ ಹಿಂದಿನ ವರ್ಷದ ನಾಲ್ಕನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ. 6.1ರಷ್ಟು ಬೆಳವಣಿಗೆ ಕಂಡುಬರುತ್ತದೆ. ಮೂರನೆಯ ತ್ರೈಮಾಸಿಕದಲ್ಲಿ (ಅಕ್ಟೋಬರ್–ಡಿಸೆಂಬರ್ 2022) ಅದರ ಹಿಂದಿನ ವರ್ಷದ ಮೂರನೆಯ ತ್ರೈಮಾಸಿಕದೊಂದಿಗೆ ಹೋಲಿಸಿದಾಗ ಬೆಳವಣಿಗೆಯು ಶೇ. 4.4ರಷ್ಟು ಇತ್ತು. ಒಟ್ಟಾರೆಯಾಗಿ 2022–23ನೇ ವರ್ಷದಲ್ಲಿ ಜಿಡಿಪಿಯು, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಶೇ. 7.2ರಷ್ಟು ವೃದ್ಧಿಸಿದೆ. ಈ ಬೆಳವಣಿಗೆಯು ಐಎಂಎಫ್ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಈ ಹಿಂದೆ ನಿರೀಕ್ಷಿಸಿದ ಶೇಕಡಾ 6.8ಕ್ಕಿಂತಲೂ ಉತ್ತಮವಾಗಿದೆ.


ಜಿಡಿಪಿಯ ಈ ಅಂಕಿ–ಸಂಖ್ಯೆಗಳು ಈ ಹಿಂದೆ ನಿರೀಕ್ಷಿಸಿದ್ದಕ್ಕಿಂತಲೂ ಉತ್ತಮವಾಗಿದೆ ಎಂಬ ಅಂಶವು ಭಾರತದ ಅರ್ಥವ್ಯವಸ್ಥೆಯ ಪ್ರಸ್ತುತ ಪರಿಸ್ಥಿತಿಯ ಮೌಲ್ಯಮಾಪನದ ಮೇಲೆ ಸ್ವಲ್ಪವೂ ಪ್ರಭಾವ ಬೀರುವುದಿಲ್ಲ (ಜನಶಕ್ತಿ, ಸಂಚಿಕೆ 18, ಮೇ 1–7, 2023 – ಪಿಡಿ ಏಪ್ರಿಲ್ 23, 2023 – ನೋಡಿ). 2020–21ರ ಲಾಕ್‌ಡೌನ್ ಪರಿಣಾಮವಾಗಿ ಉಂಟಾದ ತೀವ್ರ ಕುಸಿತವನ್ನು ನಿರ್ಲಕ್ಷಿಸಿದರೂ, 2019–20ರಿಂದ 2022–23ರವರೆಗಿನ ಮೂರು ವರ್ಷಗಳ ಜಿಡಿಪಿಯ ಒಟ್ಟುಗೂಡಿದ ವಾರ್ಷಿಕ ಪಾಯಿಂಟ್–ಟು–ಪಾಯಿಂಟ್ ಬೆಳವಣಿಗೆಯ ದರವು ಕೇವಲ ಶೇ. 2.85 (ಈ ದರವನ್ನು ನಾಲ್ಕನೇ ತ್ರೈಮಾಸಿಕದ ನಿರೀಕ್ಷಿತ ಬೆಳವಣಿಗೆ ದರದ ಆಧಾರದ ಮೇಲೆ ಶೇ. 2.7 ಎಂದು ಅಂದಾಜು ಮಾಡಲಾಗಿತ್ತು). ಬಹುತೇಕ ವೀಕ್ಷಕರ ಪ್ರಕಾರ, ಒಟ್ಟು ಬೇಡಿಕೆಯ ವಿವಿಧ ಅಂಶಗಳ ಬೆಳವಣಿಗೆಯ ನಿಧಾನಗತಿಯಿಂದಾಗಿ 2022–23ರ ಜಿಡಿಪಿಯ ಬೆಳವಣಿಗೆಯ ದರವನ್ನು 2023–24ರಲ್ಲಿ ಉಳಿಸಿಕೊಳ್ಳುವುದು ಸಾಧ್ಯವಾಗದು. ಹೀಗಾಗಿ ಭಾರತದ ಅರ್ಥವ್ಯವಸ್ಥೆಯು ನಿಂತಲ್ಲೇ ನಿಂತಿದೆ ಎಂಬುದು ಸ್ಪಷ್ಟವಾಗಿದೆ.

ಆದಾಗ್ಯೂ, ಸರ್ಕಾರವು ತನ್ನ ಸ್ವಭಾವಕ್ಕೆ ಅನುಗುಣವಾಗಿ, ಇತ್ತೀಚಿನ ಜಿಡಿಪಿ ಬೆಳವಣಿಗೆಯ ಅಂಕಿಅಂಶಗಳ ಆಧಾರದ ಮೇಲೆ ಪ್ರಚಾರದ ಒಂದು ಸುರಿಮಳೆಯನ್ನೇ ಸುರಿಸುತ್ತಿದೆ. ಭಾರತದ ಅರ್ಥವ್ಯವಸ್ಥೆಯು ಈಗ ವಿಶ್ವದಲ್ಲೇ ಅತಿ ಹೆಚ್ಚು ವೇಗವಾಗಿ ಬೆಳೆಯುತ್ತಿದೆ ಎಂದು ಹೇಳಿಕೊಳ್ಳುತ್ತದೆ ಮತ್ತು ಈ ಸಂಗತಿಯೇ ತಾನು ಅರ್ಥವ್ಯವಸ್ಥೆಯನ್ನು ಚಾಣಾಕ್ಷವಾಗಿ ನಿರ್ವಹಿಸಿರುವುದಕ್ಕೆ ಒಂದು ಸಾಕ್ಷಿ ಎಂದು ಹೇಳಿಕೊಳ್ಳುತ್ತದೆ. ಅದು ಹೇಳದೇ ಬಿಟ್ಟದ್ದು ಏನೆಂದರೆ, ವಿಶ್ವದ ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಭಾರತದ ಅರ್ಥವ್ಯವಸ್ಥೆಯು 2020–21ನೇ ಸಾಲಿನಲ್ಲಿ ಸಾಂಕ್ರಾಮಿಕ–ಪ್ರೇರಿತ ಲಾಕ್‌ಡೌನ್‌ನಿಂದಾಗಿ ಒಂದು ಹೀನಾಯ ಕೆಳಮಟ್ಟಕ್ಕೆ ಇಳಿದಿತ್ತು ಎಂಬುದನ್ನು ಮತ್ತು ತಾನು ಹೇರಿದ ಲಾಕ್‌ಡೌನ್ ವಿಶ್ವದಲ್ಲೇ ಅತ್ಯಂತ ಕಠೋರವಾಗಿತ್ತು ಎಂಬುದನ್ನು. ಪಾತಾಳಕ್ಕೆ ಇಳಿದಿದ್ದ ಜಿಡಿಪಿಯು ಸಾಂಕ್ರಾಮಿಕ–ಪೂರ್ವ ಮಟ್ಟಕ್ಕೆ ಏರಿದ ದರವು ಅತಿ ಉನ್ನತವಾಗಿ ಕಾಣಿಸಿಕೊಳ್ಳುತ್ತದೆ, ಏಕೆಂದರೆ, ತೀವ್ರವಾಗಿ ಕುಸಿದ ಮಟ್ಟವನ್ನು ಮೂಲವಾಗಿ ಪರಿಗಣಿಸಿ ಲೆಕ್ಕ ಹಾಕಲಾಗುತ್ತದೆ. ಮೊದಲೇ ಹೇಳಿದಂತೆ, ಸಾಂಕ್ರಾಮಿಕ ವರ್ಷದಲ್ಲಿ ಕಂಡ ಕುಸಿತ ಮತ್ತು ತದನಂತರ ಕಂಡ ಚೇತರಿಕೆಯ ವರ್ಷವನ್ನು ನಿರ್ಲಕ್ಷಿಸಿ, ಸಾಂಕ್ರಾಮಿಕ ಪೂರ್ವದ 2019–20 ಮತ್ತು ಸಾಂಕ್ರಾಮಿಕ ತರುವಾಯದ 2022–23 ಸಾಮಾನ್ಯ ವರ್ಷಗಳನ್ನು ಪರಿಗಣಿಸಿದರೆ, ವಾರ್ಷಿಕ ಬೆಳವಣಿಗೆಯ ದರವು ಕೇವಲ ಶೇ. 2.85ರಷ್ಟಿದೆ. ಈ ಮಟ್ಟದ ಬೆಳವಣಿಗೆಯು, ಪ್ರಭಾವಶಾಲಿ ಬೆಳವಣಿಗೆಯ ಮಾತಿರಲಿ, ಅರ್ಥವ್ಯವಸ್ಥೆಯು ನಿಂತಲ್ಲೇ ನಿಂತಿದೆ ಎಂಬುದನ್ನು ಸೂಚಿಸುತ್ತದೆ.

ನಿರುದ್ಯೋಗ ದರದಲ್ಲಿ ಏಕೆ ತೀವ್ರ ಏರಿಕೆಯಾಗಬೇಕು?

ಇತ್ತೀಚಿನ ಜಿಡಿಪಿ ಅಂಕಿಅಂಶಗಳು ಒಂದು ಗಮನಾರ್ಹ ಮತ್ತು ಗೊಂದಲದ ವಿದ್ಯಮಾನವನ್ನು ಎತ್ತಿ ತೋರಿಸುತ್ತವೆ ಎಂಬುದನ್ನು ಅನೇಕರು ಗಮನಿಸಿದ್ದಾರೆ. 2018–19ಕ್ಕೆ ಹೋಲಿಸಿದರೆ 2022–23ರಲ್ಲಿ ಜಿಡಿಪಿಯು ಶೇ. 13.37ರಷ್ಟು ಹೆಚ್ಚಿದೆ. ಆದರೆ, ಸೆಂಟರ್ ಫಾರ್ ಮಾನಿಟರಿಂಗ್ ದಿ ಇಂಡಿಯನ್ ಎಕಾನಮಿ (ಸಿಎಂಐಇ) ಒದಗಿಸಿದ ಮಾಹಿತಿಯ ಪ್ರಕಾರ, 2018–19ರಲ್ಲಿ ಶೇ. 6.3ರಷ್ಟಿದ್ದ ನಿರುದ್ಯೋಗ ದರವು ಮಾರ್ಚ್ 2023ರ ವೇಳೆಗೆ ಶೇ. 7.9ಕ್ಕೆ ಏರಿದೆ. ಜಿಡಿಪಿಯು ಹೆಚ್ಚುತ್ತಿರುವ ಈ ಅವಧಿಯಲ್ಲಿ ನಿರುದ್ಯೋಗ ದರ ಏರಿದೆ. ಏಕೆ? ನಾವು ಈಗಷ್ಟೇ ನೋಡಿರುವಂತೆ ಪ್ರಭಾವಶಾಲಿಯಾಗಿ ಅಲ್ಲದಿದ್ದರೂ, ಶ್ರಮ ಶಕ್ತಿಯ ಬೆಳವಣಿಗೆಯ ದರಕ್ಕೆ ಸಂಬಂಧಪಟ್ಟ ಜನಸಂಖ್ಯೆಯ ಬೆಳವಣಿಗೆಯ ದರಕ್ಕಿಂತ ಹೆಚ್ಚಿನ ದರದಲ್ಲಿ ಜಿಡಿಪಿಯು ಬೆಳೆದಿದೆ. ವಾಸ್ತವವಾಗಿ ಶ್ರಮಶಕ್ತಿಯ ಭಾಗವಹಿಸುವಿಕೆಯ ಪ್ರಮಾಣ, ಅಂದರೆ ದುಡಿಯುವ ವಯಸ್ಸಿನ ಜನರಲ್ಲಿ ಉದ್ಯೋಗ ಮಾಡುವವರ ಅನುಪಾತವು ಈ ಅಲ್ಪಾವಧಿಯಲ್ಲಿ ಏರಿಕೆಯಾಗಿಲ್ಲ. ಹಾಗಾದರೆ, ನಿರುದ್ಯೋಗ ದರವು ಏಕೆ ತೀವ್ರವಾಗಿ ಏರಿಕೆಯಾಗಬೇಕು?

ನಿರುದ್ಯೋಗ ದರದ ಹೆಚ್ಚಳವು ವಾಸ್ತವವಾಗಿ ಶ್ರಮಶಕ್ತಿಯ ಪೂರೈಕೆಯಲ್ಲಿನ ಯಾವುದೇ ಹಠಾತ್ ಹೆಚ್ಚಳದಿಂದ ಆಗಿಲ್ಲ. ಬದಲಿಗೆ, ಶ್ರಮಶಕ್ತಿಯ ಮೇಲಿನ ಬೇಡಿಕೆಯ ಕುಸಿತದಿಂದಾಗಿದೆ ಎಂಬ ಅಂಶವನ್ನು ಸಿಎಂಐಇಯ ಮತ್ತೊಂದು ಪುರಾವೆಯು ದೃಢಪಡಿಸುತ್ತದೆ. 2019–20ರಲ್ಲಿ 40.89 ಕೋಟಿ ಇದ್ದ ಉದ್ಯೋಗಿಗಳ ಸಂಖ್ಯೆಯು 2023ರ ಮಾರ್ಚ್‌ನಲ್ಲಿ 40.76 ಕೋಟಿಗೆ ಕುಸಿದಿದೆ. ಈ ಕುಸಿತವು ಮೂರು ವಿಷಯಗಳನ್ನು ಸೂಚಿಸುತ್ತದೆ: ಮೊದಲನೆಯದು, 2020–21ರಲ್ಲಿ ಇಳಿದ ಹೀನಾಯ ಕೆಳಮಟ್ಟದಿಂದ ಅರ್ಥವ್ಯವಸ್ಥೆಯು ಕಂಡ ಚೇತರಿಕೆಯು ಕಡಿಮೆ–ಉದ್ಯೋಗ ಕೇಂದ್ರಿತ ಚಟುವಟಿಕೆಗಳಲ್ಲಿ ಹೆಚ್ಚು ಬಲವಾಗಿತ್ತು ಮತ್ತು ಲಾಕ್‌ಡೌನ್ ಅವಧಿಯಲ್ಲಿ ಹೆಚ್ಚು ಪೆಟ್ಟು ತಿಂದ ಅಸಂಘಟಿತ ವಲಯದಂತಹ ಹೆಚ್ಚು–ಉದ್ಯೋಗ ಕೇಂದ್ರಿತ ಚಟುವಟಿಕೆಗಳಲ್ಲಿ ಕಂಡ ಚೇತರಿಕೆಯು ದುರ್ಬಲವಾಗಿತ್ತು ಎಂಬುದನ್ನು. (ನೋಟು ರದ್ದತಿಯ ಸಂದರ್ಭದಲ್ಲಿ ಮತ್ತು ಜಿಎಸ್‌ಟಿ ಜಾರಿಯ ಪರಿಣಾಮವಾಗಿ ಈ ವಲಯವು ತಿಂದ ಹೊಡೆತಗಳನ್ನು ಇಲ್ಲಿ ಪರಿಗಣಿಸಿಲ್ಲ). ಎರಡನೆಯದು, ಡಿಜಿಟಲೀಕರಣವು ಮಾನವ ಚಟುವಟಿಕೆಯನ್ನು ಹೆಚ್ಚು ಹೆಚ್ಚಾಗಿ ಬದಲಾಯಿಸುತ್ತಿರುವ ಸನ್ನಿವೇಶದಲ್ಲಿ ಕಾರ್ಮಿಕರ ಉತ್ಪಾದಕತೆಯು ನಿರಂತರವಾಗಿ ಹೆಚ್ಚುತ್ತಿದ್ದರೂ, ಉದ್ಯೋಗದ ಬೆಳವಣಿಗೆಯ ದರವು ಕಡಿಮೆ ಇರುತ್ತದೆ ಎಂಬುದು. ಮೂರನೆಯದು, ಶ್ರಮಶಕ್ತಿಯ ಮೇಲಿನ ಬೇಡಿಕೆಯ ಇಳಿಕೆಯಿಂದಾಗಿ ಅಥವಾ 'ಮಿತವ್ಯಯ'ವನ್ನು ಜಾರಿಗೊಳಿಸುವ ಸಾಧನವಾಗಿ ಹಲವಾರು ಕ್ಷೇತ್ರಗಳಲ್ಲಿ ಕೆಲಸಗಾರರ ವಾಸ್ತವಿಕ ವಜಾಗಳು ನಡೆದಿವೆ ಎಂಬುದು. ಉದಾಹರಣೆಗೆ, ಫೆಬ್ರವರಿ 2023ರಲ್ಲಿ 40.99 ಕೋಟಿ ಇದ್ದ ಉದ್ಯೋಗಿಗಳ ಸಂಖ್ಯೆಯು ಮಾರ್ಚ್ ತಿಂಗಳ



ವೇಳೆಗೆ 40.76 ಕೋಟಿಗೆ ಇಳಿದ ಹಠಾತ್ ಕುಸಿತವು ವಜಾಗಳು ವಾಸ್ತವಿಕವಾಗಿ ನಡೆದಿವೆ ಎಂಬುದನ್ನು ವಿವರಿಸುತ್ತದೆ.

ಉತ್ಪ್ರೇಕ್ಷಿತ ಅಂದಾಜುಗಳು

ನಿರುದ್ಯೋಗ ದರದ ಏರಿಕೆಯನ್ನು ವಿವರಿಸುವ ಈ ಕೆಲವು ಅಂಶಗಳೇ 2022–23ರ ನಾಲ್ಕನೇ ತ್ರೈಮಾಸಿಕದ ಮತ್ತು ಒಟ್ಟಾರೆಯಾಗಿ 2022–23ರ ವರ್ಷದ ಜಿಡಿಪಿ ಬೆಳವಣಿಗೆಯನ್ನು ಏಕೆ ಅತಿ–ಅಂದಾಜು ಮಾಡಲಾಗಿದೆ ಎಂಬುದನ್ನು ಸೂಚಿಸುತ್ತವೆ. ಜಿಡಿಪಿಯನ್ನು ಅಂದಾಜು ಮಾಡುವ ಹೊಸ ವಿಧಾನದಲ್ಲಿ, ನಾವು ಈಗ ಪಡೆದಿರುವ ರೀತಿಯ 2022–23ರ ನಾಲ್ಕನೇ ತ್ರೈಮಾಸಿಕದ ಮೊದಲ ಅಂದಾಜು, ಸಂಘಟಿತ ವಲಯದ ಚಟುವಟಿಕೆಗಳ ಬೆಳವಣಿಗೆಯ ದರವೇ ಕೃಷಿಯೇತರ ಅಸಂಘಟಿತ ವಲಯಕ್ಕೂ ಅನ್ವಯಿಸುತ್ತದೆ ಎಂಬ ಊಹನೆಯನ್ನು ಆಧರಿಸಿದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಅಸಂಘಟಿತ ವಲಯದ ದತ್ತಾಂಶಗಳನ್ನು ಸಂಗ್ರಹಿಸಲು ಬಹಳ ಸಮಯ ಹಿಡಿಯುವ ಕಾರಣದಿಂದ, ಸಂಘಟಿತ ವಲಯದ ದತ್ತಾಂಶಗಳೇ ಎರಡೂ ವಲಯಗಳಿಗೂ ಒಟ್ಟಿಗೆ ಅನ್ವಯಿಸುತ್ತವೆ ಎಂದು ಊಹಿಸಲಾಗಿದೆ. ಆದರೆ, ಸಾಂಕ್ರಾಮಿಕದ ಸಮಯದಲ್ಲಿ ಅಸಂಘಟಿತ ವಲಯವು ವಿಶೇಷವಾಗಿ ಒಂದು ತೀವ್ರ ಹಾನಿಗೆ ಒಳಗಾಗಿದ್ದರಿಂದ ಮತ್ತು ಅದರಿಂದ ಈ ವಲಯವು ಇನ್ನೂ ಚೇತರಿಕೆ ಹೊಂದದ ಕಾರಣದಿಂದ, ಸಂಘಟಿತ ವಲಯದ ಬೆಳವಣಿಗೆಯ ದತ್ತಾಂಶವನ್ನು ಈ ಎರಡೂ ವಲಯಗಳಿಗೆ ಒಟ್ಟಾಗಿ ಅನ್ವಯಿಸುವ ಈ ವಿಧಾನವು ಅರ್ಥವ್ಯವಸ್ಥೆಯ ಒಟ್ಟಾರೆ ಬೆಳವಣಿಗೆಯ ದರವನ್ನು ಉತ್ಪ್ರೇಕ್ಷೆಗೊಳಿಸುತ್ತದೆ.

ಸಂಘಟಿತ ವಲಯದಲ್ಲೂ ಸಹ, ಷೇರು ಮಾರುಕಟ್ಟೆಯಲ್ಲಿ ಪಟ್ಟಿ ಮಾಡಲಾದ ಕೆಲವು ಕಂಪನಿಗಳ ಆರ್ಥಿಕ ಕಾರ್ಯಕ್ಷಮತೆಯ ಬಗ್ಗೆ ತ್ರೈಮಾಸಿಕವಾಗಿ ಲಭಿಸುವ ಖಾಸಗಿ ವಲಯದ ಕಾರ್ಪೊರೇಟ್‌ಗಳ ದತ್ತಾಂಶವು ಸಂಘಟಿತ ವಲಯದ ಒಟ್ಟಾರೆ ಬೆಳವಣಿಗೆಯ ದರವನ್ನು ಅಳೆಯುವಲ್ಲಿ ಹೆಚ್ಚಿನ ತೂಕವನ್ನು ಹೊಂದಿದೆ ಮತ್ತು ಈ ಅಂಶವು ಜಿಡಿಪಿ ಬೆಳವಣಿಗೆಯ ದರದ ಅಂಕಿಅಂಶಗಳನ್ನು ಉತ್ಪ್ರೇಕ್ಷಿಸಿ ತೋರಿಸುತ್ತದೆ. ಕೇಂದ್ರೀಯ ಅಂಕಿಅಂಶಗಳ ಸಂಗ್ರಹಣಾ ಸಂಸ್ಥೆಗೆ(ಸಿಎಸ್‌ಒ) ಮುಕ್ತ ಅವಕಾಶ ನೀಡಿದರೆ ಮತ್ತು ಅದು ನ್ಯಾಯನಿಷ್ಠವಾಗಿ ಕಾರ್ಯನಿರ್ವಹಿಸಿದರೆ ಬೆಳವಣಿಗೆಯ ಈ ಅಂಕಿಅಂಶವನ್ನು ನಂತರ ಕೆಳಮುಖವಾಗಿ ಸರಿಹೊಂದಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೂ, ಜಿಡಿಪಿ ಬೆಳವಣಿಗೆಯ ಉತ್ಪ್ರೇಕ್ಷಿತ ಅಂಕಿಅಂಶವು ಮೋದಿ ಸರ್ಕಾರದ ಪ್ರಚಾರದ ಅಗತ್ಯಗಳನ್ನು ಸದ್ಯಕ್ಕೆ ಉತ್ತಮವಾಗಿ ಪೂರೈಸುತ್ತದೆ.

ಈ ಅಂಕಿಅಂಶಗಳು ಬದಲಾಗದೆ ಉಳಿದರೂ, ಗಮನಾರ್ಹವಾದ ಸಂಗತಿಯೆಂದರೆ, ಉತ್ಪಾದನಾ ವಲಯದ ಬೆಳವಣಿಗೆಯ ದರವು (ಒಟ್ಟು ಮೌಲ್ಯವರ್ಧನೆ) ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ. 1.3ರಷ್ಟಿದೆ. ಉತ್ಪಾದನೆಯು ವ್ಯಾಪಕ ಏರಿಳಿತಗಳಿಗೆ ಒಳಪಟ್ಟಿರುವ ಕೃಷಿ ವಲಯ (4%) ಮತ್ತು ವೇಗವಾಗಿ ಬೆಳೆದ "ವ್ಯಾಪಾರ,

ಪುಟ 15 ಕ್ಕೆ



ನಿಲ್ಲದ ಮಣಿಪುರ ಹಿಂಸಾಚಾರ: ಬಿಜೆಪಿ ಮುಖಂಡರು ಚುನಾವಣೆ ಗೆಲ್ಲಲು ಕುಕಿ ಉಗ್ರರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರೇ?

ಪುಟ 12 ರಿಂದ

ನಿಯೋಜಿಸಿದರೂ 'ಡಬಲ್ ಇಂಜಿನ್' ಸರಕಾರ ಅಸಹಾಯಕವಾಗಿ ಕೈಚೆಲ್ಲಿರುವಂತೆ ಕಾಣುತ್ತದೆ. ರಾಜ್ಯದಲ್ಲಿ ಕಾನೂನು–ವ್ಯವಸ್ಥೆ ವಿಫಲವಾಗಿದೆ ಎಂದು ಕೇಂದ್ರ ಮಂತ್ರಿಗಳೇ ಹೇಳುವಂತಾಗಿದೆ. ಗಮನಿಸಬೇಕಾದ ಸಂಗತಿಯೆಂದರೆ, ಈ ಹಿಂಸಾಚಾರ ಆರಂಭವಾಗಿ, ಹೊತ್ತಿ ಉರಿಯಲಾರಂಭಿಸಿದಾಗ ಕೇಂದ್ರ ಗೃಹಮಂತ್ರಿಗಳು ಮತ್ತು ಪ್ರಧಾನಿಗಳು ಕರ್ನಾಟಕದಲ್ಲಿ 'ಡಬಲ್ ಇಂಜಿನ್ ಸರಕಾರ'ದ ಅಗತ್ಯದ ಬಗ್ಗೆ ಪ್ರಚಾರ ನಡೆಸುತ್ತಿದ್ದರು. ಹಿಂಸಾಚಾರ ಆರಂಭವಾಗಿ 20 ದಿನಗಳ ನಂತರ ಅಲ್ಲಿಗೆ ಗೃಹಮಂತ್ರಿಗಳ ಭೇಟಿ ಮತ್ತು ಅವರು ರೂಪಿಸಿದರೆನ್ನಲಾದ ಶಾಂತಿ ಪ್ರಸ್ತಾಪಗಳು ಕ್ಷೋಭೆಯನ್ನು ತಗ್ಗಿಸಬಹುದೆಂಬ ನಿರೀಕ್ಷೆ ಈಗ ಸಂಪೂರ್ಣ ಹುಸಿಯಾಗಿದೆ.

550ಕ್ಕೂ ಹೆಚ್ಚು ನಿವೃತ್ತ ಐಎಎಸ್, ಐಪಿಎಸ್ ಅಧಿಕಾರಿಗಳು, ಪ್ರಾಧ್ಯಾಪಕರುಗಳು, ಲೇಖಕರು, ಸಾಮಾಜಿಕ ಕಾರ್ಯಕರ್ತರು, ಕಲಾವಿದರು ಮುಂತಾದವರು ಹಿಂಸಾಚಾರ ಆರಂಭವಾದಂದಿನಿಂದಲೂ ಈ ಬಗ್ಗೆ ಚಕಾರವೆತ್ತದ ಪ್ರಧಾನಿಗಳು ಈಗಲಾದರೂ ತಮ್ಮ ಮೌನ ಮುರಿಯಬೇಕು ಎಂದು ಆಗ್ರಹಿಸಿದ್ದಾರೆ.

ಈ ನಡುವೆ ಈ 'ಡಬಲ್ ಇಂಜಿನ್' ವಿಫಲತೆಗೆ ಹೇಗಾದರೂ ಚುನಾವಣೆ ಗೆಲ್ಲುವ ಮತ್ತು ಜನಗಳನ್ನು ವಿಭಜಿಸುವ ತಂತ್ರವೇ ಕಾರಣವಾಗುತ್ತಿದೆಯೇ ಎಂಬ ಸಂದೇಹವನ್ನು ಬಲಪಡಿಸುವ ಒಂದು ಸಂಗತಿ ಬಯಲಿಗೆ ಬಂದಿದೆ.

ಮಣಿಪುರದಲ್ಲಿ ಚುನಾವಣೆ ಗೆಲ್ಲಲು ಅಸ್ಸಾಂ ಮುಖ್ಯಮಂತ್ರಿ ಹೇಮಂತ್ ಬಿಸ್ವಾ ಶರ್ಮಾ ಮತ್ತು ಹಿರಿಯ ಬಿಜೆಪಿ/ಆರೆಸ್ಸೆಸ್ ಮುಖಂಡ ರಾಮ್ ಮಾಧವ್ ಕುಕಿ ಉಗ್ರಗಾಮಿ ಗುಂಪುಗಳಿಂದ ಸಹಾಯ ಪಡೆದಿದ್ದಾರೆಯೇ ಎಂಬ ಪ್ರಶ್ನೆಯನ್ನು ಎತ್ತುವ ಪತ್ರವೊಂದು ಎನ್ಐಎ ನ್ಯಾಯಾಲಯದಲ್ಲಿ ಬಯಲಿಗೆ ಬಂದಿದೆ. 'ಯುನೈಟೆಡ್ ಕುಕಿ ಲಿಬರೇಶನ್ ಫ್ರಂಟ್'(ಯುಕೆಎಲ್ಎಫ್) ಅಧ್ಯಕ್ಷ ಎಸ್ ಎಸ್ ಹಾವೊಕಿಪ್ ಸಲ್ಲಿಸಿದ ಅಫಿಡವಿಟ್ ಜೊತೆಗೆ ಲಗತ್ತಿಸಲಾದ ಈ ಪತ್ರದಲ್ಲಿ ರಾಮ್ ಮಾಧವ್ ಮತ್ತು ಹಿಮಂತ ಬಿಸ್ವಾ ಶರ್ಮಾ ಅವರೊಂದಿಗಿನ ಒಪ್ಪಂದದ ಪ್ರಕಾರ, 2017 ರಲ್ಲಿ, ಅವರ ಸಂಘಟನೆ ಮತ್ತು ಮತ್ತೊಂದು ಕುಕಿ ಸಂಘಟನೆ ಯುನೈಟೆಡ್ ಪೀಪಲ್ ಫ್ರಂಟ್ (ಯುಪಿಎಫ್) ಬಿಜೆಪಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ ಎಂದು ಯುಕೆಎಲ್ಎಫ್ ನಾಯಕ ಆರೋಪಿಸಿದ್ದಾರೆ.

2019 ರಲ್ಲಿ ಕುಕಿ ಸಂಘಟನೆಯ ನಾಯಕರು ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ಬರೆದರೆನ್ನಲಾದ ಈ ಪತ್ರದಲ್ಲಿ ಈ ಇಬ್ಬರು ಬಿಜೆಪಿ ನಾಯಕರು ಈ ಸಹಾಯವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿ ಉಗ್ರಗಾಮಿ ಸಂಘಟನೆಗಳ ಸಹಾಯ ಪಡೆಯಿತು ಎಂಬ ಸಂಗತಿ ಇದರಿಂದ ಹೊಮ್ಮುತ್ತದೆ. ಬಿಜೆಪಿ 2017 ರಲ್ಲಿ ಮೊದಲ ಬಾರಿಗೆ ಈ ಈಶಾನ್ಯ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿತು ಮತ್ತು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ನೇತೃತ್ವದಲ್ಲಿ ಸರ್ಕಾರವನ್ನು ರಚಿಸಿತು.

"ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಲ್ಲಿ ನಾನು ಪ್ರಮುಖ ಪಾತ್ರ ವಹಿಸಿದ್ದೇನೆ. ಸ್ಪಷ್ಟವಾಗಿ ಹೇಳಬೇಕೆಂದರೆ, ಇವುಗಳನ್ನು ನಾವು ಬೆಂಬಲಿಸದಿದ್ದರೆ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಸ್ಥಾಪಿಸುವುದು ಅಸಾಧ್ಯವಾಗುತ್ತಿತ್ತು. ಇತ್ತೀಚೆಗೆ ಮುಕ್ತಾಯಗೊಂಡ ಸಂಸತ್ತಿನ ಚುನಾವಣೆಯಲ್ಲಿ, ಬಿಜೆಪಿ ಅಭ್ಯರ್ಥಿಯು ನಮ್ಮ ಕಾರ್ಯಾಚರಣೆಯ ಪ್ರದೇಶದಲ್ಲಿ ಸುಮಾರು 80–90 ಪ್ರತಿಶತದಷ್ಟು ಮತಗಳನ್ನು ಗಳಿಸಿದ್ದಾರೆ" ಎಂದೂ 2019ರಲ್ಲಿ ಬರೆದ ಈ ಪತ್ರದಲ್ಲಿ ಹೇಳಲಾಗಿದೆ ಎಂದು ವರದಿಯಾಗಿದೆ. (https://www.indiatodayne.in/, ಜೂನ್13).



ರಾಮ್ ಮಾಧವ್ ಇದನ್ನು ನಿರಾಕರಿಸಿದ್ದಾರೆ. "ಚುನಾವಣಾ ಪ್ರಚಾರದ ಸಮಯದಲ್ಲಿ, ಸಮಾಜದ ವಿವಿಧ ಕ್ಷೇತ್ರಗಳ ಅನೇಕ ಜನರು ನಮ್ಮನ್ನು ಭೇಟಿಯಾಗುತ್ತಾರೆ. ಈ ವ್ಯಕ್ತಿಯನ್ನು ಅಥವಾ ಯಾವುದೇ ಉಗ್ರಗಾಮಿ ಸಂಘಟನೆಯ ಮುಖಂಡರನ್ನು ಭೇಟಿ ಮಾಡಿದ ನೆನಪಿಲ್ಲ. ಹಾಗಾಗಿ ಆತನಿಂದ ಸಹಾಯ ಪಡೆಯುವ ಪ್ರಶ್ನೆಯೇ ಇಲ್ಲ. ನಮ್ಮ ಕಾರ್ಯಕರ್ತರು ಮತ್ತು ಸಾರ್ವಜನಿಕ ಬೆಂಬಲದ ಬಲದಿಂದ ನಾವು ಚುನಾವಣೆಯಲ್ಲಿ ಗೆಲ್ಲುತ್ತೇವೆ" ಎಂದು ಅವರು ಹೇಳಿದ್ದಾರಂತೆ. ಅಸ್ಸಾಂ ಮುಖ್ಯಮಂತ್ರಿಗಳು 'ಇಂಡಿಯಾ ಟುಡೇ ಎನ್ಇ ಯಲ್ಲಿ ಇದು ಪ್ರಕಟವಾಗುವ ವರೆಗೆ ಕರೆಗಳು ಮತ್ತು ಲಿಖಿತ ಸಂದೇಶಗಳಿಗೆ ಪ್ರತಿಕ್ರಿಯಿಸಲಿಲ ಎನ್ನುತ್ತ, ಈ ಪತ್ರ ಹಲವು ಪ್ರಶ್ನೆಗಳನ್ನು ಎತ್ತಿದೆ ಎಂದು ಈವರದಿಯನ್ನು ಸಲ್ಲಿಸಿದ ಪತ್ರಕರ್ತರು ಹೇಳುತ್ತಾರೆ. ಅವೆಂದರೆ:

* ಮಣಿಪುರ ಚುನಾವಣೆಗಳಲ್ಲಿ ಬಿಜೆಪಿ ಕುಕಿ ಉಗ್ರರ ನೆರವು ಪಡೆದಿದೆಯೇ?
* 2019 ರ ಲೋಕಸಭಾ ಚುನಾವಣೆಯ ಸಮಯದಲ್ಲಿ ಬಿಜೆಪಿ ಅದೇ ಕುಕಿ ಉಗ್ರಗಾಮಿಗಳ ಸಹಾಯವನ್ನು ತೆಗೆದುಕೊಂಡಿದೆಯೇ?
* ಕುಕಿ ಉಗ್ರಗಾಮಿಗಳಿಂದ ಸಹಾಯ ಕೇಳಿದ ಬಗ್ಗೆ ಪ್ರಧಾನಿ ಮತ್ತು ಗೃಹಮಂತ್ರಿಗಳಿಗೆ ತಿಳಿದಿತ್ತೇ? ಹೌದು ಎಂದಾದರೆ, ಅವರು ಅದನ್ನು ಹೇಗೆ ಮಂಜೂರು ಮಾಡಿದರು? ಇಲ್ಲದಿದ್ದರೆ, ಏಕೆ ತಿಳಿಯಲಿಲ್ಲ?
* ಇದು ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ನಿರ್ಲಜ್ಜವಾಗಿ ರಾಜಿ ಮಾಡಿಕೊಳ್ಳುವುದಿಲ್ಲವೇ? ಮೋದಿ ಸರಕಾರಕ್ಕೆ ಚುನಾವಣಾ ಲಾಭವು ದೇಶದ ಹಿತಾಸಕ್ತಿಗಳಿಗಿಂತ ದೊಡ್ಡದೇ?
* ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ಮತ್ತು ರಾಮ್ ಮಾಧವ್ ವಿರುದ್ಧ ಪ್ರಧಾನಿ, ಗೃಹಮಂತ್ರಿ, ಮೋದಿ ಸರ್ಕಾರ ಮತ್ತು ಬಿಜೆಪಿ ಯಾವ ಕ್ರಮ ತೆಗೆದುಕೊಳ್ಳುತ್ತಾರೆ?
* ಎನ್ಐಎ ಅವರ ವಿರುದ್ಧ ಪ್ರಕರಣ ದಾಖಲಿಸುತ್ತದೆಯೇ ಮತ್ತು ಅವರೊಂದಿಗೆ ಉಗ್ರರ ಸಂಪರ್ಕಗಳಿದ್ದವೇ ಎಂದು ತನಿಖೆ ನಡೆಸುತ್ತದೆಯೇ?
* ಬಿಜೆಪಿ ಅಧ್ಯಕ್ಷರು ಕ್ರಮ ಕೈಗೊಳ್ಳುವರೇ?
* ಉಗ್ರಗಾಮಿ ಸಂಘಟನೆಯೊಂದಿಗೆ ಸಂಪರ್ಕ ಹೊಂದಿರುವ ಅಸ್ಸಾಂ ಸಿಎಂ ಪ್ರಮಾಣ ವಚನವನ್ನು ಉಲ್ಲಂಘಿಸಿದಂತಾಗಿಲ್ಲವೇ? ತನಿಖೆಗಳು ಮುಗಿಯುವವರೆಗೆ ಅಧಿಕಾರದಲ್ಲಿ ಮುಂದುವರಿಯಲು ಅವರಿಗೆ ಹಕ್ಕಿದೆಯೇ?
* ಪ್ರಧಾನಿ ಮತ್ತು ಗೃಹಮಂತ್ರಿಗಳ ಸಂಪೂರ್ಣ ಮೌನವೇ ರಾಷ್ಟ್ರಕ್ಕೆ ಸಿಗುವ ಉತ್ತರಗಳೇ?

ಈ ಕೊನೆಯ ಪ್ರಶ್ನೆಯನ್ನು ಮೇಲೆ ಹೇಳಿದಂತೆ 550ಕ್ಕೂ ಹೆಚ್ಚು ಪ್ರತಿಷ್ಠಿತ ಹಿರಿಯರಲ್ಲದೆ, ಮಣಿಪುರದ ಚಿಂತಕರೂ ನೋವಿನಿಂದ ಕೇಳುತ್ತಿದ್ದಾರೆ.

ಬಹುಸಂಖ್ಯಾಕವಾದ ಮತ್ತು ಧ್ರುವೀಕರಣದ ರಾಜಕೀಯದ ದುಷ್ಪರಿಣಾಮಗಳ ಬಗ್ಗೆ ಅಮಿತ್ ಷಾ ಎಂದಾದರೂ ವಿವರಿಸುತ್ತಾರೆಯೇ! ಹಲವು ಜನಾಂಗೀಯ, ಧಾರ್ಮಿಕ, ಮತ್ತು ಸಾಂಸ್ಕೃತಿಕ ಅಸ್ಮಿತೆಗಳಿರುವ ಭಾರತದಲ್ಲಿ ಚುನಾವಣಾ ಪ್ರಾಬಲ್ಯದ ಬಲಿಪೀಠದಲ್ಲಿ ಬೇರೆಲ್ಲ ಪರಿಗಣನೆಗಳನ್ನು ಬಲಿಗೊಡುವಲ್ಲಿ ಹೀಗಾಗುವುದು ಖಂಡಿತ ಎಂದು ಮಣಿಪುರದ ನಿಲ್ಲದ ಹಿಂಸಾಚಾರದ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಹೇಳುತ್ತಾರೆ.

ಈ ನಡುವೆ ಅಸ್ಸಾಂನ ರಾಜಧಾನಿ ಗುವಾಹಾಟಿಯಲ್ಲಿ ಸಿಪಿಐ(ಎಂ), ಸಿಪಿಐ, ಕಾಂಗ್ರೆಸ್ ಸೇರಿದಂತೆ 12 ಪ್ರತಿಪಕ್ಷಗಳ ಮುಖಂಡರು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ರಾಜೀನಾಮೆ ನೀಡಬೇಕು ಇಲ್ಲವಾದರೆ, ಅವರನ್ನು ವಜಾಗೊಳಿಸಿ ಬಂಧಿಸಬೇಕು ಎಂದು ಆಗ್ರಹಿಸಿ ವಜಾ ಮತ್ತು ಬಂಧನವನ್ನು ಆಗ್ರಹಿಸಿ ಜೂನ್ 16ರಂದು ಧರಣಿ ನಡೆಸಿದ್ದಾರೆ. ಅಸ್ಸಾಂ ಮುಖ್ಯಮಂತ್ರಿ ಮತ್ತು ರಾಂಮಾಧವ್ ಮಣಿಪುರದ ಕುಕಿ ಉಗ್ರಗಾಮಿ ಗುಂಪುಗಳೊಂದಿಗೆ ಹೊಂದಿರಬಹುದಾದ ಸಂಬಂಧಗಳ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕೆಂದು ಧರಣಿ ಆಗ್ರಹಿಸಿದೆ.

ಕೊರಗ ಯುವಕರ ಮೇಲೆ ಸುಳ್ಳು ದರೋಡೆ ಪ್ರಕರಣ......

ಪುಟ 7 ರಿಂದ

ಒತ್ತಾಯಿಸಿದರು.

ರಾಜ್ಯ ಸಹ ಸಂಚಾಲಕ ಡಾ. ಎಸ್.ವೈ. ಗುರುಶಾಂತ್, ಸಿಐಟಿಯು ದ.ಕ. ಜಿಲ್ಲಾಸಮಿತಿ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ದಲಿತ ಮುಖಂಡ ಜಯನ್ ಮಲ್ಪೆ, ಹಾಗೂ ಬಿ.ಕೆ. ಇಮ್ತಿಯಾಜ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ವಿವಿಧ ಸಂಘಟನೆಗಳ ನಾಯಕರಾದ ಶ್ರೀದರ ನಾಡಾ, ಯಾದವ ಶೆಟ್ಟಿ, ಸಂತೋಷ್ ಬಜಾಲ್, ಕವಿರಾಜ್ ಕಾಂಚನ್, ಯೋಗೀಶ್ ಜಪ್ಪಿನಮೊಗರು, ಮನೋಜ್ ವಾಮಂಜೂರು, ತಿಮ್ಮಯ್ಯ ಕೊಂಚಾಡಿ, ರಂಗ ಕೊರಗ, ಗಣೇಶ್ ಆಳ್ವ, ಕೃಷ್ಣ ಇನ್ನ , ಕರಿಯ ಕೆ. ಶೇಖರ್, ಪ್ರಮೀಳಾ ಶಕ್ತಿನಗರ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಟನೆಯ ವೇಳೆ ಜೋರಾಗಿ ಮಳೆ ಸುರಿದರೂ ಅಲ್ಲಿಂದ ಯಾರೂ ಕದಲದೆ ಪ್ರತಿಭಟನೆಯನ್ನು ಮುಂದುವರಿಸಲಾಯಿತು. ಛತ್ರಿಯನ್ನು ಹಿಡಿದುಕೊಂಡು ನಾಯಕರು ಭಾಷಣ ಮುಂದುವರಿಸುವ ಮೂಲಕ ಗಮನ ಸೆಳೆದರು.

ರೈಲ್ವೆ ಮತ್ತು ರಾಜಕೀಯ –ಸೀತಾರಾಮ್ ಯೆಚೂರಿ ಸಂದರ್ಶನ.....

ಪುಟ 11 ರಿಂದ

ಮ್ಯಾನೇಜರ್ ಮತ್ತು ಇತರ ಹಿರಿಯ ಅಧಿಕಾರಿಗಳಿಗೆ ಇಮೇಲ್‌ಗಳನ್ನು ಕಳುಹಿಸಲಾಗಿದೆ. 72 ಆಸನಗಳ ಕೋಚ್‌ನಲ್ಲಿ 200 ಜನರು ಹತ್ತಿದ್ದಾರೆ ಮತ್ತು ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಬೇಕೆಂದು ಇ–ಮೇಲ್‌ಗಳ ದೂರುಗಳು ಬಹಿರಂಗಗೊಂಡಿವೆ. ಇಂತಹ ಪರಿಸ್ಥಿತಿಗಳಲ್ಲಿ ಜನಸಂದಣಿ ನಿಯಂತ್ರಣ ಮತ್ತು ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಕೋಚ್‌ಗಳ ಸೇರ್ಪಡೆ ಸರಿಯಾಗಿ ಆಗುತ್ತಿಲ್ಲ. ಅಂತಹ ಬೋಗಿಗಳು ಅಪಘಾತಕ್ಕೀಡಾದರೆ ರೈಲ್ವೆ ಬಳಿ ಕೇವಲ 72 ಜನರ ವಿವರ ಇರುತ್ತದೆ. ಇತರರ ಭವಿಷ್ಯವೇನು ಎಂಬ ಪ್ರಶ್ನೆ ಇದೆ. ಹಾಗಾಗಿ ರೈಲ್ವೆ ವಲಯ ಗಮನಹರಿಸಬೇಕಾದ ಹಲವು ಅಂಶಗಳಿವೆ.

ಪ್ರಶ್ನೆ: ಒಂದೆಡೆ, ಎಲ್ಲಾ ಆಧುನಿಕ ಸೌಕರ್ಯಗಳೊಂದಿಗೆ ಐಷಾರಾಮಿ ಪ್ರಯಾಣವನ್ನು ಖಾತ್ರಿಪಡಿಸುವ ಹೈ–ಸ್ಪೀಡ್ ಕೋಚ್‌ಗಳಿವೆ. ಮತ್ತೊಂದೆಡೆ, ಕಡಿಮೆ ದರದ ಪ್ಯಾಸೆಂಜರ್ ರೈಲುಗಳ ನಿಲುಗಡೆ, ಎಕ್ಸ್‌ಪ್ರೆಸ್ ರೈಲುಗಳಲ್ಲಿ ಸಾರ್ವಜನಿಕ ಕೋಚ್‌ಗಳನ್ನು ಕಡಿತಗೊಳಿಸುವುದರಿಂದ ಸಾಮಾನ್ಯ ಜನರು ರೈಲು ಪ್ರಯಾಣವನ್ನು ಹೆಚ್ಚು ಬಳಸಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಮತ್ತು ಆಡಳಿತ ಈ ವಾಸ್ತವವನ್ನು ಅರಿತುಕೊಂಡಿದೆಯೇ?

ಯೆಚೂರಿ: ಭಾರತೀಯ ರೈಲ್ವೇಯ ವಿಶಿಷ್ಟತೆಯೆಂದರೆ ಅದು ಕಡು ಬಡವರಿಂದ ಹಿಡಿದು ಸಮಾಜದ ಉನ್ನತ ಶ್ರೇಣಿಯಲ್ಲಿರುವ ಶ್ರೀಮಂತರವರೆಗೆ ಎಲ್ಲರಿಗೂ ಸೇವೆ ಸಲ್ಲಿಸಲು ತನ್ನ ಬಾಗಿಲು ತೆರೆದಿದೆ. ಎಲ್ಲರೂ ಒಂದೇ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾರೆ ಎಂಬ ಅರ್ಥದಲ್ಲಿ ಸಮಾನತೆಯ ಅಂಶವಿದೆ ಎಂದು ಕೂಡ ಹೇಳಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ರೈಲ್ವೆ ಆಡಳಿತದ ಗಮನ ಮತ್ತು ದೃಷ್ಟಿಕೋನವು ಶ್ರೀಮಂತ ಮೇಲ್ವರ್ಗದ ಕಡೆಗಿದೆ. ಬಡವರು ಮತ್ತು ಸಾಮಾನ್ಯ ಜನರನ್ನು ರೈಲು ಪ್ರಯಾಣದಿಂದ ದೂರವಿಡುತ್ತಿದೆ. ದೇಶದಾದ್ಯಂತ ಕೋಟ್ಯಂತರ ಅಂಚಿನಲ್ಲಿರುವ ಜನರ ಜೀವನೋಪಾಯಕ್ಕೆ ರೈಲ್ವೆ ಮಹತ್ತರವಾಗಿ ಸಹಾಯ ಮಾಡಿದೆ. ಕೂಲಿ ಕಾರ್ಮಿಕರು ಕೆಲಸಕ್ಕೆ ಹೋಗಲು, ಸಣ್ಣ ವ್ಯಾಪಾರಿಗಳು ತಮ್ಮ ಸರಕುಗಳನ್ನು ಮಾರಾಟ ಮಾಡಲು ಅಗ್ಗದ ರೈಲು ಪ್ರಯಾಣ ಮಾಡುತ್ತಾರೆ. ಆದರೆ ಈಗ ಅವರ ಅವಕಾಶವನ್ನು ನಿರಾಕರಿಸಲಾಗುತ್ತಿದೆ. ನಾನು ಈಗಾಗಲೇ ಹೇಳಿದಂತೆ, ಸಾಮಾನ್ಯ ಬೋಗಿಗಳು ಕಡಿಮೆಯಾದ ಕಾರಣ ಅವರು ಕಾಯ್ದಿರಿಸಿದ ಬೋಗಿಗಳಿಗೆ ಹತ್ತುತ್ತಿದ್ದಾರೆ. ರೈಲ್ವೆ ಪೊಲೀಸರು ಮಧ್ಯ ಪ್ರವೇಶಿಸಿ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ. ಇತ್ತ ಗಮನಹರಿಸದ ಸರಕಾರ ಮೇಲ್ವರ್ಗದವರಿಗೆ ಉತ್ತಮ ಸೌಲಭ್ಯ ಕಲ್ಪಿಸಿ ಪ್ರಚಾರ ಪಡೆಯುವ ಅನಿವಾರ್ಯತೆಗೆ ಸಿಲುಕಿದೆ. ಈ ಅನುಭವದ ಆದಾರದಲ್ಲಿ ಸರ್ಕಾರ ತನ್ನ ಕರ್ತವ್ಯ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಲು ಮುಂದಾಗಬೇಕು.

ಪ್ರಶ್ನೆ: ಭಾರತದ ಎಲ್ಲಾ ಜನರಿಗೆ ಆನಂದದಾಯಕ ಮತ್ತು ಸುರಕ್ಷಿತ ರೈಲು ಪ್ರಯಾಣವನ್ನು ಒದಗಿಸುವುದು ಭಾರತದ ಶಕ್ತಿಯನ್ನು ಮೀರಿದೆ ಎಂದು ನೀವು ಭಾವಿಸುತ್ತೀರಾ?

ಯೆಚೂರಿ: ನಾನು ಹಾಗೆ ಯೋಚಿಸುವುದಿಲ್ಲ. ಭಾರತೀಯ ರೈಲ್ವೇಗೆ ಸಂಬಂಧಪಟ್ಟಂತೆ, ಮನಸ್ಸಿದ್ದರೆ ಅದು ಅಸಾಧ್ಯವಾದುದೇನಲ್ಲ. ನನ್ನ ವಿದ್ಯಾರ್ಥಿ ದಿನಗಳಲ್ಲಿ ರೈಲುಗಳು ಮೂರನೇ ದರ್ಜೆಯ ಕೋಚ್‌ಗಳನ್ನು ಹೊಂದಿದ್ದವು. ಈಗಿನಂತಲ್ಲದೆ, ಇದು ಮರದ ಆಸನಗಳನ್ನು ಹೊಂದಿರುತ್ತಿತ್ತು. ಶುಲ್ಕ ತುಂಬಾ ಕಡಿಮೆ. ಟಿಕೆಟ್‌ನ 3 ಪ್ರತಿಗಳನ್ನು ಪೆನ್‌ನಲ್ಲಿ ಬರೆಯಲಾಗುತ್ತದೆ. ಒಂದನ್ನು ಪ್ರಯಾಣಿಕರಿಗೆ ನೀಡಲಾಗುತ್ತದೆ. (ಇನ್ನೆರಡು ರೈಲ್ವೆ ಸ್ಥಳೀಯ ಮತ್ತು ಪ್ರಧಾನ ಕಛೇರಿಗಳಿಗಾಗಿ). ಇಂತಹ ಆರಂಭಿಕ ಹಂತದಿಂದ ಭಾರತೀಯ ರೈಲ್ವೇ ತನ್ನ ದಕ್ಷತೆಯನ್ನು ಅಭಿವೃದ್ಧಿಪಡಿಸಿದೆ ಮತ್ತು ಕ್ರಮೇಣ ಬೆಳವಣಿಗೆ ಮತ್ತು ಪ್ರಗತಿಯನ್ನು ಸಾಧಿಸಿದೆ. ಇದು ತಾಂತ್ರಿಕ ಬೆಳವಣಿಗೆಯ ಲಾಭವನ್ನೂ ಪಡೆದುಕೊಂಡಿದೆ. ಆದರೆ ದುರದೃಷ್ಟವಶಾತ್,

ಗೋಡ್ಸೆಯನ್ನು ವೈಭವೀಕರಿಸುವ ಪಕ್ಷ

'ಅಮೃತ್ ಕಾಲ'ದ ನಿಜವಾದ ಅರ್ಥವು ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ನಿರಂತರ ದಾಳಿಯೊಂದಿಗೆ ದ್ವೇಷದ ಭಾಷಣ ಮತ್ತು ಗಾಂಧೀಜಿಯ ಹಂತಕ ಗೋಡ್ಸೆಯ ವೈಭವೀಕರಣದೊಂದಿಗೆ ತೆರೆದುಕೊಳ್ಳುತ್ತಿದೆ. ಮಹಾರಾಷ್ಟ್ರದಲ್ಲಿ, ಶಿಂಧೆ ಬಿಜೆಪಿ ಸರ್ಕಾರವು ಮುಸ್ಲಿಂ ಹೆಸರುಗಳನ್ನುಹೊಂದಿರುವ ನಗರಗಳಿಗೆ ಮರುನಾಮಕರಣ ಮಾಡುವ ಹುನ್ನಾರ ನಡೆಸಿದೆ. ಔರಂಗಾಬಾದ್ ಛತ್ರಪತಿ ಸಂಭಾಜಿನಗರವಾಗಿದೆ, ಒಸ್ಮಾನಾಬಾದ್ ಈಗ ಧಾರಾಶಿವ್ ಆಗಿದೆ, ಅಹಮದ್‌ನಗರ ಜಿಲ್ಲೆಯನ್ನು ಅಹಲ್ಯಾಬಾಯಿ ಹೋಳ್ಕರ್ ನಗರ ಎಂದು ಘೋಷಿಸಲಾಗಿದೆ. ಈ ಬದಲಾವಣೆಗಳು ಬಹುಸಂಖ್ಯಾತ ವಿಜಯೋತ್ಸವ ಮತ್ತು ಮುಸ್ಲಿಂ ಆಡಳಿತಗಾರರು ಮತ್ತು ಐತಿಹಾಸಿಕ ವ್ಯಕ್ತಿಗಳ ರಾಕ್ಷಸೀಕರಣದ ಜೊತೆಗೂಡಿವೆ. ಇದಕ್ಕೂ ಮೊದಲು, ಮಹಾರಾಷ್ಟ್ರದಾದ್ಯಂತ ನಾಲ್ಕು ತಿಂಗಳ ಕಾಲ 50 ಹಿಂದೂ ಜನ ಆಕ್ರೋಶ್ ಮೋರ್ಚಾ ರ‍್ಯಾಲಿಗಳನ್ನು ನಡೆಸಲಾಯಿತು, ಇದು ಮುಸ್ಲಿಂ-ಬೇಟೆ ಮತ್ತು ಹಿಂದೂ ಧರ್ಮಾಂಧತೆಯ ಬಹಿರಂಗ ಪ್ರದರ್ಶನವಾಯಿತು.



ಅಹಮದ್‌ನಗರ ಜಿಲ್ಲೆಯ ಶೆವ್ ಗಾಂವ್ ಗ್ರಾಮದಲ್ಲಿ ಕೋಮುಗಲಭೆ ನಡೆದಿದ್ದು, ಕೊಲ್ಹಾಪುರದಲ್ಲಿ ಎರಡು ಕೋಮುಗಳ ನಡುವೆ ಘರ್ಷಣೆ ನಡೆದಿದೆ. ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಈ ಪರಿಸ್ಥಿತಿಗೆ 'ಔರಂಗಜೇಬ್ ಕಿ ಔಲಾದ್' (ಔರಂಗಜೇಬನ ಮಕ್ಕಳು) ಕಾರಣ ಎಂದು ಹೇಳಿದ್ದಾರೆ. ಗೃಹ ಖಾತೆ ಹೊಂದಿರುವ ಬಿಜೆಪಿಯ ಹಿರಿಯ ನಾಯಕರೊಬ್ಬರು ಇಂತಹ ಹೇಳಿಕೆ ನೀಡಿರುವುದು ಅಧಿಕೃತ ಸ್ಥಾನದಲ್ಲಿರುವವರು ದ್ವೇಷದ ರಾಜಕಾರಣದ ಲಜ್ಜೆಗೆಟ್ಟ ಅಳವಡಿಕೆಯನ್ನು ತೋರಿಸುತ್ತದೆ.

ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮುಸ್ಲಿಮರನ್ನು ಪ್ರತ್ಯೇಕ ಸ್ಥಾನದಲ್ಲಿ ನಿಲ್ಲಿಸುವುದು ಮತ್ತು ಅವರನ್ನು ಆರ್ಥಿಕವಾಗಿ ದುರ್ಬಲಗೊಳಿಸುವುದು ಉದ್ದೇಶಪೂರ್ವಕ ನೀತಿಯಾಗಿದೆ. ಜನಸಂಖ್ಯೆಯ ಅತ್ಯಲ್ಪ ಪ್ರಮಾಣದಲ್ಲಿ ಮುಸ್ಲಿಮರಿರುವ ಉತ್ತರಾಖಂಡದಲ್ಲಿ ಪುರೋಲಾ, ಉತ್ತರಕಾಶಿಯಲ್ಲಿ ಮುಸ್ಲಿಂ ಅಂಗಡಿಕಾರರಿಗೆ ತಮ್ಮ ಅಂಗಡಿಗಳನ್ನು ಖಾಲಿ ಮಾಡುವಂತೆ ಸೂಚಿಸಲಾಗಿದೆ. ಮುಸ್ಲಿಂ ಅಂಗಡಿಗಳಿಗೆ ಕಪ್ಪು ಶಿಲುಬೆ ಹಾಕಲಾಗಿದ್ದು, ಜೂನ್ 15ರೊಳಗೆ ಖಾಲಿ ಮಾಡುವಂತೆ ಗಡುವು ನೀಡಲಾಗಿದೆ. ಇದು ಅಪ್ರಾಪ್ತ ಬಾಲಕಿಯ ಅಪಹರಣ ಘಟನೆಯ ಪರಿಣಾಮವಾಗಿದೆ, ಇದರಲ್ಲಿ ಭಾಗಿಯಾಗಿರುವ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬರು ಮುಸ್ಲಿಂ ಯುವಕ. ಈಗಾಗಲೇ ಕೆಲ ಅಂಗಡಿಕಾರರು ಮಾರುಕಟ್ಟೆಯಲ್ಲಿನ ಅಂಗಡಿಗಳನ್ನು ಬಂದ್ ಮಾಡಿ ತೆರಳಿದ್ದಾರೆ. ಮುಸ್ಲಿಂ ವ್ಯಾಪಾರಿಗಳನ್ನು ಬಜಾರ್‌ಗಳನ್ನು ಬಿಟ್ಟು ಹೋಗುವಂತೆ ಸೂಚಿಸುವ ಇದೇ ರೀತಿಯ ವರದಿಗಳು ಇತರ ಸ್ಥಳಗಳಲ್ಲಿಯೂ ಕೇಳಿಬಂದಿವೆ.

ಈ ರೀತಿ ಮುಸಲ್ಮಾನರನ್ನು ಬೇಟೆಯಾಡಲು ಪ್ರೇರೇಪಿಸುತ್ತಿರುವುದು ಬಿಜೆಪಿ–ಆರ್‌ಎಸ್‌ಎಸ್ ಒಕ್ಕೂಟದ ದ್ವೇಷ ಮತ್ತು ಮತಾಂಧತೆಯ ರಾಜಕಾರಣ. ಇತ್ತೀಚೆಗೆ, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರು ನಾಥುರಾಮ್ ಗೋಡ್ಸೆಯನ್ನು ಭಾರತದ 'ಸಪೂತ್' ಎಂದು ಕರೆದರು. "ಗೋಡ್ಸೆ ಗಾಂಧಿಯ ಹಂತಕನಾಗಿದ್ದರೆ, ಅವರು ಭಾರತ ಮಾತೆಯ ಸಪೂತ್ (ಯೋಗ್ಯ ಮಗ)" ಎಂದು ಹೇಳಿದರು. ಗೋಡ್ಸೆಯ ವೈಭವೀಕರಣವು ಬಿಜೆಪಿ ನಾಯಕತ್ವಕ್ಕೆ ಸಮಯೋಚಿತ ವಿಷಯವಾಗಿದೆ.

ಗಿರಿರಾಜ್ ಸಿಂಗ್ ಅವರ ಹೇಳಿಕೆಗೆ ಕೆಲವೇ ದಿನಗಳ ಮೊದಲು, ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್, "ಗಾಂಧೀಜಿ ಕೊಲ್ಲಲ್ಪಟ್ಟರು, ಇದು ಬೇರೆ ವಿಷಯ. ಗೋಡ್ಸೆ ಕೂಡ ದೇಶಪ್ರೇಮಿಯಾಗಿದ್ದರು." ಎಂದು ಹೇಳಿಕೆ ನೀಡಿದ್ದರು. ಅದಕ್ಕೂ ಮೊದಲು, 2019 ರಲ್ಲಿ, ಭೋಪಾಲ್‌ನ ಬಿಜೆಪಿ ಸಂಸದೆ ಮತ್ತು ಭಯೋತ್ಪಾದಕ ಪ್ರಕರಣದಲ್ಲಿ ಆರೋಪಿಯಾಗಿರುವ ಪ್ರಜ್ಞಾ ಸಿಂಗ್ ಠಾಕೂರ್ ಅವರು ಗೋಡ್ಸೆಯನ್ನು ದೇಶಭಕ್ತ ಎಂದು ಕರೆದಿದ್ದರು. ಕರ್ನಾಟಕದ ಬಿಜೆಪಿ ಸಂಸದ ನಳಿನ್ ಕುಮಾರ್ ಕಟೀಲ್, ರಾಜೀವ್ ಗಾಂಧಿ 17,000 ಜನರನ್ನು ಕೊಂದಿದ್ದರೆ ಗೋಡ್ಸೆ ಒಬ್ಬನನ್ನು ಮಾತ್ರ ಕೊಂದಿದ್ದಾನೆ ಎಂದು ಸಮರ್ಥಿಸಿಕೊಂಡಿದ್ದರು. ಹಾಗಾಗಿ, ಬಿಜೆಪಿಯ ಎಲ್ಲಾ ಹಂತಗಳಲ್ಲಿಯೂ ಗೋಡ್ಸೆ-ಪ್ರೀತಿ ರೂಢಿಯಲ್ಲಿದೆ. ಮತ್ತೊಬ್ಬ ಗಾಂಧಿ ದ್ವೇಷಿ ಸಾವರ್ಕರ್ ಅವರ ಆರಾಧಕ, ಜೊತೆಗೂಡಿದ ಕೋರಸ್ ಆಗಿದೆ. ಒಂದು ಪಕ್ಷ ಗೋಡ್ಸೆಯನ್ನು ವೈಭವೀಕರಿಸುವ ಮತ್ತು ಹಿಂದುತ್ವ ರಾಷ್ಟ್ರವನ್ನು ಸ್ಥಾಪಿಸಲು ಹೊರಡುವ ಮೂಲಕ ಅದು ಹೇಳುವ ನವ ಭಾರತ ಎಂದರೆ ಏನು ಎಂಬುದನ್ನು ತೋರಿಸುತ್ತದೆ.

2022–23ರ ಜಿಡಿಪಿ ಅಂದಾಜು ಮತ್ತು ಸರಕಾರದ ಪ್ರಚಾರದ ಸುರಿಮಳೆ........ ಪುಟ 13 ರಿಂದ

ಹೋಟೆಲ್‌ಗಳು, ಸಾರಿಗೆ, ಸಂಚಾರ ಮತ್ತು ಪ್ರಸಾರ ಸಂಬಂಧಿಸಿದ ಸೇವೆಗಳು" ಕೂಡಿದ ಸೇವಾ ವಲಯ(14%), ಇವು ಒಟ್ಟಾರೆ ಬೆಳವಣಿಗೆಯ ದರವನ್ನು ಹೆಚ್ಚಿಸಿವೆ.

ವಾಸ್ತವವನ್ನು ಮರೆಮಾಚಲಾಗದು

ಇದು ಮಹತ್ವಪೂರ್ಣವಾಗಿದೆ. ಸೇವಾ ವಲಯವು ಸಾಮಾನ್ಯವಾಗಿ ಭೌತಿಕ ಸರಕು ಉತ್ಪಾದನಾ ವಲಯಗಳಲ್ಲಿ ಉತ್ಪತ್ತಿಯಾಗುವ ಮಿಗುತಾಯ ಮೌಲ್ಯದ ಆಧಾರದ ಮೇಲೆ ಹುಲುಸಾಗಿ ಬೆಳೆಯುತ್ತದೆ. ಅದಕ್ಕಾಗಿಯೇ ಸೇವಾ ಕ್ಷೇತ್ರದಲ್ಲಿ ತೊಡಗಿರುವ ಕಾರ್ಮಿಕರನ್ನು "ಅನುತ್ಪಾದಕ ಕಾರ್ಮಿಕರು" ಎಂದು ಆಡಮ್ ಸ್ಮಿತ್ ವರ್ಗೀಕರಿಸಿದ್ದರು ಮತ್ತು ಸೋವಿಯತ್ ಒಕ್ಕೂಟ ಮತ್ತು ಇತರ ಪೂರ್ವ ಯುರೋಪಿಯನ್ ಸಮಾಜವಾದಿ ದೇಶಗಳಲ್ಲಿ, ಸೇವಾ ವಲಯದ ಉತ್ಪಾದನೆಯನ್ನು ಜಿಡಿಪಿ ಅಂದಾಜಿನಲ್ಲಿ ಸೇರಿಸುತ್ತಿರಲಿಲ್ಲ. ಇದಲ್ಲದೆ, ಸೇವಾ ವಲಯದ ಬೆಳವಣಿಗೆಯು ಹೆಚ್ಚಾಗಿ ಈ ಹಿಂದೆ ಮನೆಯೊಳಗೆ ನಡೆಸಲಾಗುತ್ತಿದ್ದ ಒಂದು ಶ್ರೇಣಿಯ ಚಟುವಟಿಕೆಗಳ ಸರಕೀಕರಣವನ್ನು ಮಾತ್ರ ಪ್ರತಿಬಿಂಬಿಸುತ್ತದೆ ಮತ್ತು ಈ ಕಾರಣದಿಂದಾಗಿ ಅದು ಚಟುವಟಿಕೆಯ ಮಟ್ಟದಲ್ಲಿ ಯಾವುದೇ ನೈಜ ಸೇರ್ಪಡೆಯನ್ನು ಪ್ರತಿಬಿಂಬಿಸುವುದಿಲ್ಲ. ಜೊತೆಗೆ, ಸೇವಾ ವಲಯದ ಉತ್ಪತ್ತಿಯನ್ನು ಅಂದಾಜು ಮಾಡುವ ಕಾರ್ಯವಿಧಾನವು ತೊಂದರೆಗಳಿಂದ ಕೂಡಿದೆ, ವಿಶೇಷವಾಗಿ ಅದರ ಅಸಂಘಟಿತ ವಿಭಾಗದಲ್ಲಿ.

ಈ ಎಲ್ಲಾ ಕಾರಣಗಳಿಂದಾಗಿ, ವಿಶೇಷವಾಗಿ ತಯಾರಿಕಾ ವಲಯದ ಬೆಳವಣಿಗೆಯು ಸ್ಥಗಿತಗೊಂಡಿರುವಾಗ, ಸೇವಾ ವಲಯದ ಉನ್ನತ ಬೆಳವಣಿಗೆಯ ದರವನ್ನು ಸಂಭ್ರಮಿಸುವುದು ಸರಿಯಲ್ಲ.

ಅದಲ್ಲದೆ, ಸಂಘಟಿತ ವಲಯದ ಬೆಳವಣಿಗೆಯನ್ನು ಅಸಂಘಟಿತ ವಲಯಕ್ಕೂ ಅನ್ವಯಿಸುವ ಕ್ರಮವು ಬೆಳವಣಿಗೆಯ ವಾಸ್ತವ ದರವನ್ನು ಉತ್ಪ್ರೇಕ್ಷಿಸುತ್ತದೆ ಎಂಬ ವಾದವು ಸೇವಾ ವಲಯಕ್ಕೂ ಅರ್ಥಪೂರ್ಣವಾಗಿ ಅನ್ವಯಿಸುತ್ತದೆ. ದುಡಿಯುವ ಜನರು ಸಾಮಾನ್ಯವಾಗಿ ತಮ್ಮ ಆದಾಯವನ್ನು, ಆಹಾರವನ್ನು ಹೊರತುಪಡಿಸಿ, ತಯಾರಿಕಾ ಸರಕುಗಳ ಮೇಲೆ ಮತ್ತು ಅಸಂಘಟಿತ ಸೇವಾ ವಲಯದ ಉತ್ಪಾದನೆಗಳ ಮೇಲೆ ಖರ್ಚು ಮಾಡುತ್ತಾರೆ. ಹಾಗಾಗಿ, ಉತ್ಪಾದನಾ ವಲಯವು ಸ್ಥಗಿತಗೊಂಡಿರುವ ವಾಸ್ತವ ಮತ್ತು ಅಸಂಘಟಿತ ಸೇವಾ ವಲಯದ ಉತ್ಪತ್ತಿಯೂ ಅಷ್ಟೇನೂ ಉತ್ತಮವಾಗಿರದ ಅಂಶವು ದುಡಿಯುವ ಜನರ ಬಳಕೆಯು ಬಹಳವಾಗಿ ತಗ್ಗಿದೆ ಎಂಬುದನ್ನು ಸೂಚಿಸುತ್ತದೆ. ಅದರೊಟ್ಟಿಗೆ ಸರ್ಕಾರದ ಖರ್ಚು-ವೆಚ್ಚಗಳು ಅಕ್ಷರಶಃ ಸ್ಥಗಿತಗೊಂಡಿರುವ ಅಂಶವೂ ಸೇರುತ್ತದೆ. ಒಟ್ಟು ಸ್ಥಿರ ಬಂಡವಾಳ ಹೂಡಿಕೆ ಹೆಚ್ಚಿದೆ, ನಿಜ. ಆದರೆ ಬಳಕೆ ಮತ್ತು ನಿವ್ವಳ ರಫ್ತುಗಳು ಹಿಂದೆ ಬಿದ್ದರೆ ಹೂಡಿಕೆಯ ಬೆಳವಣಿಗೆಯನ್ನು ದಕ್ಕಿಸಿಕೊಳ್ಳುವುದು ಸಾಧ್ಯವಿಲ್ಲ.

ದುಡಿಯುವ ಜನರ ಬಳಕೆಯು ತಗ್ಗಿದೆ ಎಂಬುದು ಜಿಡಿಪಿ ಅಂಕಿಅಂಶಗಳು ಬಹಿರಂಗಪಡಿಸಿರುವ ಅತ್ಯಂತ ಆತಂಕಕಾರಿ ಸಂಗತಿ. ಭಾರತವು ವಿಶ್ವದ "ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆ" ಎಂದು ಎಷ್ಟೇ ಜೋರಾಗಿ ಡಂಗುರ ಹೊಡೆದರೂ ಈ ವಾಸ್ತವವನ್ನು ಬಹುಶಃ ಮರೆಮಾಚುವುದು ಸಾಧ್ಯವಿಲ್ಲ.

➘ ರೈಲ್ವೆ ವಲಯದ ಆದ್ಯತೆ ಬದಲಾಗಿದೆ. ಸೇವಾ ಮನೋಭಾವನೆ ಹಿಂದೆ ಸರಿದು ಲಾಭದ ಧ್ಯೇಯ ಮುಂಚೂಣಿಗೆ ಬಂದಿರುವುದರಿಂದ ಸರಕಾರ ಶ್ರೀಮಂತರ ಬೇಕು ಬೇಡಗಳನ್ನು ಮಾತ್ರ ಪರಿಗಣಿಸಿ ಕಾರ್ಯಪ್ರವೃತ್ತವಾಗಿದೆ. ಜನಸಂಖ್ಯೆಯ ಕೇವಲ ಶೇ. 1 ರಷ್ಟು ಹೆಚ್ಚಿನ ಆದಾಯದ ಜನರ ಅನುಕೂಲಕ್ಕಾಗಿ ಯೋಜನೆಗಳನ್ನು ಮಾಡಲಾಗಿದೆ. ಮೂಲಸೌಕರ್ಯಗಳನ್ನು ಸುಧಾರಿಸಲಾಗುತ್ತಿದೆ. ಬುಲೆಟ್ ಟ್ರೈನ್ ಗಳನ್ನು ತಯಾರು ಮಾಡಿ ಹೆಚ್ಚಿನ ವೆಚ್ಚದಲ್ಲಿ ಓಡಿಸಲಾಗುತ್ತದೆ. ಅತ್ಯಂತ ಕಡಿಮೆ ಸಂಖ್ಯೆಯ ಜನರಿಗೆ ಈ ಎಲ್ಲಾ ಸೌಲಭ್ಯಗಳು ಸರ್ಕಾರದ ದೊಡ್ಡ ಸಾಧನೆಗಳೆಂದು ಪ್ರಚಾರ ಮಾಡಲಾಗುತ್ತದೆ. ಅವು ಮಾಧ್ಯಮಗಳಲ್ಲಿಯೂ ವ್ಯಾಪಕವಾಗಿ ಚರ್ಚೆಯಾಗುತ್ತಿವೆ. ಈ ವಾಸ್ತವವನ್ನು ಎಲ್ಲರೂ ಅರಿತುಕೊಳ್ಳಬೇಕು.

ಪ್ರಶ್ನೆ: ಒಡಿಶಾದ ಬಾಲಸೋರ್‌ನಲ್ಲಿ ಸಂಭವಿಸಿದ ದೊಡ್ಡ ರೈಲು ಅಪಘಾತದ ಸಂದರ್ಭದಲ್ಲಿ ಸರ್ಕಾರದ ತಕ್ಷಣದ ಕ್ರಮ ಹೇಗಿರಬೇಕು?

ಯೆಚೂರಿ: ಅಂತಹ ಸಂದರ್ಭದಲ್ಲಿ ಇಡೀ ಸರ್ಕಾರಿ ಯಂತ್ರ ಪರಿಹಾರ ಕಾರ್ಯಗಳತ್ತ ಸಂಪೂರ್ಣ ಗಮನ ಹರಿಸಬೇಕು. ಅದರಲ್ಲಿ ಯಾವುದೇ ಸಂಶಯವಿಲ್ಲ. ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ನೀಡುವುದು, ಕಾಣೆಯಾದ ಸಂಬಂಧಿಕರ ಗುರುತು ಪತ್ತೆ ಹಚ್ಚಿ ಮೃತದೇಹಗಳನ್ನು ಅವರ ಸಂಬಂಧಿಕರಿಗೆ ಹಸ್ತಾಂತರಿಸುವುದು, ಗಾಯಾಳುಗಳಿಗೆ ಆಸ್ಪತ್ರೆಗಳಲ್ಲಿ ತ್ವರಿತ ಚಿಕಿತ್ಸೆ ನೀಡುವುದನ್ನು ಪೂರ್ಣ ಪ್ರಮಾಣದಲ್ಲಿ ಮುಂದುವರಿಸಬೇಕು. ಈಗಾಗಲೇ ಆರಂಭಿಸಿರುವ ತನಿಖೆಗಳ ಫಲಿತಾಂಶಗಳನ್ನು ಪಡೆದು ಆ ವರದಿಗಳಲ್ಲಿ ವ್ಯಕ್ತಪಡಿಸಿರುವ ವಿಚಾರಗಳನ್ನು ಕಾರ್ಯರೂಪಕ್ಕೆ ತರಬೇಕು. ಪ್ರಯಾಣಿಕರ ಸುರಕ್ಷತೆಗೆ ಸಂಬಂಧಿಸಿದಂತೆ ರೈಲ್ವೇ ವಿಶೇಷ ಕಾರ್ಯಪಡೆಯ ಶಿಫಾರಸುಗಳು ಮತ್ತು ರಚನಾತ್ಮಕ ಸಲಹೆಗಳನ್ನು ವಿವರವಾಗಿ ಅಧ್ಯಯನ ಮಾಡಬೇಕು ಮತ್ತು ಆದಷ್ಟು ಬೇಗ ಅನುಷ್ಠಾನಗೊಳಿಸಬೇಕು. ಇಂತಹ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣವಾಗಿರುವ ರೈಲ್ವೆಯನ್ನು ಖಾಸಗೀಕರಣಗೊಳಿಸುವ ಪ್ರಯತ್ನ ಕೈಬಿಡಬೇಕು.

ನಾನು ಮೊದಲೇ ಹೇಳಿದಂತೆ, ರೈಲ್ವೆ ಮತ್ತು ಅಂಚೆ ಸೇವೆಗಳು ಈ ವಿಶಾಲ ದೇಶದ ಸಂಪರ್ಕ ಸೇತುವೆಗಳಾಗಿವೆ. ಆದರೆ ಸರ್ಕಾರದ ಖಾಸಗೀಕರಣ ನೀತಿಯಿಂದ ಇವೆರಡೂ ಸಂಕಷ್ಟಕ್ಕೆ ಸಿಲುಕಿವೆ. ಕೇವಲ ಐದು ರೂಪಾಯಿಗಳಿಗೆ ಭಾರತದಲ್ಲಿ ಎಲ್ಲಿಂದಲಾದರೂ ಅಂಚೆ ಕಳುಹಿಸುವ ಮೂಲಕ ಜನರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಆದರೆ ಇಂದು ಖಾಸಗಿ ಕೊರಿಯರ್ ಸೇವಾ ಸಂಸ್ಥೆಗಳು ಅಂಚೆ ಸೇವೆಯನ್ನು ದುರ್ಬಲಗೊಳಿಸಿವೆ. ರೈಲ್ವೆಯ ಎಲ್ಲಾ ಕಾಮಗಾರಿಗಳು ಮತ್ತು ಸೇವೆಗಳನ್ನು ಖಾಸಗಿ ಗುತ್ತಿಗೆದಾರರ ಕೈಗೆ ತಂದು ಪ್ರಶ್ನಾತೀತ ಮಟ್ಟಕ್ಕೆ ತರಲಾಗಿದೆ. ಇವೆಲ್ಲವುಗಳ ಬಗ್ಗೆ ಜನರಲ್ಲಿ ಸುದೀರ್ಘ ಚರ್ಚೆ ನಡೆಯಬೇಕು.

ಪ್ರಶ್ನೆ: ಆದರೆ ನಾವು ಖಾಸಗೀಕರಣಕ್ಕೆ ಒಳಗಾಗಿಲ್ಲ; ಹಣಗಳಿಕೆಯ ನೀತಿಯನ್ನು (ಖಾಸಗೀಕರಣ ಬೇಡ; ಕೇವಲ ಹಣಗಳಿಕೆ) ಜಾರಿಗೆ ತರುತ್ತಿದ್ದೇವೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು ಖಡಾಖಂಡಿತವಾಗಿ ಹೇಳುತ್ತಿದ್ದಾರಲ್ಲಾ?

ಯೆಚೂರಿ: ಅವರ ಹೇಳಿಕೆಗೆ ಹಿಂತಿರುಗಿ ನೋಡೋಣ. ಹಣಗಳಿಕೆ ಎಂದರೇನು? ಭಾರತದಾದ್ಯಂತ ರೈಲ್ವೇಯು ಗಣನೀಯ ಪ್ರಮಾಣದ ಭೂಮಿಯನ್ನು ಹೊಂದಿದೆ. ಇವುಗಳನ್ನು ಶ್ರೀಮಂತ ಖಾಸಗಿ ಕಾರ್ಪೊರೇಟ್‌ಗಳಿಗೆ ರೈಲ್ವೆ ಕ್ಷೇತ್ರದ ಅಭಿವೃದ್ಧಿಗಾಗಿ ನೀಡುವುದಾಗಿದೆ ವಿನಃ, ಅದು ಪ್ರಯಾಣಿಕರ ಅನುಕೂಲಕ್ಕಾಗಿ ಅಲ್ಲ. ಅವರು ತಮ್ಮ ಸಂಪತ್ತನ್ನು ಮತ್ತಷ್ಟು ಹೆಚ್ಚಿಸಲು ಅನುವು ಮಾಡಿಕೊಡುವುದು ಡಿಮಾನಿಟೈಸೇಶನ್ ನೀತಿಯ ಮೂಲ ಉದ್ದೇಶವಾಗಿದೆ. ಇದರಲ್ಲಿಯೂ ಕಾರ್ಪೊರೇಟ್ ಸಂಸ್ಥೆಗಳ ಹಿತರಕ್ಷಣೆಯೇ ಸರಕಾರದ ಆದ್ಯತೆಯಾಗಿದೆ. ರೈಲ್ವೆ ಪ್ರಯಾಣಿಕರ ಸುರಕ್ಷತೆ ಸರಕಾರದ ಆದ್ಯತೆಯಾಗುತ್ತಿಲ್ಲ. ಸರಕಾರದ ಈ ಧೋರಣೆ ಖಂಡಿತಾ ಸ್ವೀಕಾರಾರ್ಹವಲ್ಲ.

ಪ್ರಶ್ನೆ: ಅಂತಿಮವಾಗಿ, ಭಾರತೀಯ ರೈಲ್ವೆಯಲ್ಲಿ ಇಂತಹ ಅಪಘಾತಗಳನ್ನು ತಡೆಯಬಹುದು ಎಂದು ನೀವು ಭಾವಿಸುತ್ತೀರಾ?

ಯೆಚೂರಿ: ಖಂಡಿತವಾಗಿ. ಸದಾ ಮಾನವೀಯತೆಯೊಂದಿಗೆ, ರೈಲು ಪ್ರಯಾಣಿಕರ ಸುರಕ್ಷತೆಗೆ ಸಂಪೂರ್ಣ ಆದ್ಯತೆ ನೀಡಿದರೆ ಮತ್ತು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಸಂಪೂರ್ಣವಾಗಿ ತೆಗೆದುಕೊಂಡರೆ, ಇಂತಹ ಭೀಕರ ಅಪಘಾತಗಳನ್ನು ತಪ್ಪಿಸಬಹುದು; ತಡೆಯಬಹುದು. ಜನಜೀವನ ಮತ್ತು ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡುವಂತೆ ನೋಡಿಕೊಳ್ಳಬೇಕು ಮತ್ತು ಪೊಳ್ಳು ಪ್ರಚಾರದ ಉದ್ದೇಶದಿಂದ ಸರ್ಕಾರ ಮಾಡುವ ಪ್ರಮಾದದ ಕ್ರಮಗಳಿಂದ ಸರ್ಕಾರ ದೂರವಿರಬೇಕು. ಸರ್ಕಾರದ ಕಾರ್ಯಚಟುವಟಿಕೆಗಳಲ್ಲಿ 'ಮಾನವೀಯತೆ' ಕಾಣಬೇಕು.

ಅನು:ಸಿಚಿ

NEW No. MAG(3)/NPP/205/2021-2022
JANASHAKTHI KANNADA VARA PATRIKE JUNE 19-25, 2023 Price: Rs. 10/- Date of Publication: 16 JUNE 2023 RNI No. KARKAN /2006/17926 Posted on 20-06-2023
Posted at BG PSO, BG - 560026 **Posted at Periodical Rate -** Rs. 2

ಸಮಾನತೆಯೆಡೆಗೆ 'ಉರುಳುವ ಕಲ್ಲಿನ ನೆನಪಿನ ಸುರುಳಿ' ವೀಣಾ ಮಜುಂದಾರ್ ಆತ್ಮಕತೆ ಈಗ ಕನ್ನಡದಲ್ಲಿ

ಯಾವುದೇ ಅಧ್ಯಯನಕ್ಕೆ ಬೇಕಾದ ಸೂಕ್ಷ್ಮ ಒಳನೋಟಗಳನ್ನು ಹೊಂದಿದ್ದ ವೀಣಾದಿ (ಬಹಳ ಪ್ರೀತಿಯಿಂದ ಮಹಿಳಾ ಸಂಘಟನೆಗಳ ಒಳಗೆ ಆಕೆಯನ್ನು ಕರೆಯುತ್ತಿದ್ದ ರೀತಿ) ಭಾರತದ ಮಹಿಳಾ ಚಳವಳಿಗೆ ಕೊಟ್ಟ ಕೊಡುಗೆ ಅಪಾರ. ಕ್ರಿಯಾಶೀಲತೆ ಮತ್ತು ಅಧ್ಯಯನಶೀಲತೆ ಎರಡನ್ನೂ ಒಳಗಿಳಿಸಿಕೊಂಡು ಅದನ್ನು ಮಹಿಳಾ ಅಧ್ಯಯನಕ್ಕೆ ಅನ್ವಯಿಸಿ ಒಂದು ಜೀವ ಚೈತನ್ಯದ ಸೆಲೆಯಂತೆ ಕೆಲಸ ಮಾಡಿದವರು.

ಕೆ.ಎಸ್.ವಿಮಲ

ಮಹಿಳಾ ಸಮಾನತೆಯ ಕುರಿತ ಬರಹಗಳು, ಹೇಳಿಕೆಗಳು, ಕವನಗಳು ಈಗ ಹೇರಳವಾಗಿ ಸಿಗುತ್ತಿವೆ. ಸಾಕೆನಿಸುವಷ್ಟು ಬಾರಿ ಯಾವುದೇ ಸಮಾಜದ ನಿಜ ಅಭಿವೃದ್ಧಿಯನ್ನು ಅಲ್ಲಿನ ಮಹಿಳೆಯರ ಸ್ಥಿತಿಗತಿಯ ಮೇಲೆ ನಿರ್ಧಾರಿತವಾಗುತ್ತದೆ ಎಂಬಿತ್ಯಾದಿ ಮಾತುಗಳನ್ನೂ ಕೇಳಿದ್ದೇವೆ, ಕೇಳುತ್ತಲೇ ಇದ್ದೇವೆ. ಭಾರತದಲ್ಲಿ ಆ ಸ್ಥಿತಿಗತಿಯ ಕೂಲಂಕುಷ ಅಧ್ಯಯನ, ಕಾರಣ ಮತ್ತು ಪರಿಹಾರಗಳತ್ತ ಒಂದು ಕಿರುನೋಟವನ್ನು ಸ್ಪಷ್ಟತೆಯೊಂದಿಗೆ ಕಟ್ಟಿ ಕೊಟ್ಟಿದ್ದು 'ಸಮಾನತೆಯೆಡೆಗೆ...' ಎಂಬ ಅಧ್ಯಯನ ವರದಿ. 1971ರಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲೆಂದೇ ರಚನೆಯಾದ ಮೊದಲ ಸಮಿತಿ 1974 ರಲ್ಲಿ ಕೊಟ್ಟ ವರದಿಯದು.

ಆ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದವರು ಡಾ.ವೀಣಾ ಮಝುಂದಾರ್‌ರವರು. ಕೃಷಿ ಪ್ರಾಧಾನ್ಯ ದೇಶವೊಂದು ಕೈಗಾರಿಕೀಕರಣಕ್ಕೆ ತೆರೆದುಕೊಂಡ ಹಂತದಲ್ಲಿ ಪ್ರಾರಂಭವಾದ ಬದಲಾವಣೆಗಳು, ಬಡತನದ ಬೇಗೆ ಮಹಿಳೆಯರನ್ನು ಬಾಧಿಸುವ ಪರಿ, ಪಿತೃಪ್ರಾಧಾನ್ಯ ಮೌಲ್ಯಗಳು ಹೇಗೆ ಸಮಾಜವನ್ನು ಆಕ್ರಮಿಸಿಕೊಳ್ಳುವುದರ ಒಂದೊಂದು ಮಾದರಿಯ ಭಾಗವಾಗಿ ಕುಸಿಯುತ್ತಿದ್ದ ಲಿಂಗಾನುಪಾತ ಹೀಗೆ ಮಹಿಳೆಯರ ಸ್ಥಿತಿಗತಿಯ ಅಧ್ಯಯನಕ್ಕಿರುವ ಹಲವು ಆಯಾಮಗಳನ್ನು ಈ ವರದಿಯ ಮೂಲಕ ತೆರೆದಿಟ್ಟಿತ್ತು. ಈ ವರದಿಯು ಮಹಿಳಾ ಅಧ್ಯಯನಕ್ಕೆ ಮತ್ತು ಮಹಿಳಾ ಚಳವಳಿಗೆ ಅತ್ಯಂತ ಸೂಕ್ತ ಆಕರಗಳನ್ನು ಒದಗಿಸಿತು ಎಂದರೆ ಉತ್ಪ್ರೇಕ್ಷೆಯಲ್ಲ.

ಯಾವುದೇ ಅಧ್ಯಯನಕ್ಕೆ ಬೇಕಾದ ಸೂಕ್ಷ್ಮ ಒಳನೋಟಗಳನ್ನು ಹೊಂದಿದ್ದ ವೀಣಾದಿ (ಬಹಳ ಪ್ರೀತಿಯಿಂದ ಮಹಿಳಾ ಸಂಘಟನೆಗಳ ಒಳಗೆ ಆಕೆಯನ್ನು ಕರೆಯುತ್ತಿದ್ದ ರೀತಿ) ಭಾರತದ ಮಹಿಳಾ ಚಳವಳಿಗೆ ಕೊಟ್ಟ ಕೊಡುಗೆ ಅಪಾರ. ಕ್ರಿಯಾಶೀಲತೆ ಮತ್ತು ಅಧ್ಯಯನಶೀಲತೆ ಎರಡನ್ನೂ ಒಳಗಿಳಿಸಿಕೊಂಡು ಅದನ್ನು ಮಹಿಳಾ ಅಧ್ಯಯನಕ್ಕೆ ಅನ್ವಯಿಸಿ ಒಂದು ಜೀವ ಚೈತನ್ಯದ ಸೆಲೆಯಂತೆ ಕೆಲಸ ಮಾಡಿದವರು.

ಅವರ ಆತ್ಮಕಥೆ ಇಂಗ್ಲಿಷಿನಲ್ಲಿ 'ಮೆಮೊರೀಸ್ ಆಫ್ ಎ ರೋಲಿಂಗ್ ಸ್ಟೋನ್' 2010ರಲ್ಲಿ ಪ್ರಕಟವಾಗಿದೆ. ಅದರ ಕನ್ನಡ ಅನುವಾದ 'ಉರುಳುವ ಕಲ್ಲಿನ ನೆನಪಿನ ಸುರುಳಿ'. ಎಂದಿನಂತೆ ಭಾಷಾಂತರವಿದು ಎನಿಸದಂತೆ ಸರಳ ಕನ್ನಡೀಕರಣಗೊಳಿಸಿರುವವರು ವೀಣಾ ಅವರಂತೆ ಕ್ರಿಯಾಶೀಲತೆ ಮತ್ತು ಅಧ್ಯಯನಶೀಲತೆ ಎರಡನ್ನೂ ಒಳಗಿಳಿಸಿಕೊಂಡ ಡಾ.ಎನ್.ಗಾಯತ್ರಿ. ಈ ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದ್ದು ಸದ್ಯದಲ್ಲೇ ಲೋಕಾರ್ಪಣೆಗೊಳ್ಳಲಿದೆ.


ಈ ಆತ್ಮಕಥೆ ವೀಣಾದೀ ಯವರ ಬದುಕಿನ ಹಲವು ಸಂಗತಿಗಳನ್ನು ಚಳವಳಿಯ ಜೊತೆ ಜೊತೆಯೇ ಹೆಣೆದುಕೊಳ್ಳುತ್ತ ಒಬ್ಬ ಮಹಿಳೆ ಉದ್ಯೋಗಸ್ಥಳಾಗಿ, ಕುಟುಂಬದಲ್ಲಿ ಹಲವು ಪಾತ್ರಗಳ ಏಕಾಪಾತ್ರಾಭಿನಯ ಮಾಡುವ ಕುಟುಂಬದ ಹೆಣ್ಣು ಮಗಳಾಗಿಯೂ ನಮ್ಮೆದುರು ತೆರೆದುಕೊಳ್ಳುತ್ತಾರೆ. ಹೆಣ್ಣೊಬ್ಬಳಿಗೆ ಮದುವೆ, ಕುಟುಂಬ, ಉದ್ಯೋಗ ಆಸಕ್ತ ಕ್ಷೇತ್ರಗಳು, ಸಾಧನೆಗಳು ಇವೆಲ್ಲವೂ ತುಂಬ ಸುಲಭವಲ್ಲ ಎಂಬುದನ್ನು ಕಟ್ಟಿ ಕೊಡುತ್ತಲೇ ತನ್ನ ಸಾಮರ್ಥ್ಯವನ್ನು ಸರಿಯಾಗಿ ಅರ್ಥೈಸಿಕೊಂಡರೆ, ಮತ್ತು ಗುರಿ ಗಂತವ್ಯಗಳನ್ನು ನಿರ್ದಿಷ್ಟಗೊಳಿಸಿಕೊಂಡರೆ ಅಸಾಧ್ಯವಾದುದನ್ನೂ ಸಾಧಿಸಬಹುದೆಂಬ ಕಥಾನಕವಿದೆ ಇದರಲ್ಲಿ. ಶಿಕ್ಷಣವೆಂಬುದೇ ಮರೀಚಿಕೆ ಎಂದಿದ್ದ ಹೊತ್ತಿನಲ್ಲಿ ಉನ್ನತ ಶಿಕ್ಷಣ, ಮತ್ತು ಉದ್ಯೋಗ ಅದರ ಅಗತ್ಯಗಳಾಗಿ ವಿದೇಶವೂ ಸೇರಿದಂತೆ ಬೇರೆ ಬೇರೆ ಸ್ಥಳಗಳಿಗೆ ವಲಸೆ, ಜೊತೆಗೆ ಚಿಕ್ಕ ಚಿಕ್ಕ ಮಕ್ಕಳು..ಹೀಗೆ ಭಾರತದ ಮಧ್ಯಮ ವರ್ಗದ ಕುಟುಂಬದ ಒಂದು ಸಹಜ ಬೆನ್ನಿಗಂಟಿದ ಅಂಶಗಳನ್ನು ಕೇವಲ ವೈಯಕ್ತಿಕ ಕಥಾನಕವಾಗಿಯಲ್ಲದೇ ಚಳವಳಿಯ ಕಥಾನಕವಾಗಿ ಕಟ್ಟಿದೆ ಈ ಆತ್ಮ ಕಥನ. ಅದಕ್ಕೆಂದೇ ಅವರದನ್ನು 'ಉರುಳುವ ಕಲ್ಲಿನ ನೆನಪಿನ ಸುರುಳಿ' ಎಂದು ಹೆಸರಿಸಿದ್ದಾರೆ ಎಂದು ಊಹಿಸಬಹುದು.

ಸಮಾಜವಿಂದು ಜಾರುದಾರಿಯಲ್ಲಿ ಚಲಿಸುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾನೇ ತಾನಾಗಿ ದಕ್ಕಬೇಕಿದ್ದ ಸಮಾನ ಅಧಿಕಾರ,ಅವಕಾಶಗಳು ಸಿಗದೇ, ದಶಕಗಳ ಕಾಲದ ಪ್ರಯತ್ನದ ನಂತರ ಪಡೆದ ಅಷ್ಟಿಷ್ಟು ಕೂಡಾ ಕಿತ್ತುಕೊಳ್ಳುತ್ತಿರುವ ಹೊತ್ತಿದು. ಈ ಹಂತದಲ್ಲಿ ಪಡೆದುಕೊಂಡಿದ್ದನ್ನು ಉಳಿಸಿಕೊಳ್ಳಲು ಮತ್ತು ಬಾಕಿ ಉಳಿದಿದ್ದನ್ನು ಗಳಿಸಿಕೊಳ್ಳಲು ವೀಣಾ ಮಜುಂದಾರರಂತವರ ಬದುಕಿನ ಪುಟಗಳತ್ತ ಹಾಕುವ ಹಾಯಿನೋಟ ದಾರಿ ತೋರಿಸುತ್ತದೆ.

ಅವರು ಅವರ ಸಾರ್ವಜನಿಕ ಬದುಕಿಗೆ ತೆರೆದುಕೊಂಡಿದ್ದು 1951ರಲ್ಲಿ ಪಾಟ್ನಾ ಯುನಿವರ್ಸಿಟಿಯಲ್ಲಿ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ. ನಂತರ ಅಲ್ಲಿಯ ಅಧ್ಯಾಪಕರ ಸಂಘದ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿಭಾಯಿಸಿದವರು. ನಂತರ ಒರಿಸ್ಸಾದ ಭೆಹ್ರಾಂಪುರ ಯುನಿವರ್ಸಿಟಿಯಲ್ಲಿ ಕಾರ್ಯ ನಿರ್ವಹಿಸಿದರು. ನವದೆಹಲಿಯ ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಸೆಕ್ರೆಟಾರಿಯೆಟ್ ನಲ್ಲಿ ಶಿಕ್ಷಣಾಧಿಕಾರಿಯಾಗಿ, ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್ ಶಿಮ್ಲಾದಲ್ಲಿ ರಿಸರ್ಚ್ ಫೆಲೋ ಆಗಿ ಕೆಲಸ ಮಾಡಿದವರು. ಇದೆಲ್ಲದರ ಜೊತೆಗೆ ಅವರನ್ನು ನಾವು ನೋಡುವುದು ಮಹಿಳಾ ಅಧ್ಯಯನದ ಮೂಲಸೆಲೆಯಾಗಿ. ಸ್ವಾತಂತ್ರ ಪೂರ್ವದಲ್ಲಿಯೇ ಹುಟ್ಟಿದ ಅವರಿಗೆ ಸ್ವಾತಂತ್ರ್ಯ ಹೋರಾಟದ ಮತ್ತು ಸ್ವಾತಂತ್ರ್ಯಾನಂತರದ ಘಟನೆಗಳನ್ನು ಒಳಗಿಟ್ಟುಕೊಂಡೇ ಬದುಕಿದವರು. 'ನಾನು ಹುಟ್ಟಿದ್ದು 1927ರಲ್ಲಿ. ಎಂದರೆ 20ನೇ ಶತಮಾನದ ಮುಕ್ಕಾಲು ಭಾಗ ಮತ್ತು ಇಪ್ಪತ್ತೊಂದನೇ ಶತಮಾನದ ಒಂದು ದಶಕ ಕಳೆದಿದ್ದೇನೆ. ಸ್ವಾತಂತ್ರ ಹೋರಾಟದ ನಂತರದ ದಟ್ಟವಾದ ನೆನಪುಗಳೂ ನನ್ನಲ್ಲಿವೆ, ಜೊತೆಗೆ ಭಾರತದ ಮಹಿಳಾ ಚಳವಳಿಯ 'ಎರಡನೇಯ ಅಲೆಯೊಂದಿಗೆ ವೈಯಕ್ತಿಕವಾಗಿ ತೊಡಗಿಸಿಕೊಂಡಿದ್ದೇನೆ ಎಂದು ಅವರೇ ಬರೆದುಕೊಂಡಿದ್ದಾರೆ.

ಮಹಿಳಾ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು ಅದರ ಸಂಸ್ಥಾಪಕ ನಿರ್ದೇಶಕಿಯೂ ಆಗಿದ್ದರು. ಹಾಗೆಯೇ ದೆಹಲಿಯ ಸೆಂಟರ್ ಫಾರ್ ವಿಮೆನ್ ಡೆವಲೆಪ್ಮೆಂಟ್ ಸ್ಟಡೀಸ್ ನ ನ್ಯಾಷನಲ್ ರಿಸರ್ಚ್ ಪ್ರೊಫೆಸರ್ ಆಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. ಮಹಿಳಾ ಅಧ್ಯಯನದ ಕುರಿತು ಅವರು ಹೊಂದಿದ್ದ ಅಪಾರ ಆಸಕ್ತಿ ಮತ್ತು ಬದ್ಧತೆ ಅವರ ಈ ಎಲ್ಲ ಕೆಲಸಗಳಿಗೆ ಇಂಬು ನೀಡಿತ್ತು.

ಅವರ ಈ ಆತ್ಮಕಥೆಯಲ್ಲಿ ಇದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಬಹುಶಃ ಇದರಲ್ಲಿ ರೋಚಕ ಸಂಗತಿಗಳು ಹೆಚ್ಚು ಸಿಗದಿರಬಹುದು. ಆದರೆ ಚಳವಳಿಯ ಭಾಗವಾಗಿ ಅರ್ಥ ಮಾಡಿಕೊಳ್ಳಬೇಕಾದವರಿಗೆ ಅತ್ಯಂತ ಉಪಯುಕ್ತವಾದ ಮಾಹಿತಿಗಳನ್ನು ಕೊಡುವ ಒಂದು ಕೃತಿ ಇದು. ಮಹಿಳಾ ಅಧ್ಯಯನದ ಆಸಕ್ತಿ ಇರುವವರು ಇದನ್ನು ಓದಲೇಬೇಕು.



ಪುಸ್ತಕದ ಬ್ಲರ್ಬಿನಿಂದ

ನನ್ನ ಪಾಸ್‌ಪೋರ್ಟಿನಲ್ಲಿ ನನ್ನನ್ನು ಸಮಾಜ ವಿಜ್ಞಾನಿಯೆಂದು ಪರಿಚಯಿಸಲಾಗಿದೆ. ನನ್ನನ್ನು ಬಲ್ಲ ಕೆಲವರಿಗೆ ಮಾತ್ರ ನಾನು ಹಾಗೆಂದು ಗೊತ್ತು. ಆದರೆ ಅನಿರ್ದಿಷ್ಟ ವಲಯಗಳಲ್ಲಿ ನಾನು ಹೆಚ್ಚು ಪರಿಚಿತಳಾಗಿರುವುದು 'ಮಹಿಳಾ ಕಾರ್ಯಕರ್ತೆ', 'ಸ್ತ್ರೀವಾದಿ', 'ಸಮಸ್ಯೆಗಳನ್ನು ಸೃಷ್ಟಿಸುವವಳು' ಮತ್ತು 'ಜೆಂಡರ್ ಪರಿಣತಳು' ಎಂಬುದಾಗಿ. ನನಗೆ ಅಂಟಿಕೊಂಡಿರುವ ಈ ಎಲ್ಲಾ ವಿವರಣೆಗಳಲ್ಲಿ ನನಗೆ ಹೆಚ್ಚು ಪ್ರಿಯವಾಗುವುದು 'ಭಾರತದ ಮಹಿಳಾ ಚಳುವಳಿಯ ದಾಖಲಾತಿದಾರಳು' ಮತ್ತು 'ದಕ್ಷಿಣ ಏಷ್ಯಾದಲ್ಲಿ ಮಹಿಳಾ ಅಧ್ಯಯನದ ಅಜ್ಜಿ' ಎಂಬುವು. ...

... ಚರಿತ್ರೆ ಯಾವಾಗಲೂ ನನ್ನ ಮೊದಲ ಪ್ರೀತಿಪಾತ್ರ ವಿಷಯ. ಚರಿತ್ರೆಯ ಇತರ ಪ್ರೇಮಿಗಳೂ ಕೂಡ ನನ್ನ ಈ ನೆನಪುಗಳ ಕಥನದಲ್ಲಿ ಸ್ವಲ್ಪವಾದರೂ ಆಸಕ್ತಿಯನ್ನು ತೋರಿಸುತ್ತಾರೆಂದು ಆಶಿಸುವೆ. ಮೂಲಭೂತವಾಗಿ ಈ ಪುಸ್ತಕವು ನನ್ನ ಜೀವನವನ್ನು ಮತ್ತು ನನ್ನ ಕಾಲವನ್ನು ಪ್ರಭಾವಿಸಿದ ವ್ಯಕ್ತಿಗಳಿಗೆ ನಾನು ನೀಡುವ ಕಾಣಿಕೆ. ...

... 10,000ಕ್ಕಿಂತಲೂ ಹೆಚ್ಚು ಮಹಿಳೆಯರು ನನಗೆ 1970ರ ನಂತರ ಗುರುಗಳಾಗಿದ್ದಾರೆ. ಭಾರತವು ಮರೆತ ಬಹುಸಂಖ್ಯಾತರಿವರು. ಮಹಿಳೆಯರ ಹೋರಾಟ ಮತ್ತು ಮಹಿಳಾ ಅಧ್ಯಯನವೆಂಬ ಎರಡು ಚಳುವಳಿಗಳ ಮೂಲಕ ನಾನು ಅವರ ಹೋರಾಟವನ್ನು ಕೈಗೆತ್ತಿಕೊಂಡಿದ್ದೇನೆ.

–ವೀಣಾ ಮಝುಮ್ದಾರ್

ಭಾರತದಲ್ಲಿ ಮಹಿಳಾ ಅಧ್ಯಯನ ಮತ್ತು ಮಹಿಳಾ ಚಳುವಳಿಯ ಪರಿಚಯವಿರುವವರಿಗೆಲ್ಲಾ ವೀಣಾ ಮಝುಂದಾರ್ ಚಿರಪರಿಚಿತವಾದ ಹೆಸರು. ಈ ಎರಡೂ ಅವಳಿ ಚಳುವಳಿಗಳಿಗೆ ಮಹತ್ವದ ಕಾಣಿಕೆಯನ್ನು ನೀಡಿರುವ ಮತ್ತು ಭಾರತದ ಮಹಿಳಾ ಚಳುವಳಿಯ ಪ್ರಮುಖ ಘಟನೆಗಳಿಗೆ ಸಾಕ್ಷಿಯಾಗಿರುವುದು ಮಾತ್ರವಲ್ಲದೆ ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ಭಾರತದ ಮಹಿಳಾ ಚಳುವಳಿಯೊಂದಿಗೆ ಪಯಣಿಸಿರುವ ವೀಣಾ ಈ ದೇಶದ ಮಹಿಳಾ ಸಮುದಾಯದ ಸಾಕ್ಷಿಪ್ರಜ್ಞೆಯಾಗಿದ್ದಾರೆ.

–ಎನ್. ಗಾಯತ್ರಿ

'ಉರುಳುವ ಕಲ್ಲಿನ ನೆನಪಿನ ಸುರುಳಿ': ಮೂಲ–ಡಾ.ವೀಣಾ ಮಜುಂದಾರ್; ಅನುವಾದ: ಡಾ.ಎನ್.ಗಾಯತ್ರಿ; ಪ್ರಕಾಶಕರು: ಕ್ರಿಯಾ ಮಾಧ್ಯಮ; ಬೆಲೆ: ರೂ. 320 ಪ್ರತಿಗಳಿಗೆ ಸಂಪರ್ಕಿಸಿ : 96060 16471/2/3/4

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**